
ಶತಮಾನೋತ್ಸವದ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಹೊರತರುತ್ತಿರುವ

# ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ

ಅವರ ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಅಕಾಡೆಮಿ

ಬೆಂಗಳೂರು

ಶತಮಾನೋತ್ಸವ ಸಂದರ್ಭದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಹೊರತರುತ್ತಿರುವ

# ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ

## ಅವರ ವ್ಯಕ್ತಿ ಪರಿಚಯ

ಎಂ.ಕೆ. ರಮಾದೇವಿ ಎಂ.ಎ.

ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# JANAPADA TAGNA MATTIGHATTA KRISHNAMURTHY

**Editor: M.K. Ramadevi** M.A., 59, Pacchethane, 4th Main Road, AGS Layout, New B.E.L. Road, Bangalore -54. Mob. : 9742491977


| | | |
|---|---|---|
| Published by | : | **B.N. Paraddi**<br>Registrar<br>Karnataka Janapada Academy<br>Kannada Bhavana, J.C. Road<br>Bangaluru-560 002, Ph : 080-22215509 |
| Pages | : | xiv+56+8(Colour pages)=78 |
| First Impression | : | 2012 |
| Paper | : | N.S. 70 GSM |
| Price | : | Rs. 20/- |
| © | : | Karnataka Janapada Academy |
| Size | : | 1/8 Demy |

| | | |
|---|---|---|
| ಪುಟಗಳು | : | xiv+೫೬+೮(ವರ್ಣ ಪುಟಗಳು)=೭೮ |
| ಮೊದಲ ಮುದ್ರಣ | : | ೨೦೧೨ |
| ಕಾಗದ | : | ಎನ್.ಎಸ್. ೭೦ ಜಿ.ಎಸ್.ಎಂ. |
| ಬೆಲೆ | : | ೨೦/- ರೂ. |
| © | : | ಕರ್ನಾಟಕ ಜಾನಪದ ಅಕಾಡೆಮಿ |
| ಸೈಜ್ | : | ೧/೮ ಡೆಮಿ |
| ಅಕ್ಷರ ವಿನ್ಯಾಸ | : | ರಶ್ಮಿ ಹೆಚ್.ಕೆ. |
| ಪ್ರಕಾಶಕರು | : | ಬಿ.ಎನ್. ಪರಡ್ಡಿ<br>ರಿಜಿಸ್ಟ್ರಾರ್<br>ಕರ್ನಾಟಕ ಜಾನಪದ ಅಕಾಡೆಮಿ<br>ಕನ್ನಡ ಭವನ, ಜೆ.ಸಿ. ರಸ್ತೆ<br>ಬೆಂಗಳೂರು-೫೬೦ ೦೦೨. |
| ಮುದ್ರಕರು | : | ಮೋಹನ್ ಗ್ರಾಫಿಕ್ಸ್<br>ನಂ. ೪೦, ರಾಜಗೋಪಾಲನಗರ ಮುಖ್ಯರಸ್ತೆ<br>ಪೀಣ್ಯ ೨ನೇ ಹಂತ, ಬೆಂಗಳೂರು-೫೮. |

# ಮುನ್ನುಡಿ

ನಮ್ಮ ಜನಪದ ಹೆಣ್ಣಿನ ಹೃದಯದಿಂದ ಹೊಮ್ಮಿದ ಒಂದು ತಂಪಾದ ತ್ರಿಪದಿಯಿದೆ: ತಂದೇಯ ನೆನೆದಾರೆ ತಂಗಾಳಿ ಬಿಸಿಯಾಯ್ತು, ಗಂಗಾದೇವಿಯಂಥ ಹಡದವ್ವನ ನೆನೆದಾರೆ ಮಾಸೀದ ಮುಡಿಯು ಮಡಿಯಾಯ್ತು! ಪ್ರಸ್ತುತದ "ಜಾನಪದ ಭೀಷ್ಮ ಮತಿಘಟ್ಟ ಕೃಷ್ಣಮೂರ್ತಿ" ಕೃತಿ, ಒಬ್ಬ ಪ್ರೀತಿಯ ಮಗಳು ಹೀಗೆ ತಂದೆ ತಾಯಿಯನ್ನು ನೆನೆದು ನಿರೂಪಿಸಿರುವ ಒಂದು ಜೀವನ ಕಥನ. ಕನ್ನಡ ಜಾನಪದ ಕ್ಷೇತ್ರದಲ್ಲಿ ಅವಿರಳವಾಗಿ ಸ್ಮರಿಸಬೇಕಾದ ಒಂದು ವಿರಳ ಹೆಸರು, ಮತಿಘಟ್ಟ ಕೃಷ್ಣಮೂರ್ತಿ. ಅವರ ಮಗಳು ಎಂ.ಕೆ. ರಮಾದೇವಿ ತಮ್ಮ ತಂದೆಯವರ ವಾತ್ಸಲ್ಯಕ್ಕೆ ಈ ಕೃತಿ ರೂಪದಲ್ಲಿ ಪ್ರೀತಿಯ ಕಾಣಿಕೆ ಸಲ್ಲಿಸಿದ್ದಾರೆ.

ಜಾನಪದ ಕ್ಷೇತ್ರಕಾರ್ಯ ಮಾಡುವವರಿಗೆ, ಜಾನಪದಕ್ಕೇ ತಮ್ಮ ಬದುಕನ್ನು ಮುಡಿಪಾಗಿಟ್ಟ ಇಂತಹ 'ಮಾದರಿ'ಗಳ ಪರಿಚಯ ತುಂಬ ಅಗತ್ಯ. ರಮಾದೇವಿ ಅವರು ಈ ಕೃತಿಯಲ್ಲಿ ಅತ್ಯಂತ ವಸ್ತುನಿಷ್ಠವಾಗಿ ಆ ಅಗತ್ಯವನ್ನು ಪೂರೈಸಿದ್ದಾರೆ. ಇಲ್ಲಿನ ನಿರೂಪಣೆಯೂ ಸಹ ಜನಪದ ಸಾಹಿತ್ಯದಂತೆಯೇ ಸಹಜವಾಗಿದೆ; ಸರಳವಾಗಿದೆ; ಆತ್ಮೀಯವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿ ಅವರ ಜನನದಿಂದ ಹಿಡಿದು ಅವರ ಕೊನೆಯುಸಿರಿನವರೆಗೂ ಘಟಿಸಿದ ಬಹುತೇಕ ಸಂದರ್ಭಗಳನ್ನು ಲೇಖಕಿ ಈ ಜೀವನ ಕಥಾನಕದಲ್ಲಿ ದಾಖಲಿಸಿದ್ದಾರೆ. ನಮಗೆಲ್ಲ 'ಮತಿಘಟ್ಟ' ಎಂದಷ್ಟೇ ಬಳಕೆಯಾಗಿದ್ದ ಕೃಷ್ಣಮೂರ್ತಿ ಅವರು ಸಮಾಗತ ಸಂಪ್ರದಾಯಸ್ಥ ಮನೆತನದಿಂದ ಬಂದರೂ ಸಮೀಚೀನ ಸಮಕಾಲೀನತೆಯನ್ನು ಅಪ್ಪಿಕೊಂಡವರು. ಮತಿಘಟ್ಟದಂತಹ ಹಳ್ಳಿಯ ನೆಲದಲ್ಲಿ ಹುಟ್ಟಿ ಬೆಳೆದು, ಬೆಂಗಳೂರಿನಂತಹ ಮಹಾನಗರದ ಮಹಡಿಗೆ ಹಬ್ಬಿದ ಈ ರಸಬಳ್ಳಿ ಜಾನಪದವನ್ನೇ ಉಸಿರಾಗಿಸಿಕೊಂಡದ್ದು ಒಂದು ವಿಶೇಷ.

ವರ್ಷಗಟ್ಟಲೆ ಮನೆಬಿಟ್ಟು, ಊರೂರು ಕಾಡುಮೇಡು ತಿರುಗಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿರುವ ಮತಿಘಟ್ಟ ಕೃಷ್ಣಮೂರ್ತಿ ಅವರು ಲೋಕಜ್ಞಾನದ ಸ್ನಾತಕೋತ್ತರ ಪದವಿ ಪಡೆದವರು. 'ಜನಪದ ಸಾಹಿತ್ಯ ಮತ್ತು ನಾನು' ಎಂಬ ಅವರ ಅನುಭವ ಕಥನವೇ ಇಂದಿನ ಜಾನಪದ ಕ್ಷೇತ್ರದ ಕಾರ್ಯಕರ್ತರಿಗೆ ದಾರಿದೀಪವಾಗಿದೆ. ಅವರ ಸಂಗ್ರಹದ ನಾಡಪದಗಳು, ನಮ್ಮ ಹಳ್ಳಿಯ ಹಾಡುಗಳು, ಏಳು ಕೊಳ್ಳದ ಯಲ್ಲಮ್ಮ, ಗೀತೆಗಳು, ಕೋಲಾಟದ ಹಾಡುಗಳು, ಗೃಹಿಣೀ ಗೀತೆಗಳು, ಕಿರುಲಾವಣಿಗಳು – ಇತ್ಯಾದಿ ಕೃತಿಗಳೆಲ್ಲ ಕನ್ನಡ ಜನಪದ ಸಾಹಿತ್ಯ ಕಣಜಕ್ಕೆ ಸೇರಿರುವ ಗಟ್ಟಿ ಧಾನ್ಯಗಳು. ಜಾನಪದ ಛಂದಸ್ಸನ್ನು ಕುರಿತ ಅವರ ಅಧ್ಯಯನವೂ ಅಷ್ಟೇ ಅಮೂಲ್ಯವಾದದ್ದು.

ಮತಿಘಟ್ಟ ಕೃಷ್ಣಮೂರ್ತಿ ಅವರ ಸಂಪರ್ಕ ನನಗೆ ಬಂದದ್ದು ೧೯೬೭ರಲ್ಲಿ; ತರೀಕೆರೆಯಲ್ಲಿ ನಾವು ಸಂಘಟಿಸಿದ್ದ ಅಖಿಲ ಕರ್ನಾಟಕ ಪ್ರಥಮ ಜನಪದ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ. ಆ ಸಮ್ಮೇಳನ ಸಂದರ್ಭದ 'ಹೊನ್ನ ಬಿತ್ತೇವು ಹೊಲಕೆಲ್ಲ' ಸ್ಮರಣ ಗ್ರಂಥಕ್ಕೆ 'ತರೀಕೆರೆಯ ಪಾಳೇಗಾರರು' ಎಂಬ ಗಂಭೀರ ಸಂಶೋಧನೆಯ ಲೇಖನವೊಂದನ್ನು ಕೊಟ್ಟಿದ್ದರು. ಆ ದಾಖಲೆಯ ಬೃಹತ್ ಗ್ರಂಥದಲ್ಲಿ ಮತಿಘಟ್ಟ ಅವರದೇ ಮೊದಲ ಲೇಖನ. ಅಂದಿನಿಂದ ನನಗೆ ಅವರೊಡನೆ ಬೆಳೆದು ಬಂದ ಸ್ನೇಹ ಸಂಬಂಧದ ನೆನಪೇ ಈ 'ಮುನ್ನುಡಿ' ಎಂದರೂ ಸಲ್ಲುತ್ತದೆ.

ಮತಿಘಟ್ಟ ಕೃಷ್ಣಮೂರ್ತಿ ಅವರದು ಅತಿಶಯದ ಪ್ರತಿಭೆ. ಕಾದಂಬರಿಕಾರರಾಗಿ, ನಾಟಕಕಾರರಾಗಿ, ಕವಿಯಾಗಿ, ವಿಮರ್ಶಕರಾಗಿ, ಪತ್ರಕರ್ತರಾಗಿ, ನಾಯಕರಾಗಿ ಸಾಹಿತ್ಯ–ಸಂಸ್ಕೃತಿಗಳ ಸೇವೆ ಸಲ್ಲಿಸಿರುವಂತೆ, ತಮ್ಮ ಹುಟ್ಟೂರು ಮತಿಘಟ್ಟದಲ್ಲಿ ಕೃಷಿಕಾಯಕ ಮಾಡಿದ್ದಾರೆ. ಗ್ರಾಮ ಸಮುದಾಯದ ಕ್ಷೇಮಕ್ಕೆ ದುಡಿದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿ ಸೆರೆಮನೆ ವಾಸ ಅನುಭವಿಸಿದ್ದಾರೆ. ಖಾದಿ ಪ್ರಚಾರ, ವಯಸ್ಕರ ಶಿಕ್ಷಣ ಸೇವೆ ಸಲ್ಲಿಸಿದ್ದಾರೆ. ಕನ್ನಡ ಮಾಧ್ಯಮ ಶಾಲೆ ನಡೆಸಿದ್ದಾರೆ. ಕನ್ನಡಪರ ಚಳವಳಿಗಳಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದ್ದಾರೆ. ಮಾಸ್ತಿ, ಬೇಂದ್ರೆ, ಅ.ನ.ಕೃ. ಕರೀಂಖಾನ್ ಅವರಂತಹ ಹಿರಿಯರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಆ ಹೆಸರಿನಲ್ಲಿ ಸರ್ಕಾರದಿಂದ ಯಾವುದೇ ಸವಲತ್ತು ಪಡೆಯದೆ ಸ್ವಾಭಿಮಾನಿಯಾಗಿದ್ದಾರೆ.

ಲೇಖಕಿ ರಮಾದೇವಿ ಅವರು ತಮ್ಮ ತಂದೆಯ ಜೀವಮಾನದಲ್ಲಿ ನಡೆದ, ಜಾನಪದೀಯವೇ ಎನಿಸುವ, ಅನೇಕ ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಉದಾಃ ಹಾವು ಹೊಕ್ಕ ಮನೆಗೆ ದೋಷ ನಿವಾರಣೆಗೆ ಶಾಂತಿ ಮಾಡಿಸುವುದು, ಬಂಧುವೊಬ್ಬರ

ಮನೆಗೆ ಬಂದ ಕಷ್ಟಗಳ ಪರಿಹಾರಕ್ಕೆ ಕೇರಳದ ಬ್ಯಾರಿಯಿಂದ ಅಂಜನ ಹಾಕಿಸುವುದು, ಹುಟ್ಟಿದ ಮಗುವಿನ ನಕ್ಷತ್ರದೋಷದ ಪರಿಹಾರವಾಗಿ ತಂದೆ–ಮಗು ಒಂದು ವರ್ಷ ಒಂದೇ ಕಡೆ ಇರಬಾರದೆಂದು ಶಾಸ್ತ್ರಿಗಳು ಹೇಳುವುದು, ಮಳೆಬಂದು ಕೆಂಪಾಗಿದ್ದ ಕೆರೆನೀರಿನಲ್ಲಿ ಅಂಗಿ ತೊಳೆದದ್ದು, ಬಿಟ್ಟಿದ್ದ ಜಡೆಯನ್ನು ಹಟ್ಟಿಯ ಹುಡುಗಿಯರು ಕತ್ತರಿಸಿದ ಮೇಲೆ ಮತಿಘಟ್ಟ ಅವರು ಕ್ರಾಮು ಬಿಟ್ಟಿದ್ದು, ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಪೊಲೀಸರ ಕಣ್ಣುತಪ್ಪಿಸಿ ಹೋರಾಟದ ಸಾಹಿತ್ಯವನ್ನು ಹಂಚಿದ್ದು ಇತ್ಯಾದಿ. ರಮಾದೇವಿ ಅವರು ಮತಿಘಟ್ಟ ಅವರ ಕೃತಿಗಳ ಹೆಸರು ಹೇಳುತ್ತಲೇ ಕೆಲವು ಕೃತಿಗಳ ಸಂಕ್ಷಿಪ್ತ ಪರಿಚಯವನ್ನೂ ಕೊಟ್ಟಿದ್ದಾರೆ. ಕೃತಿಯ ಕೊನೆಯಲ್ಲಿ ಅನುಬಂಧವಾಗಿ ಮತಿಘಟ್ಟ ಕೃಷ್ಣಮೂರ್ತಿ ಕುಟುಂಬದ ಸದಸ್ಯರು, ಅವರ ಪ್ರಕಟಣೆಗಳು, ಅಪ್ರಕಟಿತ ಸಾಹಿತ್ಯ, ಪ್ರಶಸ್ತಿ–ಸನ್ಮಾನ ಸಂದರ್ಭಗಳ ವಿವರಗಳನ್ನು ಒದಗಿಸಿದ್ದಾರೆ.

ರಮಾದೇವಿ ಅವರು ಮೂಲತಃ ಜೀವನ ಚರಿತ್ರಕಾರರೇನಲ್ಲ. ಆದರೂ ಒಂದು ಜೀವನ ಚರಿತ್ರೆಯನ್ನು ಎಷ್ಟು ವಾಸ್ತವವಾಗಿ, ಅಚ್ಚುಕಟ್ಟಾಗಿ ನಿರೂಪಿಸ ಬಹುದೆಂಬುದನ್ನು ತಮ್ಮ ಈ ಕೃತಿಯ ಮೂಲಕ ತೋರಿಸಿದ್ದಾರೆ. ಕೃತಿ ರಚನೆಗಾಗಿ ನಾನಾ ಮೂಲಗಳಿಂದ ಅಗತ್ಯ ಮಾಹಿತಿ ಸಂಗ್ರಹಿಸಿದ್ದಾರೆ. ತಂದೆ ಜಾನಪದಕ್ಕೆ ತಮ್ಮನ್ನು ಅರ್ಪಿಸಿಕೊಂಡವರಾಗಿದ್ದರೆ, ಈ ಮಗಳು ತಂದೆಯ ಪ್ರೀತಿ–ವಾತ್ಸಲ್ಯಗಳಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆನ್ನಬಹುದು. ಈ ಮೂಲಕ ರಮಾದೇವಿ ಅವರಿಂದ ಜಾನಪದಕ್ಕೂ ಸೇವೆ ಸಂದಂತಾಗಿದೆ.

ಸ್ವಾರಸ್ಯಕ್ಕಾಗಿ: ರಮಾದೇವಿ ಅವರು ತಮ್ಮ ತಂದೆಯ ಬಾಲ್ಯದ ಕಾಲದ ಸ್ಥಿತಿಗತಿಗಳನ್ನು ಹೇಳುತ್ತಾ, ಕೊಡುವ ಮಾಹಿತಿ – "ಒಂದು ಮಣ ಬೆಲ್ಲಕ್ಕೆ ೪ ಆಣೆ, ಒಂದು ಮಣ ಹತ್ತಿಗೆ ೪ ಆಣೆ, ಒಂದು ಪಲ್ಲ ರಾಗಿಗೆ ೨ ೧/೨ ರೂಪಾಯಿ, ಒಂದು ರೂಪಾಯಿಗೆ ೨೬–೨೮ ಸೇರು ಅಕ್ಕಿ, ೧೦೦ ತೆಂಗಿನಕಾಯಿಗಳಿಗೆ ೧೮ ರೂಪಾಯಿ. ೩೦–೪೦ ಪಲ್ಲ ರಾಗಿ ಬೆಳೆದರೂ ರೈತನಿಗೆ ಸಿಕ್ಕುತ್ತಿದ್ದುದು ೧೫೦ ರೂಪಾಯಿ". ಬಹುಶಃ ಇದನ್ನು ಕೇಳಿದವರಿಗೆ ಇದೂ ಒಂದು 'ಜನಪದ ಕತೆ'ಯೇ ಎನಿಸಿದರೂ ಅನಿಸಬಹುದು!

ತೊಂಬತ್ತಮೂರು ವರ್ಷಗಳ ತುಂಬಿದ ಜೀವನ ನಡೆಸಿದ ಮತಿಘಟ್ಟ ಕೃಷ್ಣಮೂರ್ತಿ ಅವರು 'ಬಡತನ ನನಗಿರಲಿ, ಬಾಳ ಮಕ್ಕಳಿರಲಿ, ಬಡತನದ ಚಿಂತೆ ನಿನಗಿರಲಿ' ಎಂಬ ನಮ್ಮ ಜನಪದರ ಸೊಲ್ಲಿನಂತೆ ಹತ್ತು ಮಕ್ಕಳ ತಂದೆ – ಒಂಬತ್ತು ಹೆಣ್ಣು ; ಒಂದು ಗಂಡು. ಜಾನಪದದ ಹುಚ್ಚು ಹಚ್ಚಿಕೊಂಡು ಊರು –ಕೇರಿ ಅಡ್ಡಾಡಿದರೂ ಮಕ್ಕಳ ಕಕ್ಕುಲತೆಯಿಂದ ಹೊರಗಾದವರಲ್ಲ. ಊರಿನವರಿಗೆಲ್ಲ 'ಮರಿ ಅಯ್ಯ' ಆಗಿದ್ದ

ಮತಿಘಟ್ಟ ಕೃಷ್ಣಮೂರ್ತಿ ಜಾನಪದದ ಅಂಗಳದಲ್ಲಿ 'ಹಿರಿ ಅಯ್ಯ'ಗಳ ಸಾಲಿನಲ್ಲಿ ನಿಂತದ್ದು ಅಭಿಮಾನದ ಸಂಗತಿ.

ಗಾಂಧಿ ಸಿದ್ಧಾಂತದ, ಜಾನಪದ ಶುದ್ಧಾಂತಃಕರಣದ ಮತಿಘಟ್ಟ ಕೃಷ್ಣಮೂರ್ತಿ ಅವರ ಹೆಸರನ್ನು ನಿತ್ಯ ನೆನಪಾಗಿ ಉಳಿಸಿರುವ ರಮಾದೇವಿ ಅವರನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ.

ಈ ಕೃತಿಯನ್ನು ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯವರು ಪ್ರಕಟಿಸುತ್ತಿರುವುದು ತುಂಬ ಸಮರ್ಥವಾಗಿದೆ.

ಬೆಂಗಳೂರು
೨೫-೦೭-೨೦೧೨

**ಗೊ.ರು. ಚನ್ನಬಸಪ್ಪ**
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರು ನನಗೆ ಸುಮಾರು ಮೂವತ್ತು ವರ್ಷಕ್ಕೆ ಮೀರಿದ ಪರಿಚಯ. ಶ್ರೀಯುತರು ಕನ್ನಡ ನಾಡಿನ ಜಾನಪದ ಲೋಕದ ಹಿರಿಯಣ್ಣ. ಆರಂಭದ ಜಾನಪದ ಸಂಗ್ರಹಕಾರರಾಗಿ ಶ್ರೀಯುತರು ಮಾಡಿದ ಕೆಲಸ ಸಂಗ್ರಹಿಸಿದ ಜನಪದಗೀತೆ ಸಾಹಿತ್ಯಕ್ಕೆ ಬೆಲೆ ಕಟ್ಟಲಾರದ ಬಂಗಾರ. ಹಾಸನ ಜಿಲ್ಲೆಯ ಒಂದು ಪುಟ್ಟಹಳ್ಳಿಯಲ್ಲಿ ಜನಿಸಿ, ತನ್ನ ಪರಿಸರ ಹಾಡು. ಕಥಾ ಸಂಪನ್ನತೆಗೆ ಮನಸೋತು, ಅಭಿಮಾನ – ಅಕ್ಕರೆಯಿಂದ– ಜನಪದ ಸಾಹಿತ್ಯ ಸಂಪತ್ತಿಗೆ ಉಳಿಸುವ ದಾಖಲಿಸುವ ಕೆಲಸಕ್ಕೆ ತಮ್ಮನ್ನು ತಾವು ಒಪ್ಪಿಸಿಕೊಂಡ ಬಗೆ, ನಿಜಕ್ಕೂ ಅಪೂರ್ವವಾದುದು. ಏಕೆಂದರೆ ಜಾನಪದ ಎಂದರೆ ಮೂಗು ಮುರಿಯುತ್ತಿದ್ದ ಆ ಕಾಲ ಘಟ್ಟದಲ್ಲೇ, ಫಲಾಪೇಕ್ಷೆ ಇಲ್ಲದೆ, ಹಳ್ಳಿ ಹಳ್ಳಿ ತಿರುಗಿ, ಶಿಷ್ಟ – ಪರಿಶಿಷ್ಟವೆಂಬ ಭಾವವನ್ನೂ ದೂರ ತಳ್ಳಿ, ಗ್ರಾಮಗಳಲ್ಲಿ ಲಭ್ಯವಾಗುವ ಜನಪದ ಕತೆ, ಹಾಡು, ಗಾದೆ, ಒಗಟುಗಳನ್ನು ಸಂಗ್ರಹಿಸಿ – ಪ್ರಕಟಿಸುವ ಹೃದಯ ತೋರಿದ್ದು, ಇಂದು ಜಾನಪದ ಕ್ಷೇತ್ರ ಶ್ರೀಮಂತವಾಗಿ ಬೆಳೆಯಲು ಪ್ರಮುಖ ಕಾರಣ. ಇವರಿಂದಾಗಿಯೇ ಹಾಡುವ ಕಂಠಗಳಿಗೆ, ಬೋಧಿಸುವ ಬೋಧಕ ವರ್ಗಕ್ಕೆ, ಶ್ರೀ ಮತಿಘಟ್ಟ ಕೃಷ್ಣಮೂರ್ತಿ ತೀರಾ ಹತ್ತಿರವಾಗುತ್ತಾರೆ. ಜಾನಪದ ವಾಙ್ಮಯ ಲೋಕದಲ್ಲಿ ಶಾಶ್ವತವಾಗಿ ನಿಲ್ಲುತ್ತಾರೆ.

ಕರ್ನಾಟಕ ಜಾನಪದ ಅಕಾಡೆಮಿ ತನ್ನ ಕಾರ್ಯಕ್ಷೇತ್ರದ ಹಾದಿಯಲ್ಲಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಸದಾ ಮಾಡುತ್ತಾ ಬರುತ್ತಿದೆ. ಈ ಜಾನಪದ ಸಂಬಂಧಿ ಕಾರ್ಯದ ಹಾದಿಯಲ್ಲಿ; ಹಿರಿಯರನ್ನು ಸ್ಮರಿಸುವ, ಗೌರವಿಸುವ, ಸತ್ ಪರಂಪರೆಯೂ ಒಂದು. ಆ ಸಾಲಿನಲ್ಲಿ ನೂರು ವರ್ಷ ಪೂರೈಸಿದ ಹಿರಿಯ ಜಾನಪದ ವಿದ್ವಾಂಸ, ಕಲಾವಿದ, ಸಂಗ್ರಹಕಾರರ ಸ್ಮರಣೆಯೂ ಒಂದಾಗಿದೆ. ಶತಮಾನದ ಹೆಸರಲ್ಲಿ, ಈ ಹಿರಿಯರನ್ನು, ನೆನೆಯುವ ಅಪೂರ್ವ ಅವಕಾಶ ಈ ಮಾಲೆಯಲ್ಲಿದೆ. ಈ ಸಂದರ್ಭದಲ್ಲಿ, ಶತಮಾನ ಪೂರೈಸಿದ ಹಿರಿಯರ ನೆನೆಪಿನ ವಿಚಾರ ಸಂಕಿರಣದಲ್ಲಿ, ಶತಮಾನ ಪೂರೈಸಿದ ಹಿರಿಯರ ನೆನೆಪಿನ ವಿಚಾರ ಸಂಕಿರಣ ಸಾಂಸ್ಕೃತಿಕ ಕಾರ್ಯಕ್ರಮ, ಅವರ ಹೆಸರಿನಲ್ಲಿ ಗ್ರಂಥವೊಂದರ ಪ್ರಕಟಣೆ – ಈ ಮಾಲೆಯ ಕೆಲಸಗಳು. ಈ

ಮೂಲಕ ಸಮಕಾಲೀನ ಹಿರಿ – ಕಿರಿಯ ಜಾನಪದಾಸಕ್ತ ಸಮುದಾಯಕ್ಕೆ; ಮಾಡಿ – ಮಡಿದವರ ಪರಿಚಯ, ಜಾನಪದ ಸಂಸ್ಕೃತಿಯ ಮನನ, ಆಗಿರುವ ಬಗೆಗೆ ಒಂದು ಪುನರ್ ಅವಲೋಕನ ಈ ಮೂಲಕ ನಡೆಯುತ್ತಿರುವುದು ಒಳ್ಳೆಯದು ಎಂಬ ಅಭಿಪ್ರಾಯ ನಮ್ಮದು.

ಈ ಹಿಂದಿನ ಎಲ್ಲ ಅಧ್ಯಕ್ಷರು ಮಾಡಿಕೊಂಡು ಬಂದ ಪರಂಪರೆ, ತುಳಿದ ಹಾದಿಯಲ್ಲೇ ಸಾಗುವ, ಕಾಲಮಾನಕ್ಕೆ ತಕ್ಕ ಹಾಗೆ, ಬೇಕು ಅಂದೆನಿಸುವ, ಕ್ರಿಯೆ – ಪ್ರತಿಕ್ರಿಯೆಗಳಿಗೆ ಸದಾ ಕಿವಿ ಆನಿಸುತ್ತಾ ಸಮುದಾಯದ ಆಶಯಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವುದು. ನಮ್ಮ ಜವಾಬ್ದಾರಿ ಎಂಬ ಅರಿವಿನ ಒಳಗೆ, ಕಾರ್ಯನಿರ್ವಹಿಸುವುದು ನಮ್ಮ ಗುರಿ. ಈ ಹಿನ್ನೆಲೆಯಲ್ಲಿ ಜನಪದ ಕಲಾ ಪ್ರದರ್ಶನ, ಪ್ರಸಾರ ಕಲಾವಿದರ ಗೌರವ – ಇವುಗಳ ಜೊತೆಗೆ ಪ್ರಕಟಣೆಯ ಕಾರ್ಯವೂ ನಿತಂತರವಾಗಿ ಮುಂದುವರಿಯುತ್ತಿದೆ. ಹಿರಿಯ ಜಾನಪದ ಕ್ಷೇತ್ರ ಕಾರ್ಯತಜ್ಞರು, ನಮ್ಮ ನಡುವಣ ಅತ್ಯುತ್ತಮ ಸಂಸ್ಕೃತಿ ಚಿಂತಕರೂ ಆದ, ದಿ. ಮತಿಘಟ್ಟ ಕೃಷ್ಣಮೂರ್ತಿ ಅವರ ಶತಮಾನೋತ್ಸವದ; ಸಂದರ್ಭಕ್ಕೆ ಅವರ ಮಗಳು ಶ್ರೀಮತಿ ಎಂ.ಕೆ. ರಮಾದೇವಿ ಅವರು ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಕುರಿತು "ಜಾನಪದ ಭೀಷ್ಮ" ಎಂಬ ಕಿರು ಹೊತ್ತಿಗೆಯನ್ನು ಸಿದ್ಧಪಡಿಸಿ ಕೊಟ್ಟಿದ್ದಾರೆ. ಇದೊಂದು ಕಿರುಪುಸ್ತಕವಾದರೂ ಮತಿಘಟ್ಟ ಕೃಷ್ಣಮೂರ್ತಿ ಅವರ ಬದುಕು, ಬರಹಗಳ ಹಿಂದಿನ ಪರಿಶ್ರಮ, ಶ್ರಮಿಸಿದ ಹಾದಿ, ಕೌಟುಂಬಿಕ ಪರಿಸ್ಥಿತಿ, ಸೃಜನಶೀಲ ಸಾಹಿತ್ಯದ ವಿವರ, ಇವುಗಳ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಾಗಿ ಕೃಷ್ಣಮೂರ್ತಿಯವರ ಸಾಧನೆ – ಈ ವಿವರಗಳ ಒಂದು ನೋಟವನ್ನು ತುಂಬಾ ಪರಿಣಾಮಕಾರಿಯಾಗಿ ದಾಖಲಿಸಿದ್ದಾರೆ. ಹಾಗಾಗಿ ಇದೊಂದು ಜಾನಪದ ಹಿರಿಯಣ್ಣ ಮತಿಘಟ್ಟ ಕೃಷ್ಣಮೂರ್ತಿಯವರ ಜಾನಪದ ವಾಚಿಕೆಯೂ ಆಗಿದೆ. ಇಂಥದೊಂದು ಒಳ್ಳೆಯ ಪುಸ್ತಕವನ್ನು ಅಕಾಡೆಮಿಯ ಪ್ರಕಟಣೆಗೆ ಸಿದ್ಧಪಡಿಸಿ ಕೊಟ್ಟ ಲೇಖಕಿ ಎಂ.ಕೆ. ರಮಾದೇವಿಯವರಿಗೆ ನಾನು ಆಭಾರಿಯಾಗಿದ್ದೇನೆ. ಈ ಮೂಲಕ ಮತಿಘಟ್ಟ ಅವರ ಜನ್ಮ ಶತಮಾನದ ನೆನಪು ಅಚ್ಚಳಿಯದೆ ಉಳಿಯುತ್ತದೆ ಎಂದು ನಂಬಿದ್ದೇನೆ.

ಡಾ. ಬಾನಂದೂರುಕೆಂಪಯ್ಯ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ

# ಪ್ರಕಾಶನದ ಆಶಯ

ಕರ್ನಾಟಕ ಜಾನಪದ ಅಕಾಡೆಮಿ ಜಾನಪದ ಕಲೆ, ಕಲಾವಿದ, ವಿದ್ವಾಂಸರ ತೌರು. ಇವರುಗಳಿಂದಲೇ ಈ ಸಂಸ್ಥೆ, ಇಂಥವರಿಂದಲೇ ಈ ಸಂಸ್ಥೆಯ ಜೀವ ಚೇತನ. ಹಾಗಾಗಿ ಅಕಾಡೆಮಿ ತನ್ನ ಕಾರ್ಯ ಯೋಜನೆಯ ಒಳಗೆ ಕಲಾವಿದರಂತೆ, ವಿದ್ವಾಂಸರಿಗೂ ಗೌರವ ನೀಡುತ್ತಾ ಬಂದಿದೆ. ಮಾತ್ರವಲ್ಲ, ಜಾನಪದ ಅಕಾಡೆಮಿ ಕೊಡ ಮಾಡುತ್ತಿರುವ ವಾರ್ಷಿಕ ಸರ್ವಶ್ರೇಷ್ಠ ಗೌರವಗಳಲ್ಲಿ ಅಕಾಡೆಮಿಯ ಗೌರವ ಪ್ರಶಸ್ತಿಯೂ ಕಲಾವಿದರ ಹೆಸರಲ್ಲೇ ನೀಡುತ್ತಿರುವುದು ವಿಶೇಷ. ಕರ್ನಾಟಕದ ಇಬ್ಬರು ಹಿರಿಯ ಜಾನಪದ ವಿದ್ವಾಂಸರಾದ ಡಾ.ಜೀ.ಶಂ. ಪರಮಶಿವಯ್ಯ ಮತ್ತು ಜಾನಪದ ಸಂಸ್ಕೃತಿ ಕುರಿತು ಮೊದಲು ಪಿ.ಎಚ್.ಡಿ ಪಡೆಯುವ ಮೂಲಕ, ತಿರಸ್ಕಾರಕ್ಕೆ ಕಾರಣವಾಗಿದ್ದ ಜಾನಪದ ಸಂಸ್ಕೃತಿಗೆ ಹೊಸ ಆಯಾಮ ನೀಡುವುದರ ಜೊತೆಗೆ ಜಾನಪದ ಕ್ಷೇತ್ರದ ಕಡೆ ಹಲವು ಕಣ್ಣು ಹಾಯಿಸುವ ಹಾಗೆ ಮಾಡಿದ ಡಾ. ಗದ್ದಗೀಮಠ – ಈ ಇಬ್ಬರು ಮಹನೀಯರ ಹೆಸರಿನಲ್ಲಿ ಇಬ್ಬರು ಹಿರಿಯ ಜಾನಪದ ವಿದ್ವಾಂಸರಿಗೆ ವರ್ಷಂಪ್ರತಿ ಪ್ರಶಸ್ತಿ ನೀಡುವ ಮೂಲಕ ವಿದ್ವಾಂಸರಿಗೂ ವಿಶೇಷ ಗೌರವ ನೀಡುತ್ತಾ ಬರುತ್ತಿರುವುದು ಇದೇ ಜಾನಪದ ಅಕಾಡೆಮಿಯ ಮತ್ತೊಂದು ವಿಶೇಷ. ಇದೇ ಪರಂಪರೆಯಲ್ಲಿ ನೂರು ವರ್ಷ ತುಂಬಿದೆ. ಹಿರಿಯ ಜಾನಪದ ಕಲಾವಿದರು, ವಿದ್ವಾಂಸರು, ಸಂಗ್ರಹಕಾರರಿಗೆ, ಅವರ ನೆನಪಿನ ಕಾರ್ಯಕ್ರಮವಾಗಿ, ಶತಮಾನೋತ್ಸವದ ಹೆಸರಲ್ಲಿ, ಕಾರ್ಯಕ್ರಮವೊಂದನ್ನು ಹೆಚ್ಚು ರಚನಾತ್ಮಕವಾಗಿ ರೂಪಿಸಿಕೊಂಡು, ಇಂಥವರ ಸಾಹಿತ್ಯ ಕುರಿತ ವಿಚಾರ ಸಂಕಿರಣ, ಗೀತಗಾಯನ. ಕಲೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬರಲಾಗುತ್ತಿದೆ. ಜೊತೆಗೆ ಈ ಹಿರಿಯರ ಸಾರ್ಥಕ ಸಾಧನೆಯ ಹೆಜ್ಜೆಗುರುತುಗಳ ಮಾದರಿಯಾಗಿ ಒಂದು ಪುಸ್ತಕವನ್ನು ಅಂಥವರ ಆಪ್ತರಿಂದಲೇ ಬರೆಯಿಸಿ, ಶತಮಾನೋತ್ಸವದ ಹೆಸರಲ್ಲಿ ಪ್ರಕಟಿಸುವ, ಉನ್ನತ ಗೌರವ ನೀಡುವ ಸಂಪ್ರದಾಯವನ್ನು ಅಕಾಡೆಮಿ ಮಾಡುತ್ತಾ ಬರುತ್ತಿದೆ.

ಇದೀಗ ಇಂಥ ಭಾಗ್ಯ ಹಿರಿಯ ಜಾನಪದ ಸಂಗ್ರಾಹಕ, ಹಾಡುಗಾರ, ನಾಟಕಕಾರ, ಕಾದಂಬರಿಕಾರರೂ ಹಾಗೂ ಪ್ರಕಾಶಕರೂ ಆದ, "ಜಾನಪದ ಭೀಷ್ಮ" ಎಂದೇ

ಹೆಸರಾಗಿದ್ದ. ದಿ. ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಸನ್ಮಾನಿಸುವ ಅವಕಾಶ ಅಕಾಡೆಮಿಗೆ ಪ್ರಾಪ್ತವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಹುಕ್ಕೇರಿ ಬಾಳಪ್ಪವರಂಥ ಶ್ರೇಷ್ಠ ಕಲಾವಿದರ ಸ್ಮರಣೆ ನಂತರದ; ಸರಣಿಯಾಗಿ ಶತಮಾನೋತ್ಸವದ ಸಡಗರ ಶ್ರೀ ಮತಿಘಟ್ಟ ಅವರದ್ದು. ಮತಿಘಟ್ಟ ಹಾಗೂ ಬಾಳಪ್ಪ ಹುಕ್ಕೇರಿ ಪರಸ್ಪರ ಉತ್ತರ – ದಕ್ಷಿಣ ಧೃವದ ಹಾಗೆ. ಒಬ್ಬರು ಹಾಡುಗಾರರು. ಮತ್ತೊಬ್ಬರು ನೆಲಮೂಲ ಸಂಸ್ಕೃತಿಯ, ನೆಲದ ನಿಧಿಯಾದ ಮೌಖಿಕ ಪರಂಪರೆಯ ಹಾಡುಗಳನ್ನು ಸಂಗ್ರಹಿಸುತ್ತಾ, ಸಂಪಾದಿಸುತ್ತಾ, ಪ್ರಕಟಿಸುತ್ತಾ ಬಂದವರು. ಹೀಗೆ ಮಾಡುತ್ತಾ ಹಾಡುವ ಸಿರಿಕಂಠಕ್ಕೆ ಆಹಾರ ಒದಗಿಸಿದ್ದರಿಂದ ಜನಪದದ ಅಪೂರ್ವತೆಯನ್ನು ಕಾಯ್ದುಕೊಂಡು ಬಂದವರು. ಯೋಗಾಯೋಗಾ ಈ ಇಬ್ಬರು ದೇಸಿ ಸಂಸ್ಕೃತಿಯ ಮಹಾನ್ ದುಡಿಮೆಗಾರರ ಶತಮಾನೋತ್ಸವವೂ ಹಿಂದೆ – ಮುಂದೆ ಸರಣಿಯಲ್ಲಿ ಬಂದಿರುವುದು ಒಂದು ಅಪೂರ್ವ ಸಂಗತಿ ಎಂದು ತಿಳಿದಿದ್ದೇನೆ.

ದಿ. ಡಾ. ಮತಿಘಟ್ಟ ತಮ್ಮ ಹುಟ್ಟು ಊರಿನ ಹೆಸರಲ್ಲೇ ಹೆಚ್ಚು ಪ್ರಸಿದ್ಧರಾದವರು. ಹಾಸನ ಜಿಲ್ಲೆಯ ಬೇಲೂರಿನ ಆಸುಪಾಸಿನಲ್ಲಿ ಬೆಳೆದರೂ, ಅಖಂಡ ಕರ್ನಾಟಕದ ತುಂಬ ಸುತ್ತಾಡಿ, ಮಹತ್ವದ ಜನಪದ ಗೀತೆಗಳನ್ನು ಸಂಗ್ರಹಿಸುವ ಮೂಲಕ ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. ಇವರಿಂದ ಸ್ಫೂರ್ತಿ ಪಡೆದವರಂತೆ ಕರೀಂಖಾನ್ ಅಂತವರೂ ಜಾನಪದ ಸಂಗ್ರಹ, ಸಂಪಾದನೆಯಂತಹ ಕಾರ್ಯಕ್ಕೆ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡರು. ಮತಿಘಟ್ಟ ಅವರು ಹುಟ್ಟಿ – ಬೆಳೆದ ಪರಿಸರದ ಊರಿನ ಹೊರಗೂ ಬಂದು, ಹಳ್ಳಿಗರ, ಬುಡಕಟ್ಟು ವರ್ಗದ, ಕಷ್ಟ ಸುಖ ಆಲಿಸುವ ಜೊತೆಗೆ ಸಮೃದ್ಧವಾದ ಅವರ ಸಂಸ್ಕೃತಿಯನ್ನು, ಆ ಕುರಿತ ಗೀತೆ, ಕಥನಗೀತೆ, ಸೋಬಾನೆ, ಲಾವಣಿ, ಕಥೆಗಳನ್ನು ಸಂಗ್ರಹಿಸುತ್ತಾ ಹೋದರು. ಈ ಮೂಲಕ ಕರ್ನಾಟಕ ಸಂಸ್ಕೃತಿಯ ಪ್ರಧಾನ ಜಾನಪದ ನೆಲೆಗಳನ್ನು ದಾಖಲಿಸುವ, ಮಹತ್ವದ ಕೆಲಸ ಮಾಡಿದರು. ಇದರಿಂದ ಜಾನಪದ ಅಧ್ಯಯನಕ್ಕೆ ಹೊಸ ಹೊಸ ಆಕರ ದೊರೆತು, ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಹಳ್ಳಿ ಪರಿಸರದ ಜನಪದ ಗೀತೆ, ಕಥೆ, ಗಾದೆ, ಒಗಟು ಮುಂತಾದ ದೇಶಿ ಸಂಸ್ಕೃತಿ ವಿಜೃಂಬಿಸಲಾರಂಭಿಸಿತು. ಇಂಥ ಸಂಸ್ಕೃತಿ ಕಟ್ಟುವ, ವಿಸ್ತರಿಸುವ ಮಹತ್ವದ ಕೆಲಸಕ್ಕೆ ಶ್ರಿ ಮತಿಘಟ್ಟ ಕೃಷ್ಣಮೂರ್ತಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡರು. ಆ ಫಲವಾಗಿಯೇ ಹಳ್ಳಿಯ ಹಾಡುಗಳು, ಜನಪದ ಲಾವಣಿಗಳು ಮುಂತಾದ ಗೀತೆಗಳ ಮಹತ್ವದ ಸಂಪುಟಗಳೂ ಜನಪದ ಸಾಹಿತ್ಯ ಭಂಡಾರದಂಥ ಅಪೂರ್ವ ಗೀತೆಗಳ ಸಂಪುಟಗಳೂ ಪ್ರಕಟವಾಗಲು ಸಾಧ್ಯವಾಯಿತು.

ಇಂಥ ದೇಸಿ ನೆಲೆಯ ಸಂಸ್ಕೃತಿ ಸಂಪನ್ನರನ್ನು ನೆನೆಯುವುದು ನಮ್ಮ ಜವಾಬ್ದಾರಿಯೂ ಹೌದು, ಈ ಹಿನ್ನೆಲೆಯಲ್ಲಿ ಅಕಾಡೆಮಿ ಈ ಹಿಂದೆಯೂ "ಹೊನ್ನ ಹೊತ್ತಿಗೆ" ಎಂಬ ಹೆಸರಲ್ಲಿ ಮತಿಘಟ್ಟ ಅವರ ಗೀತೆಗಳ ಸಂಪುಟವನ್ನು ಪ್ರಾತಿನಿಧಿಕವಾಗಿ ಪ್ರಕಟಿಸಲಾಗಿದೆ. ಶತಮಾನೋತ್ಸವ ನೆನಪಿನಲ್ಲಿ ಅವರ ಕಿರುಪರಿಚಯವನ್ನು, ಸಾಹಿತ್ಯ, ಸಂಘಟನೆ, ಹೋರಾಟದ ಬದುಕನ್ನು ಆತ್ಮೀಯ ನೆಲೆಯಲ್ಲಿ, ಅಚ್ಚುಕಟ್ಟಾಗಿ, ಅವರ ಮಗಳಾದ ಶ್ರೀಮತಿ ಎಂ.ಕೆ. ರಮಾದೇವಿ ನಿರೂಪಿಸಿದ್ದಾರೆ. ಈ ಮೂಲಕ ಅಕಾಡೆಮಿಯ ಗೌರವಕ್ಕೂ ಪಾತ್ರರಾಗಿದ್ದಾರೆ. ಈ ಗ್ರಂಥವನ್ನು ಜಾನಪದಾಸಕ್ತರು ಸ್ವಾಗತಿಸುತ್ತಾರೆಂಬ ವಿಶ್ವಾಸದಿಂದ ಲೋಕಾರ್ಪಣೆ ಮಾಡುತ್ತಿದ್ದೇವೆ.

**ಬಿ.ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

# ಉಪಕಾರ ಸ್ಮರಣೆ

ಶ್ರೀ ಮ.ಕೃ ರವರ ಜನ್ಮ ಶತಾಬ್ದಿಯ ಈ ಸಮಯಕ್ಕೆ ಅವರ ಜೀವನ, ಸಾಧನೆ ಮುಂತಾದವುಗಳ ಬಗ್ಗೆ ಕನ್ನಡ ನಾಡಿನ ಜನತೆ ಹಾಗೂ ಜಾನಪದ ಲೋಕಕ್ಕೆ ಅವರು ನೀಡಿದ ಕಾಣಿಕೆಗಳನ್ನು ವಿವರಿಸುವ ಸಲುವಾಗಿ ಅವರ ಜೀವನದ ವಿವಿಧ ಘಟ್ಟಗಳ ವಿವರವನ್ನು ಸಂಗ್ರಹಿಸತೊಡಗಿದೆ. ಈ ಕಾರ್ಯಕ್ಕೆ ಈಗಾಗಲೇ ಪ್ರಕಟವಾಗಿದ್ದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಗ್ರಂಥವೂ ನೆರವಿಗೆ ಬಂದಿತು. ಅವುಗಳನ್ನೆಲ್ಲಾ ಕ್ರೋಢೀಕರಿಸಿ, ಭಟ್ಟಿ ಇಳಿಸಿ ತಮ್ಮ ಮುಂದೆ ಪುಸ್ತಕ ರೂಪದಲ್ಲಿ ಇಟ್ಟಿದ್ದೇನೆ. ಇದರಲ್ಲಿರುವ ಸಾರವನ್ನು ಉದಾರ ಮನೋಭಾವದ ಓದುಗರು ಸ್ವೀಕರಿಸಿ ಶ್ರೀ ಮ.ಕೃ. ರವರ ಬಗ್ಗೆ ಅರಿತರೆ ನನ್ನ ಪ್ರಯತ್ನ ಸಾರ್ಥಕ. ನನ್ನ ಈ ಕಾರ್ಯದಲ್ಲಿ ಅನೇಕ ಮಹನೀಯರು ಸಲಹೆ, ಸೂಚನೆ, ಸಹಕಾರ ನೀಡಿದ್ದಾರೆ. ಅವರೆಲ್ಲರ ಉಪಕಾರವನ್ನು ಬೇರೆಯಾಗಿಯೇ ಪಟ್ಟಿ ಮಾಡಿ ಅವರ ಸಹಕಾರವನ್ನು ಸ್ಮರಿಸಿದ್ದೇನೆ.

ಹಿರಿಯರಾದ ನಾಡೋಜ ಶ್ರೀ ಪ್ರೊ. ಜಿ. ವೆಂಕಟಸುಬ್ಬಯ್ಯನವರನ್ನು ಒಮ್ಮೆ ಭೇಟಿ ಮಾಡಿದಾಗ ನನ್ನ ತಂದೆಯವರಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ ಸಾಧನೆಯ ಬಗ್ಗೆ ಬರೆಯಲು ತಿಳಿಸಿ, ಈ ಪುಸ್ತಕವನ್ನು ಬರೆಯಲು ಪ್ರೋತ್ಸಾಹ ಕೊಟ್ಟು ನನಗೆ ಪ್ರೇರಣೆ ನೀಡಿದ ಶ್ರೀ ಜಿ. ವೆಂಕಟಸುಬ್ಬಯ್ಯನವರಿಗೆ–

ನನ್ನ ತಂದೆಯವರ ಬಗ್ಗೆ ಅನೇಕ ವಿಷಯಗಳನ್ನು ಹೇಳಿ ನನ್ನ ಈ ಬರಹಕ್ಕೆ ಸಹಕರಿಸಿದ ನನ್ನ ಅಕ್ಕ ಎಂ. ಕೆ. ಉಮಾದೇವಿ ಹಾಗೂ ಕುಟುಂಬದ ಸದಸ್ಯರಿಗೆ–

ಜಾನಪದ ಅಕಾಡೆಮಿಯಲ್ಲಿ ಮುದ್ರಿಸಲು ಅವಕಾಶವಿದೆ ಎಂದು ತಿಳಿಸಿ ಮಾರ್ಗದರ್ಶನ ಮಾಡಿದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮತಿಘಟ್ಟ ಕೃಷ್ಣಮೂರ್ತಿಯವರ ಬಗ್ಗೆ ಬಹಳಷ್ಟು ಅಭಿಮಾನ ಹೊಂದಿರುವ ಶ್ರೀ ಡಾ. ಸಿದ್ದಲಿಂಗಯ್ಯನವರಿಗೆ–

ಲೇಖನದ ವಿಷಯವನ್ನು ಕ್ರಮಾನುಗತವಾಗಿ ವಿಭಾಗಗಳನ್ನು ಮಾಡಿಕೊಂಡು ರಚಿಸಲು ಸಲಹೆ ನೀಡಿದ ಪ್ರೊ. ಡಿ. ಲಿಂಗಯ್ಯನವರಿಗೆ–

ಪುಸ್ತಕದ ಕರಡು ಪ್ರತಿಯನ್ನು ತಾಳ್ಮೆಯಿಂದ ಓದಿ, ಪುಸ್ತಕಕ್ಕೆ ಕಳಸವಿಟ್ಟಂತೆ ಮುನ್ನುಡಿಯನ್ನು ರಚಿಸಿಕೊಟ್ಟ ಹಿರಿಯರಾದ ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಹಾಲಿ ಶರಣಸಾಹಿತ್ಯ ಪರಿಷತ್ ಅಧ್ಯಕ್ಷರೂ ತಂದೆಯ ಆಪ್ತರೂ ಆದ ಶ್ರೀ ಗೊ.ರು. ಚನ್ನಬಸಪ್ಪನವರಿಗೆ–

ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ ಶತಮಾನೋತ್ಸವ ವರ್ಷದಲ್ಲಿ ಪ್ರಕಟಣೆಯ ಹೊಣೆ ಹೊತ್ತು, ಇಷ್ಟು ಸುಂದರವಾಗಿ ಮೂಡಿಬರಲು ಸಹಕರಿಸಿದ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಾನಂದೂರುಕೆಂಪಯ್ಯರಿಗೆ

ರಿಜಿಸ್ಟ್ರಾರ್ ಶ್ರೀ ಬಿ.ಎನ್.ಪರಡ್ಡಿಯವರೇ ಹಾಗೂ ಸಿಬ್ಬಂದಿ ಶ್ರೀ ಪ್ರಕಾಶ್, ಶ್ರೀಮತಿ ನಾಗರತ್ನ ಹಾಗೂ ಶಿವಲಿಂಗಯ್ಯನವರಿಗೆ,

ಮುಖಪುಟ ರಚಿಸಿಕೊಟ್ಟ ಶ್ರೀ ಕೆ. ಮೋಹನ್‌ರಿಗೆ–

ತಂದೆಯವರ ಭಾವಚಿತ್ರವನ್ನು ಛಾಪಿಸಿದ ನನ್ನ ತಾಯಿ ಶ್ರೀಮತಿ ಲಲಿತಮ್ಮನವರ ಸೋದರ ಶ್ರೀ ಹೆಚ್.ಕೆ. ಶಂಕರ್ ಅವರಿಗೆ–

ಅಂದವಾಗಿ ಮುದ್ರಿಸಿಕೊಟ್ಟ ಮೋಹನ್ ಗ್ರಾಫಿಕ್ಸ್ ಅವರಿಗೆ–

ನನ್ನ ಬರಹದಲ್ಲಿರುವ ಒಪ್ಪುತಪ್ಪುಗಳನ್ನು ಹಂಸಕ್ಷೀರ ನ್ಯಾಯದಂತೆ ಪರಿಗಣಿಸಿ ಓದುವ ಕನ್ನಡ ಬಂಧುಗಳಿಗೆ

ಈ ಮೇಲ್ಕಂಡ ಎಲ್ಲ ಮಹನೀಯರಿಗೂ ನನ್ನ ಅನಂತಾನಂತ ಕೃತಜ್ಞತೆಗಳು.

**ಎಂ.ಕೆ. ರಮಾದೇವಿ** ಎಂ.ಎ.

ಮತಿಘಟ್ಟ ಒಂದು ಸುಂದರಹಳ್ಳಿ, ಹಳ್ಳಿಯ ಯಾವುದೇ ಮನೆಯ ಮುಂದೆ ನಿಂತು ಪೂರ್ವಕ್ಕೆ ನೋಡಿದಾಗ ಅಗಲವಾದ ಅರ್ಧಚಂದ್ರಾಕಾರದಲ್ಲಿ ಹರಡಿಕೊಂಡಿರುವ ಕೆರೆ ಕಾಣಿಸುವುದು. ತುಂಬಿದ ಕೆರೆಯ ಮೇಲೆ ಮೂಡುತ್ತಿರುವ ಅರುಣರೇಖೆಗಳು ಬಿದ್ದು, ಹೊನ್ನಿನ ರೇಖೆಯಾಗಿ ಪ್ರತಿಫಲಿಸುವುದು. ಕೆರೆಯ ಆಚೆ-ಬದಿ ಎತ್ತರವಾದ ಗುಡ್ಡ; ಹೆಸರು ಕೊಂಡ್ಲಿ ಗುಡ್ಡ. ಈ ಗುಡ್ಡಕ್ಕೆ ಧರ್ಮಜರು ಬಂದ ಗುರುತಿದೆ. ಈಚೆ ಬದಿಯಲ್ಲಿ ಹಸುರಿನಿಂದ ತುಂಬಿದ ತೆಂಗಿನ ತೋಟ, ಹೊಲಗಳು. ಮಧ್ಯೆ ಬೈತಲೆಯಂತೆ ಕಾಣುವರಸ್ತೆ. ಈ ದೃಶ್ಯವನ್ನು ಈಗಲೂ ಕಾಣಬಹುದು.

ಇಲ್ಲಿಯ ಜನ ಗೈಮೆಗೆ ಹೋಗುವ ಮುನ್ನ, ರಾಗಿಕಲ್ಲಿನ ಜೊತೆ, ಭೂಮಿತಾಯಿ, ಊರ ಮುಂದಲ ಹನುಮ, ಹಾಗೂ ಮಲ್ಲೇಶನನ್ನು ಭಕ್ತಿಭಾವದಿಂದ ಪ್ರಾರ್ಥಿಸುತ್ತಾರೆ. ಊರ ಮುಂದಲ ಅರಳಿಮರದ ಎದುರಿಗೆ ಇರುವ ಮಲ್ಲೇಶನ ಉತ್ಸವಮೂರ್ತಿ ಇರುವ, ದೇವಸ್ಥಾನದಲ್ಲಿ ದೇವರಿಗೆ ಎರಡು ಹೊತ್ತು ಪೂಜೆ, ಊರ ಆಚೆ ಕೆರೆಕೋಡಿ ಹತ್ತಿರ ಇರುವ ಮೂಲ ವಿಗ್ರಹ ಮಲ್ಲೇಶ್ವರನಿಗೆ ದಿನಕ್ಕೆ ಒಮ್ಮೆ ಮಾತ್ರ ಪೂಜೆ. ವಿಶೇಷವೆಂದರೆ ಈ ಗುಡಿಗಳಲ್ಲಿ ಪೂಜೆ ಮಾಡುವವರು ಲಿಂಗಾಯತರು. ಅದು ಪಕ್ಕದ ಹಳ್ಳಿಯಲ್ಲಿ ಇರುವವರು. (ಕೋಡಿಕೊಪ್ಪಲು) ಹಿಂದೆ ಈ ಹಳ್ಳಿಯೇ ಹಳೇ ಮತಿಘಟ್ಟವಾಗಿತ್ತು.

ಈಗಲೂ ಅಲ್ಲೊಂದು ಶಿಥಿಲವಾದ ಶಿವ ದೇವಾಲಯವಿದೆ. ಹೊಯ್ಸಳರು ಕಟ್ಟಿಸಿದ್ದು.

ಇಷ್ಟು ಸೊಗಸಾದ ಊರು ಎಲ್ಲಿರಬಹುದು? ಹಸನಾದ ಊರೆಂದು, ಸಪ್ತ ಮಾತೃಕೆಯರು ನೆಲೆಸಿರುವ ತಾಣವೆಂದೂ, ಹೆಸರು ಪಡೆದಿರುವುದು ಹಾಸನ ಜಿಲ್ಲೆ. ಈ ಜಿಲ್ಲೆಯಲ್ಲಿ ಶಿಲ್ಪಿಗಳ ನಾಡು ಬೇಲೂರು. ಈ ತಾಲ್ಲೂಕಿನಲ್ಲಿ ಇರುವುದು ಹೊಯ್ಸಳರ ಕಾಲದ ರಾಜಧಾನಿ ದೋರಸಮುದ್ರ, ಇಂದಿನ ಹಳೇಬೀಡು. ಈ ಹಳೇಬೀಡಿಗೆ ಪೂರ್ವಕ್ಕೆ ಆರು ಮೈಲು ದೂರದಲ್ಲಿರುವ ಒಂದು ಚಿಕ್ಕ ಹಳ್ಳಿ ಮತಿಘಟ್ಟ, ಪ್ರಕೃತಿ ಸೌಂದರ್ಯದ ಖಣಿ.

ಈ ಊರು ಎಷ್ಟು ಸುಂದರವೋ ಅಷ್ಟೆ ಪ್ರತಿಭಾವಂತರ, ಸಾಹಿತಿಗಳ, ಕವಿಗಳ ಜನ್ಮಸ್ಥಳವೂ ಆಗಿದೆ. ಅವರ ಮೂಲಕ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ಅಂತಹ ಸಾಹಿತಿಗಳಲ್ಲಿ ಮುಖ್ಯರಾದವರು ತಮ್ಮ ಹೆಸರಿನ ಜೊತೆ ಊರ ಹೆಸರನ್ನು ಪ್ರಸಿದ್ಧಪಡಿಸಿದವರು ಶ್ರೀಯುತ ಮತಿಘಟ್ಟ ಕೃಷ್ಣಮೂರ್ತಿ. ಈ ಮೂಲಕ ಹುಟ್ಟೂರ ಋಣವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿಕೊಂಡಿರುವರು ಎನ್ನಬಹುದು.

ಸಾಹಿತಿಗಳಲ್ಲಿ ಹಲವರು ತಮಗೆ ಪ್ರಿಯವಾದ ಪ್ರಕಾರವನ್ನು ಆರಿಸಿಕೊಂಡು (ಕಥೆಗಾರ, ವಿಮರ್ಶಕ, ಕವಿ, ಲಾಕ್ಷಣಿಕ, ನಾಟಕಕಾರ ಇತ್ಯಾದಿ) ಆ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಒತ್ತುವರು. ಆದರೆ ಈ ಎಲ್ಲಾ ಕ್ಷೇತ್ರದಲ್ಲಿಯೂ ಸಮರ್ಥವಾಗಿ ತಮ್ಮನ್ನು ತೊಡಗಿಸಿಕೊಂಡವರು ಮತಿಘಟ್ಟ ಕೃಷ್ಣಮೂರ್ತಿಯವರು. ಮುಖ್ಯವಾಗಿ ಬಹಳ ಕಷ್ಟಕರವಾದ ಜನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ಆರಿಸಿಕೊಂಡ ಧೀಮಂತ. ಮ.ಕೃ. ಅವರು (ತಮಗೆ ಅರಿವಿಲ್ಲದೆಯೇ) ಆ ಕಾರ್ಯವನ್ನು ಸಮರ್ಥವಾಗಿ, ಸಮರ್ಪಕವಾಗಿ ಮಾಡಿದರಲ್ಲದೇ ಜನಪದ ಸಾಹಿತ್ಯವನ್ನು ಉಳಿಸಿ ಬೆಳಸಿದರೂ ಕೂಡ. ಮತಿಘಟ್ಟ ಕೃಷ್ಣಮೂರ್ತಿಯವರ ತಂದೆ ಶ್ರೀಯುತ ಲಿಂಗಣ್ಣಯ್ಯನವರು ೬ ಅಡಿ ಎತ್ತರದ ಕಪ್ಪುಬಣ್ಣ, ಅಗಲವಾದ ಮುಖ, ಧಾರ್ಮಿಕ ನಿಷ್ಠೆ ಉಳ್ಳವರು, ಶ್ರಮಜೀವಿ ಊರಿಗೆ ಹಿರಿಯರಾದವರು. ತಾಯಿ ಚೆನ್ನಮ್ಮ. ಕಳಸಾಪುರದ ಹೆಣ್ಣು ಮಗಳು. ಕುಳ್ಳಗೆ ಬೆಳ್ಳಗೆ ದಂತದ ಬೊಂಬೆ ಹಾಗೆ ಇದ್ದವರು.

ಮ.ಕೃ ಅವರು ಹುಟ್ಟಿದ್ದು ತಾ॥ ೧೨-೬-೧೯೧೨ರಲ್ಲಿ ಕೊನೆಯ ಮಗ ಗೋತ್ರ ವಿಶ್ವಾಮಿತ್ರ, ಇವರಿಗೆ ಶ್ರೀ ಎಲ್. ಗುಂಡಪ್ಪ, ಶ್ರೀ ಮುತ್ತು ರಾಮಸ್ವಾಮಿ ಎಂಬ ಇಬ್ಬರು ಅಣ್ಣಂದಿರು ಲಕ್ಷ್ಮೀದೇವಿ ಅಕ್ಕ ಒಬ್ಬಳು.

ಹಳೇಮತಿಘಟ್ಟ

ಈಗ ಕೋಡಿಕೊಪ್ಪಲು ಎಂದು ಕರೆಯುವ ಜಾಗದಲ್ಲಿ ಹಿಂದೆ ಹಳೇಮತಿಘಟ್ಟವಿತ್ತು. ಅಲ್ಲಿ ಮ.ಕೃ. ಅವರ ತಂದೆ ಲಿಂಗಣ್ಣಯ್ಯನವರ ತಂದೆ, ಕಪನೀಪತಿಯವರು. (ಮ.ಕೃ. ಅಜ್ಜ) ಬಂದು ನೆಲಸಿದ್ದರು. ಅವರ ಪೂರ್ವಿಕರು ಅರಕಲಗೂಡಿನವರು. ಅಲ್ಲಿ ಅವರ ಮನೆತನದವರು ಸುಂಕದಕಟ್ಟೆಯ ಅಧಿಕಾರಿಯಾಗಿದ್ದರು. ಕ್ರಿ.ಶ. ೧೭೭೭-೭೮ರಲ್ಲಿ ಸುಂಕದಕಟ್ಟೆ ಮನೆಯಲ್ಲಿ ನಾಲ್ಕು ಮಂದಿ ಅಣ್ಣತಮ್ಮಂದಿರು ಇದ್ದರು. ಕಡೆಯವನು ಶ್ರೀಕಂಠ. ಒಂದು ದಿನ ಶ್ರೀ ಕಂಠ ಸುಂಕದಕಟ್ಟೆಯಲ್ಲಿದ್ದರು. ಆಗ ದಿವಾನ್ ಮೀರ್‌ಸಾಧಕರು ಅರಕಲಗೂಡಿಗೆ ಬಂದರು. ಹಾಗೆ ಬರುವಾಗ ಊರ ಬಾಗಿಲಲ್ಲೆ ಇದ್ದ ಸುಂಕದಕಟ್ಟೆಗೆ ಬಂದರು. ಆಗ ಲೆಕ್ಕ ಪತ್ರಗಳು ಉರ್ದು, ಹಾಗೂ ಕನ್ನಡ ಭಾಷೆಯಲ್ಲಿ ಇಡಬೇಕಾಗಿತ್ತು. ಆಗಾಗ ಊರಿಗೆ ಬರುತ್ತಿದ್ದ ಪಾದ್ರಿಯವರಿಂದ ಶ್ರೀ ಕಂಠ ಸ್ವಲ್ಪ ಮಟ್ಟಿಗೆ ಇಂಗ್ಲೀಷ್ ಅನ್ನು ಕಲಿತಿದ್ದ. ದಿವಾನರಿಗೆ ಉರ್ದು ಲೆಕ್ಕ ಪುಸ್ತಕವನ್ನು ನೋಡಿ ಬಹಳ ಸಂತೋಷವಾಗಿ, ಶ್ರೀಕಂಠನನ್ನು ಶ್ರೀರಂಗಪಟ್ಟಣಕ್ಕೆ ಬಂದು ತಮ್ಮನ್ನು ಕಾಣುವಂತೆ ತಿಳಿಸಿದರು. ಅದರಂತೆ ಶ್ರೀಕಂಠ ಶ್ರೀರಂಗಪಟ್ಟಣಕ್ಕೆ ಹೋಗಿ ಮೀರ್‌ಸಾದಕರನ್ನು ಭೇಟಿ ಮಾಡಿದ, ಅವರು ಶ್ರೀ ಕಂಠನನ್ನು ಹೊಗಳಿ, "ಮುಸಲ್ಮಾನನಾಗು ಅಮಲ್ದಾರಿ ಕೆಲಸ ಕೊಡಿಸುತ್ತೇನೆ" ಎಂದರು. ಶ್ರೀಕಂಠ ಒಪ್ಪಲಿಲ್ಲ.

ಆಗ ನಡೆದ ಧರ್ಮದ ಚರ್ಚೆಯಲ್ಲಿ ಇಬ್ಬರೂ ತಮ್ಮ ತಮ್ಮ ಧರ್ಮದ ಹಿರಿಮೆಯನ್ನು ಸಮರ್ಥಿಸಿಕೊಂಡರು, ಈ ಸಂದರ್ಭದಲ್ಲಿ ಶ್ರೀಕಂಠ ಆಡಿದ ಯಾವುದೋ ಮಾತಿಗೆ ಕೋಪಗೊಂಡ ಮೀರ್‌ಸಾದಕರು ಅಲ್ಲೇ ಕತ್ತಿಯಿಂದ ಶ್ರೀಕಂಠನನ್ನು ಕೊಂದುಹಾಕಿದರು.

ಈ ವರ್ತಮಾನ ತಿಳಿದ ಶ್ರೀಕಂಠನ ಅಣ್ಣಂದಿರು ದಿವಾನರಿಂದ ತಮಗೆ ತೊಂದರೆ ಆಗುವುದೆಂದು ಹೆದರಿ ಸಂಸಾರ ಸಮೇತ ಕೊಡಗಿಗೆ ಹೋದರು. ಅವರು ಕೊಡಗಿನಿಂದ ಬೇಲೂರಿಗೆ ಬರುವ ಮೊದಲೇ ಹಿರಿಯ ಸಹೋದರ ನಂಜಪ್ಪಯ್ಯ ಹಾಗೂ ಅವರ ಪತ್ನಿ ಕಾಲವಾಗಿದ್ದರು. ಅವರ ಒಬ್ಬನೇ ಮಗ ಕಪನೀಪತಿ ಚಿಕ್ಕಪ್ಪನೊಡನೆ ಬೇಲೂರಿಗೆ ಬಂದರು. ಆಗ ಅವನಿಗೆ ಇಪ್ಪತ್ತು ವರ್ಷ. ಏಳು–ಎಂಟು ವರ್ಷಕ್ಕೆ ಹೆಣ್ಣುಮಕ್ಕಳಿಗೆ ಮದುವೆಮಾಡುತ್ತಿದ್ದ ಆ ಕಾಲದಲ್ಲಿ, ಇಪ್ಪತ್ತು ವರ್ಷದ ಕಪನೀಪತಿಗೆ ಹೆಣ್ಣು ಸಿಗಲಿಲ್ಲ. ಆ ಸಮಯದಲ್ಲಿ ಮತಿಘಟ್ಟದಲ್ಲಿ ರಾಮಯ್ಯ ಎಂಬುವ ಶಾನುಭೋಗರು ಅವರಿಗೆ ಒಬ್ಬಳೇ ಮಗಳು ಲಕ್ಷ್ಮೀದೇವಿ, ಅವಳನ್ನು ಬಿಟ್ಟಿರಲಾರದೇ ಬೇಗ ಮದುವೆ ಮಾಡಿರಲಿಲ್ಲ. ಅವಳಿಗೆ ಹತ್ತೊಂಬತ್ತು ವರ್ಷ. ೨೧ ವರ್ಷದ ಕಪನೀಪತಿಗೆ ಲಕ್ಷ್ಮೀದೇವಿಯನ್ನು ಕೊಟ್ಟು ಮದುವೆ ಮಾಡಿದರು ಶಾನುಭೋಗರು. ಅಳಿಯನನ್ನು ಮತಿಘಟ್ಟಕ್ಕೆ ಕರೆತಂದು ತಮ್ಮ ಆಸ್ತಿಯಲ್ಲಿ ೧/೬ ಭಾಗವನ್ನು ಕೊಟ್ಟು ಬೇರೆ ಮನೆ ಕಟ್ಟಿಸಿಕೊಟ್ಟರು. ಹೀಗೆ ಮತಿಘಟ್ಟದಲ್ಲಿ ಬಂದು ನೆಲಸಿದ ಕಪನೀಪತಿ ಮ.ಕೃ. ಅವರ ಅಜ್ಜ.

ಹಳೇ ಮತಿಘಟ್ಟದ ಬ್ರಾಹ್ಮಣ್ಯ ಒಬ್ಬ ಯತಿಯ ಶಾಪದಿಂದ ನಾಶವಾಯಿತೆಂದು ಒಂದು ಐತಿಹ್ಯವಿದೆ.

ಒಂದು ಮುಂಜಾನೆ ಒಬ್ಬ ಸನ್ಯಾಸಿ ಮತಿಘಟ್ಟಕ್ಕೆ ಬಂದರು. ಊರ ಮುಂದಿನ ಆಂಜನೇಯನ ಗುಡಿಯ ಕಟ್ಟೆಯ ಮೇಲೆ ಕುಳಿತಿದ್ದರು. ತೋಟಕ್ಕೆ ಹೋಗುತ್ತಿದ್ದ ಬ್ರಾಹ್ಮಣರು ಅವರನ್ನು ನೋಡಿಯೂ ನೋಡದಂತೆ ಇದ್ದು ಬಿಟ್ಟರು. ಸಂಜೆಯಾದರೂ ಅವರ ಇರುವಿನ ಬಗ್ಗೆ ಗಮನ ಕೊಡದಿದ್ದ ಬ್ರಾಹ್ಮಣರ ಮೇಲೆ ಸಿಟ್ಟುಬಂತು. ಈ ಬ್ರಾಹ್ಮಣರು ಅಹಂಕಾರಿಗಳಾಗಿ ಸ್ವಧರ್ಮವನ್ನು ಮರೆತಿದ್ದಾರೆ ಇಂಥವರಿಗೆ ಏಳಿಗೆಯಾಗದಿರಲಿ ಎಂದು ಶಪಿಸಿದರು. ಇದನ್ನು ತಿಳಿದ ಶ್ಯಾನುಭೋಗರ ಪತ್ನಿ ಬಂದು ನಮಸ್ಕರಿಸಿ ಸನ್ಯಾಸಿಗೆ ಸಮಾಧಾನ ಹೇಳಿ ಮನೆಗೆ ಕರೆತಂದು ಭಿಕ್ಷೆ ನೀಡಿದರು. ಊರಿಗೆ ಬಂದ ಅತಿಥಿ ಅಭ್ಯಾಗತರನ್ನು ಸತ್ಕರಿಸುತ್ತಿದ್ದವರು ಶ್ಯಾನುಭೋಗರು. ಅವರು ಮುಂಜಾನೆ ಬೇಲೂರಿಗೆ ಸರ್ಕಾರದ ಕೆಲಸದ ಮೇಲೆ ಹೋಗಿದ್ದೇ ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾಯಿತು. ಹೊಸ ಮತಿಘಟ್ಟಕ್ಕೆ ನಾಂದಿಯಾಯಿತು.

ಮನೆಯಲ್ಲಿ ಎಲ್ಲರಿಗಿಂತ ಕಿರಿಯರು ಮ.ಕೃ. ಮನೆಯಲ್ಲಿ ಮುದ್ದಿಗಾಗಿ ಕರೆಯುತ್ತಿದ್ದುದು ಮರಿ. ಹೇಳಿಕೊಟ್ಟ ಹಾಡು ಕೇಳಿದ ಕಥೆಗಳನ್ನು ಮುದ್ದು ಮುದ್ದಾಗಿ

ಅದೇ ರೀತಿ ಒಪ್ಪಿಸುತ್ತಿದ್ದ ಮಗುವನ್ನು ಕಂಡರೆ ಊರಿನವರಿಗೆಲ್ಲಾ ಪ್ರೀತಿ. ಊರಿನವರಿಗೂ ಮರಿಅಯ್ಯನವರು ಆಗಿದ್ದರು. ಅಣ್ಣಂದಿರು ಓದಲು ಬೇರೆ ಊರುಗಳಿಗೆ ಹೋಗಿದ್ದರು. ಅಕ್ಕ ಮದುವೆಯಾಗಿ ಗಂಡನ ಮನೆಯಲ್ಲಿದ್ದಳು. ಹೀಗಾಗಿ ಯಾವಾಗಲೂ ತಾಯಿಯ ಸೆರಗಿಗೆ ಅಂಟಿಕೊಳ್ಳುತ್ತಿದ್ದರು. ಅಮ್ಮನಿಗೂ ಅಷ್ಟೆ ಮಗ ಯಾವಾಗಲೂ ಕಣ್ಣಮುಂದೆ ಇರಬೇಕು. ೬ ವರ್ಷವಾದರೂ ಕೂಲಿಮಠಕ್ಕೆ ಸೇರಿಸಿರಲಿಲ್ಲ. ಮನೆಯಲ್ಲಿ ಸಂಮೃದ್ಧಿಯಾಗಿ ದವಸ-ಧಾನ್ಯ, ಹಸು-ಕರು ಇತ್ತು. ಅಮ್ಮ-ಅಪ್ಪನ ಪ್ರೀತಿಯಲ್ಲಿ ಬಹಳ ಸಂತೋಷದಿಂದ ಕಾಲಕಳೆದರು ಮ.ಕೃ. ಮುದ್ದಿನ ಪರಿಣಾಮ, ಹಠವೂ ಸೇರಿ ಮ.ಕೃ. ಬೆಳೆದಂತೆ ಜ್ಞಾಪಕಶಕ್ತಿಯೂ ಬೆಳೆಯಿತು. ಒಂದು ಅಥವಾ ಎರಡು ಸಲ ಕೇಳಿದರೆ ಸಾಕು ಎಂಥ ದೊಡ್ಡ ಪದ್ಯವಾದರೂ ಸರಾಗವಾಗಿ ಹೇಳುತ್ತಿದ್ದರು. ತಂದೆಯವರಿಂದ ಅಮರ ಪ್ರಾರ್ಥನಾಶ್ಲೋಕ ಕಲಿತರು. ಮ.ಕೃ.ರವರಿಗೆ ಒಮ್ಮೆ ಬೆಳಗಿನ ಜಾವ ಅವರ ತಂದೆ ನೆನ್ನೆ ಹೇಳಿಕೊಟ್ಟ ಅಮರದ ಕೆಲವು ಪದ್ಯಗಳನ್ನು ಕಂಠಪಾಠಮಾಡಲು ಕೂಗಿ ಹೇಳಿದರು. ಮ.ಕೃ. ಮಲಗಿದ್ದಲ್ಲೆ ಜೋರಾಗಿ ಅಮರ ಹೇಳಲು ಪ್ರಾರಂಭಿಸಿದರು. ಮಗ ಎದ್ದಿರುವನೆಂದು ತಿಳಿದು ಬೇರೆ ಕೆಲಸಕ್ಕೆ ಹೋದರು ಲಿಂಗಣ್ಣಯ್ಯನವರು, ಅಷ್ಟು ಜ್ಞಾಪಕಶಕ್ತಿ ಇತ್ತು ಮ.ಕೃ. ಅವರಿಗೆ ಮತಿಘಟ್ಟದಲ್ಲಿ ಓಜೋದೊಡ್ಡಯ್ಯನವರ ಕೂಲಿಮಠದಲ್ಲಿ ಮರಳಿನ ಮೇಲೆ ತಿದ್ದಿ ಅಕ್ಷರಾಭ್ಯಾಸ ಪರಿಸರದೊಡನೆ, ಆಟದೊಡನೆ ಪಾಠ ಬಹಳ ಖುಷಿಯಿಂದ ಕಲಿತರು ಮ.ಕೃ. ತಂದೆ ಲಿಂಗಣ್ಣಯ್ಯನವರು ಶಿಸ್ತಿನವರು ತೋಟಕ್ಕೆ ಕರೆದುಕೊಂಡು ಹೋಗುತ್ತಿದ್ದರು ಮಗ ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸುತ್ತಿದ್ದರು. ಮಹಾಭಾರತ, ರಾಮಾಯಣದ ಕಥೆಗಳನ್ನು ನೀತಿಕಥೆಗಳನ್ನು ಹೇಳುತ್ತಿದ್ದರು. ಕಥೆ ಕೇಳುತ್ತಾ ಕೇಳುತ್ತಾ ನಿದ್ದೆ ಮಾಡಿಬಿಡುತ್ತಿದ್ದರು ಮ.ಕೃ.

ಕೃಷ್ಣಮೂರ್ತಿಯವರು ಆಗಾಗ್ಗೆ ಅಮ್ಮನ ಜೊತೆ ಇತರರ ಮನೆಗೆ ಆರತಿ ಅಕ್ಷತೆಗೆ ಹೋಗುತ್ತಿದ್ದರು. ಅಲ್ಲಿ ಪುರಿಉಂಡೆ ಕೊಡುವರೆಂಬ ಆಸೆ. ಆ ಮನೆಯಲ್ಲಿ ಹಾಡು ಕೇಳಿ ಆರತಿಯ ನಂತರ ಪುರಿಉಂಡೆ ಪಡೆದು ದಾರಿಯಲ್ಲೆ ತಿಂದು ಬಿಡುತ್ತಿದ್ದರು.

ಬನದ ಹುಣ್ಣಿಮೆ ಹಾಗೂ ಸಂಕ್ರಾಂತಿಯಲ್ಲಿ ಮಕ್ಕಳಿಗೆ ಆರತಿ ಎತ್ತುವುದು ಸಂಪ್ರದಾಯ. ಅಂತಹ ಒಂದು ದಿನದಲ್ಲಿ ಚೆನ್ನಮ್ಮ ಪುರಿಉಂಡೆಕಟ್ಟಿ ಬಿದುರು ಬುಟ್ಟಿಯಲ್ಲಿ ತುಂಬಿ ಸಂಜೆ ಆರತಿಗೆ ಅಣಿಮಾಡಿದ್ದರು. ಅಕ್ಕ-ಪಕ್ಕದ ಮನೆಯವರನ್ನು ಕರೆದು ಬಂದಿದ್ದರು. ಮರಿಗೆ ಜಡೆಹಾಕಿ ಹೂ ಮುಡಿಸಿ ಅಲಂಕಾರ ಮಾಡಿದ್ದರು. ಇವುಗಳನ್ನು ಕಂಡು ಮರಿಗೆ ಸಂಭ್ರಮವೋ ಸಂಭ್ರಮ. ಸಂಜೆ ಆಯಿತು ಚೆನ್ನಮ್ಮ ಹೊರಗಾದರು ಸುಮಂಗಲಿಯರು ಬಂದು "ಏನು ಮರಿ ನಿಂಗೆ ಆರತಿ ಎತ್ತೋರು ಯಾರೋ"

ಅಂದ್ರು ಪೆಚ್ಚಾದ ಮಗನ ಮುಖನೋಡಿ ಚೆನ್ನಮ್ಮ ಬಂದವರಿಗೆ ಹಸೆಮಣೆಹಾಕಿ ಆರತಿ ಎತ್ತಲು ತಿಳಿಸಿದರು. ಅವನ ಸಂತೋಷವನ್ನು ಕಂಡು ಹಿಗ್ಗಿದ್ದರು. ಆರತಿ ಏನೋ ಆಯಿತು ಮರಿಗೆ ಒಂದಾದರೂ ಉಂಡೆ ಸಿಗಲಿಲ್ಲ, ತಮ್ಮ ಇಳಿ ವಯಸ್ಸಿನಲ್ಲೂ ಈ ಘಟನೆಯನ್ನು ಹೇಳಿ "ಉಂಡೆ ಸಿಗದಿದ್ದರೂ ಪರ್ವಾಗಿಲ್ಲ ಆರತಿ ಎತ್ತಿಸಿಕೊಂಡೆ ಎಂದು ಹಿಗ್ಗುತ್ತಿದ್ದರು ಮ.ಕೃ.

ಚೆನ್ನಮ್ಮ ಮಗನಿಗೆ ಊಟ ಮಾಡಿಸುವಾಗ ಸ್ವಲ್ಪ ಹೆಚ್ಚಾಗಿಯೇ ಕಲಸಿಬಿಡುತ್ತಿದ್ದರು. ಕೃಷ್ಣಮೂರ್ತಿ ಸೇರುವಷ್ಟು ತಿಂದ ಮೇಲೆ ತಟ್ಟೆಯಲ್ಲಿ ಉಳಿದದ್ದನ್ನು ನೋಡಿ. ಚೆಲ್ಲಬಾರದೆಂದೊ ಅಥವಾ ಆಸೆಯಿಂದಲೋ ಅಮ್ಮನನ್ನ ಸೇರಿಸಿ ತಿನ್ನಿಸೆ ಅಂತ ಹಠಹಿಡಿಯಲು ಪ್ರಾರಂಭಿಸುತ್ತಿದ್ದರು 'ಚೆಲ್ಲಿದರೂ ಪರ್ವಾಗಿಲ್ಲ ಬಿಡು' ಎಂದರೂ ಕೇಳದೆ, ಸೇರಿಸಿ ತಿನ್ನಿಸೇ ಅನ್ನೋ ಒಂದೇ ಹಠ. ಇವರ ಹಠ ನಿಲ್ಲಿಸಲು ಚೆನ್ನಮ್ಮನವರಿಗೆ ಸಾಕೋ ಸಾಕಾಗುತ್ತಿತ್ತು. ಆಗ ಅವರು ಹಾಡಲು ಪ್ರಾರಂಭಿಸಿದರೆ ಕೃಷ್ಣಮೂರ್ತಿ ಹಠ ನಿಲ್ಲಿಸುತ್ತಿದ್ದರು. ಕೃಷ್ಣಮೂರ್ತಿಯವರ ಹಠಕ್ಕೆ ಚೆನ್ನಮ್ಮನವರ ಹಾಡೇ ಅಸ್ತ್ರವಾಗುತ್ತಿತ್ತು. ಬಾಲಕ ಕೃಷ್ಣಮೂರ್ತಿಗೆ ಕಪ್ಪಾದ-ದಟ್ಟವಾದ-ಉದ್ದವಾದ ಕೂದಲಿತ್ತು. ಎಣ್ಣೆಸ್ನಾನ ಎಂದರೆ ಬಹಳ ಇಷ್ಟ. ಅವರ ತಾಯಿ ಆಸ್ಥೆಯಿಂದ ಆ ಕೆಲಸ ಮಾಡುತ್ತಿದ್ದರು. ನಂತರ ಕೂದಲು ಬಾಚಿ ಜಡೆ ಹಾಕಿ ತೋಟದಿಂದ ತಂದ ಮಲ್ಲಿಗೆ ಕಟ್ಟಿ ಹೂ ಮುಡಿಸುತ್ತಿದ್ದರು. ದೊಡ್ಡ ಜೇಬಿನ ಒಂದು ಮೇಲಂಗಿ ಇವರ ದಿನದ ಶೃಂಗಾರ. ಹಬ್ಬ ಹರಿದಿನಗಳಲ್ಲಿ ಅಮ್ಮನ ಜೊತೆ ಕೆರೆಗೆ ಹೋಗುವರು, ಗಂಗೆ ಪೂಜೆ ಮಾಡಿದ ಮುತ್ತೈದೆಯರು ನೆನೆದ ಕಡಲೇಬೇಳೆ ಕಾಯಿಚೂರು ನೈವೇದ್ಯ ಮಾಡುವರು. ಹಾಡಿನ ಜೊತೆ ಪೂಜೆ, ಪೂಜೆಯ ನಂತರ ಪ್ರಸಾದ ವಿನಿಯೋಗ, ಮೊದಮೊದಲು ಪ್ರಸಾದಕ್ಕಾಗಿ ಹೋಗುತ್ತಿದ್ದ ಕೃಷ್ಣಮೂರ್ತಿ ಬೆಳೆಯುತ್ತ ಹಾಗೆ ಹಾಡಿಗಾಗಿ ಹೋಗಲು ಪ್ರಾರಂಭಿಸಿದರು. ಈ ಅಭ್ಯಾಸ ಮುಂದೆ ಸಂಪ್ರದಾಯ ಹಾಡುಗಳ ಸಂಗ್ರಹಕ್ಕೆ ನಾಂದಿಯಾಯಿತು.

ಸುಮಾರು ೭ ವರ್ಷದ ಕೃಷ್ಣಮೂರ್ತಿಗೆ ಒಮ್ಮೆ ಜ್ವರ ಕಾಣಿಸಿಕೊಂಡಿತು. ಚೆನ್ನಮ್ಮ ಮನೆಯಮದ್ದು ಮಾಡಿದರು. ಜ್ವರ ಜಾಸ್ತಿಯಾಯಿತು. ಕಣ್ಣು ಬಿಟ್ಟರೆ, ಕಣ್ಣು ಮುಚ್ಚಿದರೆ, ಎಲ್ಲಾ ಕಡೆ ಎಲ್ಲೆಂದರೆ ಅಲ್ಲಿ ಹಾವು ಎನ್ನುವ ಭ್ರಮೆ ಪ್ರಾರಂಭವಾಯಿತು. ಒಂದೇ ಸಮನೆ ಹಾವು ಹಾವು ಎಂದು ಅಳಲು ಪ್ರಾರಂಭಿಸಿದರು. ಆಗ ಏನು ಮಾಡಲು ತೋಚದೆ ಬೆಳವಾಡಿ ಗಣಪನಿಗೆ ಬೆಳ್ಳಿಯ ಹಾವು ಕೊಡುವುದಾಗಿ ಹರಕೆ ಹೊತ್ತರು ಚೆನ್ನಮ್ಮ. ಅವರ ನಂಬಿಕೆಯ ಪರಿಣಾಮ ಹಾವು ಕಾಣುವುದು ನಿಂತಿತು. ಆದರೆ ಸೀತಾಳೆ ಸಿಡುಬು ಬಂದು ಮುಖದ ಮೇಲೆ ಸಿಡುಬಿನ ಕಲೆ ಉಳಿದು ಹೋಯಿತು. ಮ.ಕೃಗೆ ೯೦ ವರ್ಷವಾದರೂ ಹಾವು ಎಂದಾಕ್ಷಣ ಕಣ್ಣಿನ ದೃಷ್ಟಿ ಹೋದಷ್ಟು ಹಾವು

ಕಾಣಿಸುತ್ತಿತ್ತು. ದೊಡ್ಡ ಮಗಳು ಉಮ ಎಲ್ಲಾ ಪುಣ್ಯಕ್ಷೇತ್ರಗಳಿಗೂ ಕರೆದುಕೊಂಡು ಹೋದಳು. ಆದರೂ ಆ ದೃಶ್ಯ ಮರೆಯಲಾಗಲಿಲ್ಲ.

## ವಿದ್ಯಾಭ್ಯಾಸ

ಮ.ಕೃ. ಅವರ ಅಕ್ಕ ಇದ್ದ ಬೆಳವಾಡಿಯಲ್ಲಿ ಪ್ರಾಥಮಿಕ ಶಾಲೆ ಇತ್ತು. ಹಾಗಾಗಿ ಅವರು ಅಕ್ಕನ ಮನೆಗೆ ವಿದ್ಯಾಭ್ಯಾಸಕ್ಕಾಗಿ ಹೋದರು. ಚಿಕ್ಕಮ್ಮನ ಮನೆಯೂ ಹತ್ತಿರದಲ್ಲೆ ಇತ್ತು.

ಒಂದು ದಿನ ಚಿಕ್ಕಮ್ಮನ ಮನೆಗೆ ಒಬ್ಬ ಬ್ಯಾರಿ ಬಂದರು. ಮಾಂತ್ರಿಕ ಕೇರಳದ ಕಡೆಯವರು, ಬಂದವರೇ ಮನೆಯಲ್ಲಿ ನಡೆಯುತ್ತಿರುವ ಸಾವು-ನೋವುಗಳ ಬಗ್ಗೆ, ಏಳಿಗೆಯಾಗದ ಬಗ್ಗೆ ತಿಳಿಸಿದರು.

ಅದನ್ನು ಕೇಳಿದ ಚಿಕ್ಕಪ್ಪ ಪರಿಹಾರವನ್ನು ಕೇಳಿದರು. ಅಂಜನ ಹಾಕಿ ನೋಡಬೇಕೆಂದರು ಬ್ಯಾರಿ. ಅಂಜನ ಹಾಕಲು ಮನೆಯಲ್ಲಿದ್ದ ಚಿಕ್ಕ ಹುಡುಗಿಯನ್ನು ಒಪ್ಪಿಸಿದರು.

ಅಮಾವಾಸ್ಯೆಯ ರಾತ್ರಿ ೧೨ ಗಂಟೆಗೆ ಸ್ಮಶಾನದಲ್ಲಿ ಪೂಜೆ ಮಾಡಿದರು ಬ್ಯಾರಿ. ಹುಡುಗಿಗೆ ಸ್ನಾನಮಾಡಿಸಿ ಒದ್ದೆ ಬಟ್ಟೆಯಲ್ಲಿ ಪೂಜೆ ಮಾಡಿದ ಸ್ಥಳಕ್ಕೆ ಕರೆತಂದರು. ಅವಳ ಬಲಗೈಗೆ ಅಂಜನ (ಕಪ್ಪು) ಹಾಕಿ ಅಲ್ಲಿ ಕಾಣುವುದನ್ನು ತಿಳಿಸಲು ಹೇಳಿದರು ಬ್ಯಾರಿ. ಆ ಹುಡುಗಿ, ತೋಟ ಮನೆ, ಇತ್ಯಾದಿ ಹೇಳಿ ಕೊನೆಗೆ "ಆಂಜನೇಯ" ಎಂದು ಹೇಳಿದಳು. ಮಾಂತ್ರಿಕ ಆಂಜನೇಯನ ಉಪಾಸಕ ಹಾಗಾಗಿ 'ಮುಂದೇನು?' ಅನ್ನುವುದನ್ನು ನಿಲ್ಲಿಸಿ ಎದ್ದು ಆಂಜನೇಯ ತೋರಿಸಿದ ಜಾಗಕ್ಕೆ ಹೋಗಲು ತಿಳಿಸಿದ. ಹುಡುಗಿ ಸೀದಾ ಅವರ ಮನೆಯ ಹೊಸ್ತಿಲ ಹತ್ತಿರ ಹೋಗಿ ಆಂಜನೇಯ ಹೊಸ್ತಿಲ ಮೇಲೆ ನಿಂತಿದ್ದನ್ನು ತಿಳಿಸಿದಳು. ಹುಡುಗಿ ಜ್ಞಾನ ತಪ್ಪಿ ಬಿದ್ದು ಬಿಟ್ಟಳು. ಅವಳನ್ನು ಉಪಚರಿಸಿ, ನಾಳೆ ಬರುವುದಾಗಿ ಹೇಳಿ ಹೋದರು ಬ್ಯಾರಿ. ಮರುದಿನ ಬಂದು ಹೊಸ್ತಿಲನ್ನು ಅಗೆದಾಗ ಅಲ್ಲಿ "ವಂಶನಾಶ" ಎಂಬ ಬರಹವಿದ್ದ ತಾಮ್ರದ ತಗಡು ಇತ್ತು. ಅದನ್ನು ವಿಧಿವತ್ತಾಗಿ ನಾಶಪಡಿಸಲಾಯಿತು. ನಂತರ ಅವರ ಮನೆಯಲ್ಲಿ ಸಾವು-ನೋವು ತಪ್ಪಿತು. ಅಭಿವೃದ್ಧಿ ಹೊಂದಿದರು. ಈ ಘಟನೆಯನ್ನು ಕಣ್ಣಾರೆ ಕಂಡ ಮ.ಕೃ. ಅವರಿಗೆ ದೇವರಿದ್ದ ಕಡೆ ದೆವ್ವ-ಭೂತ, ಮಾಟ ಮಂತ್ರದ ಆಟ ನಡೆಯುವುದಿಲ್ಲವೆಂಬ ನಂಬಿಕೆ ಬಲವಾಯಿತು. ಈ ನಂಬಿಕೆ ಅವರ ಜೀವನದುದ್ದಕ್ಕೂ ಇತ್ತು. ಇದು ಅನೇಕ ಘಟನೆಗಳಿಂದ ದೃಢಪಟ್ಟಿದೆ.

ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ ಬೇಲೂರಿನ ಸರ್ಕಾರಿ ಶಾಲೆಗೆ ಸೇರಿದರು ಮ.ಕೃ. ಶಾಲೆಯಲ್ಲಿ ಇವರ ತರಗತಿಯಲ್ಲಿ ಮೂವರು ಕೃಷ್ಣಮೂರ್ತಿಗಳಿದ್ದರು. ಹಾಜರಿ

ಹಾಕುವಾಗ ಹಾಗೂ ಇತರೆ ಸಂದರ್ಭಗಳಲ್ಲಿ ಕೃಷ್ಣಮೂರ್ತಿ ಎಂದರೆ ಮೂವರೂ ಉತ್ತರಿಸುತ್ತಿದ್ದರು. ಈ ಗೊಂದಲ ತಪ್ಪಿಸಲು ಗುರುಗಳೂ ಒಂದು ಉಪಾಯ ಮಾಡಿದರು. ಶ್ಯಾನುಭೋಗರ ಮಗ ಕೃಷ್ಣಮೂರ್ತಿ, ಮತ್ತೊಬ್ಬರು ಎಚ್. ಕೃಷ್ಣಮೂರ್ತಿ, ಇವರಿಗೆ ಮತಿಘಟ್ಟದ ಕೃಷ್ಣಮೂರ್ತಿ. ಹೀಗೆ ಇವರಿಗೆ ಊರಿನ ಹೆಸರು ಬಳಕೆಗೆ ಬಂತು. ಎಚ್. ಕೃಷ್ಣಮೂರ್ತಿಯವರು ಬೆಂಗಳೂರಿನಲ್ಲಿ ಜಯನಗರದ ೩ನೇ ಬ್ಲಾಕ್‌ನಲ್ಲಿ ಕಣ್ಣಿನ ಖಾಸಗೀ ಆಸ್ಪತ್ರೆ (ಕಣ್ಣಿನ ಆಸ್ಪತ್ರೆ) ಇಟ್ಟಿದ್ದಾರೆ. ಮ.ಕೃ. ಈ ಹೆಸರನ್ನೆ ತಮ್ಮ ಬರಹಕ್ಕೂ ಬಳಸಿಕೊಂಡರು. ಕೆಲವರ ಬಾಯಲ್ಲಿ, ರೇಡಿಯೋ ಕಾರ್ಯಕ್ರಮದ ನೇರ ಪ್ರಸಾರದ ಕಾಲದಲ್ಲಿ ಮತಿಗೆಟ್ಟ ಆದದ್ದೂ ಉಂಟು. ಅದನ್ನು ಕೇಳಿ ನಕ್ಕು ಸರಿಯಾಗಿ ಹೇಳಿದ್ದಾರೆ ಎಂದು ತಮ್ಮನ್ನು ತಾವೇ ಹಾಸ್ಯ ಮಾಡಿಕೊಂಡಿದ್ದರು. ಮ.ಕೃ. ಬೇಲೂರಿನಲ್ಲಿ ತಮ್ಮಯ್ಯನವರ ಛತ್ರದಲ್ಲಿ ವಾಸ್ತವ್ಯ. ಹಲವರ ಮನೆಯಲ್ಲಿ ವಾರಾನ್ನದ ಊಟ, ಕಾಳಾಜೋಯಿಸರ ಮನೆಯಲ್ಲಿ ವಾರದಲ್ಲಿ ಒಂದು ದಿನ ಊಟದ ಏರ್ಪಾಡಾಗಿತ್ತು. ಆದರೆ ಬೇರೆಯವರ ಮನೆಯಲ್ಲಿ ಸಮಯಕ್ಕೆ ಸರಿಯಾಗಿ ಅಡಿಗೆ ಆಗದಿದ್ದರೆ, ಕಾಳಾಜೋಯಿಸರ ಮನೆಯಲ್ಲಿ ಊಟಕ್ಕೆ ಹೋಗುತ್ತಿದ್ದರು.

ಪ್ರತಿ ಶನಿವಾರ ಮಧ್ಯಾಹ್ನ ಬೇಲೂರು ಬಿಡುವುದು. ನಡೆದುಕೊಂಡು ರಾತ್ರಿ ಹೊತ್ತಿಗೆ ಮತಿಘಟ್ಟಕ್ಕೆ ಹೋಗುವುದು ದಾರಿಯಲ್ಲಿ ಸಿಕ್ಕಿದ ಹಳ್ಳಿಯವರನ್ನು ಮಾತನಾಡಿಸುತ್ತ, ಮರಗಳಲ್ಲಿ ಬಿಟ್ಟ ಹಣ್ಣುಗಳನ್ನು ತಮ್ಮ ದೊಡ್ಡ ಜೇಬಿಗೆ ಸೇರಿಸುತ್ತ, ದಾರಿ ಉದ್ದಕ್ಕೂ ತಿನ್ನುತ್ತ ಆಡುತ್ತ ಬರುತ್ತಿದ್ದರು. ಮ.ಕೃ ಮನೆಯಲ್ಲಿ ಅಮ್ಮ ಮಾಡಿದ ಕ್ಯಾಸಕ್ಕಿ ಅನ್ನ, ರಾಗಿ ರೊಟ್ಟಿ, ಗಟ್ಟಿ–ಮೊಸರು–ಕಾಯಿ ಚಟ್ನಿ ತಿನ್ನುವುದು ಅಮ್ಮ ಅಪ್ಪನೊಡನೆ ಮಾತುಕಥೆ ಮತ್ತು ಭಾನುವಾರ ಮಧ್ಯಾಹ್ನ ಹೊರಟು ರಾತ್ರಿ ಬೇಲೂರು ಸೇರುವುದು. ಇದು ಪ್ರತಿವಾರ ನಡೆಯುತ್ತಿದ್ದ ಕಾರ್ಯಕ್ರಮ. ಈ ನಡಿಗೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಮೊದಲ ಹೆಜ್ಜೆಯಾಯಿತು.

ಸ್ವಾತಂತ್ರ್ಯ ಸಂಗ್ರಾಮದ ಪ್ರಾರಂಭದ ದಿನಗಳು, ಬೇಲೂರಿಗೆ ಮಹಾತ್ಮ ಗಾಂಧೀಜಿಯವರು ಭೇಟಿ ಇತ್ತು ಬ್ರಿಟಿಷರ ವಿರುದ್ಧ, ಅವರ ರೀತಿ ರಿವಾಜುಗಳನ್ನು ಖಂಡಿಸಿ ಭಾಷಣ ಮಾಡಿದರು. ಅವರ ಭಾಷಣವನ್ನು ಕೇಳಿದ ಮ.ಕೃ ತಾವು ಧರಿಸುತ್ತಿದ್ದ ಮಿಲ್ ಬಟ್ಟೆಯನ್ನು ಸುಟ್ಟರು ಖಾದಿ ಧರಿಸಲು ಪ್ರಾರಂಭಿಸಿದರು. ಗಾಂಧಿ ತತ್ವವನ್ನು ಬಲವಾಗಿ ನಂಬಿ ತಮ್ಮ ಜೀವನದ ಕೊನೆಯವರೆಗೂ ಆಚರಣೆಗೆ ತಂದರು ಮ.ಕೃ. ಎಲ್. ಎಸ್. ಪಾಸಾದ ನಂತರ ಚಿಕ್ಕಮಗಳೂರಿನ ಹೈಸ್ಕೂಲ್‌ಗೆ ಸೇರಲು ಹೋದರು. ಅಲ್ಲಿ ಕೋಟೆ ಶ್ರೀಕಂಠಯ್ಯನವರ ಮನೆಯಲ್ಲಿ ವಾಸ. ವಾರನ್ನದ ಊಟ, ಶ್ರೀಕಂಠಯ್ಯನವರ ಮಗ ಸಚ್ಚಿದಾನಂದ ಮತ್ತು ಮ.ಕೃ. ಒಂದೇ ತರಗತಿಯಲ್ಲಿ

ಓದುತ್ತಿದ್ದರು. ಇಬ್ಬರು ಹೆಣ್ಣುಮಕ್ಕಳು ಇವರಿಗಿಂತ ಚಿಕ್ಕವರು. ಮನೆಯವರೆಲ್ಲ ಮ.ಕೃ. ಅವರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು.

ಮ.ಕೃ. ಅವರದು ಬಹಳ ಸಂಕೋಚದ ಸ್ವಭಾವ. ಹಳ್ಳಿಯಿಂದ ಬಂದವರೆಂದು ಕೆಲ ಹುಡುಗರಿಗೆ ಇವರೊಡನೆ ಸ್ನೇಹ ಮಾಡಿಕೊಳ್ಳಲು ಇಷ್ಟವಿಲ್ಲ. ಇವರು ತರಗತಿಯಲ್ಲಿ ಆದಷ್ಟು ಹಿಂದೆ ಕುಳಿತುಕೊಳ್ಳುತ್ತಿದ್ದರು. ತರಗತಿಯಲ್ಲಿ ನಡೆದ ಟೆಸ್ಟ್‌ನ ಅಂಕಗಳನ್ನು ತಿಳಿಸಿದಾಗ ಇಂಗ್ಲೀಷ್‌ನಲ್ಲಿ ಇವರೇ ಹೆಚ್ಚಿನ ಅಂಕಗಳಿಸಿದ್ದರು. ಇಂಗ್ಲೀಷ್‌ನಲ್ಲಿ ಜಾಣರಾಗಿದ್ದ ವಿದ್ಯಾರ್ಥಿಗಳಿಗೆಲ್ಲಾ ಅಚ್ಚರಿ. ಕೆಲವು ವಿದ್ಯಾರ್ಥಿಗಳು ತಾವಾಗಿಯೇ ಬಂದು ಮ.ಕೃ. ಅವರ ಸ್ನೇಹಿತರಾದರು. ಒಬ್ಬ ಶ್ರೀಮಂತ ಹುಡುಗ ತಮ್ಮ ಮನೆಗೆ ಬಂದು ಪಾಠ ಹೇಳಿಕೊಡಬೇಕೆಂದು ಕೇಳಿಕೊಂಡ ಇಬ್ಬರೂ ಶಾಲೆ ಬಿಡುವವರೆವಿಗೂ ಆತ್ಮೀಯ ಸ್ನೇಹಿತರಾಗಿದ್ದರು.

ಈ ಘಟನೆಯಿಂದ ಗ್ರಾಮದ (ಹಳ್ಳಿಯ) ಹುಡುಗರು ಪಟ್ಟಣದ ಹುಡುಗರಿಗಿಂತ ಕಡಿಮೆ ಅಲ್ಲ ಎಂಬ ಭಾವನೆ ಬಂದು ಶಾಲೆಯ ಎಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಮ.ಕೃ. ಹೈಸ್ಕೂಲ್ ಓದುವಾಗಲೂ ಕೂದಲು ಇತ್ತು. ಶಾಲೆಯಲ್ಲಿ ಕೂದಲಿದ್ದ ಹುಡುಗರು ಅಲ್ಲೊಬ್ಬರು ಇಲ್ಲೊಬ್ಬರು. ಕ್ರಾಫ್ ಬಿಡುವ ವಿದ್ಯಾರ್ಥಿಗಳೇ ಹೆಚ್ಚು. ಸಚ್ಚಿದಾನಂದನೂ ಕ್ರಾಫ್ ಬಿಟ್ಟಿದ್ದ. ಮನೆಯ ಹೆಣ್ಣು ಮಕ್ಕಳಿಗೆ ಇವರ ಕೂದಲಿನ ಮೇಲೆ ಕಣ್ಣು. ಆಗಾಗ ಅವರು "ಕೃಷ್ಣಮೂರ್ತಿ ಕ್ರಾಫ್ ಬಿಡೊ ನಾವು ಚೌರಿಯನ್ನಾದರೂ ಮಾಡಿಕೊಳ್ತಿವಿ" ಅಂತ ಹೇಳುತ್ತಿದ್ದರು. ತಮ್ಮ ಕೂದಲ ಬಗ್ಗೆ ಹೆಮ್ಮೆ ಇದ್ದ ಮ.ಕೃ. ಸುತರಾಂ ಒಪ್ಪಲಿಲ್ಲ. ಒಂದು ದಿನ ಬೆಳಗ್ಗೆ ಎದ್ದಾಗ ಕೂದಲು ಕತ್ತರಿಸಿದ್ದನ್ನು ಕಂಡು ಮ.ಕೃ. ತುಂಬಾ ಪೇಚಾಡಿದರು. ಆದುದೇನೆಂದರೆ ರಾತ್ರಿ ಒಂದು ಹೊತ್ತಿನಲ್ಲಿ ಸಚ್ಚು ಹಾಗೂ ಅವರ ತಂಗಿಯರು ಸೇರಿ ಕೂದಲು ಕತ್ತರಿಸಿದ್ದರು. ವಿಧಿ ಇಲ್ಲದೇ ಕ್ರಾಫ್ ಬಿಡಬೇಕಾಯಿತು ಮ.ಕೃ.

ಮ.ಕೃ. ಅವರ ತಾಯಿ ಚನ್ನಮ್ಮ ಮುಂಜಾನೆಯಿಂದ ಮಲಗುವವರೆವಿಗೂ ಒಂದಲ್ಲ ಒಂದು ಹಾಡು ಹೇಳುತ್ತಿದ್ದರು. ಕೋಲಾಟ ಆಡುವಾಗ ಹಳ್ಳಿಯ ಯುವಕರು, ರಾಗಿ ಬೀಸುವಾಗ ರೈತ ಮಹಿಳೆಯರು ಹಾಡು ಹೇಳುತ್ತಿದ್ದರು. ಮದುವೆ ಮುಂತಾದ ಕಡೆಗಳಲ್ಲಿ ಒಸಗೆ ಪದಗಳನ್ನು ಹಾಡುತ್ತಿದ್ದರು. ಅಕ್ಕನ ಮದುವೆಯಲ್ಲಿಯೂ ಅಕ್ಕನಿಗೆ ಕೆಲವು ಸಂಪ್ರದಾಯದ ಹಾಡುಗಳನ್ನು ಬರೆದುಕೊಟ್ಟು ಅವುಗಳನ್ನು ಬಾಯಿಪಾಠ ಮಾಡಿಸಿದ್ದರು ಮ.ಕೃ.

ಹೈಸ್ಕೂಲ್‌ನಲ್ಲಿ ಓದುತ್ತಿದ್ದಾಗ ೧೯೫೬ರಲ್ಲಿ ಶ್ರೀಯುತ ಮಾಸ್ತಿ ಹಾಗೂ ಶ್ರೀಯುತ ಬೇಂದ್ರೆಯವರು ಬಂದು ಗರತಿಯ ಹಾಡಿನ ಕರಡುಪ್ರತಿಯ ಪರಿಚಯ ಮಾಡಿದ್ದರು.

ಜೊತೆಗೆ ನಿಮ್ಮ ಹಳ್ಳಿಯಲ್ಲಿರುವ ಹಾಡುಗಳನ್ನು ಸಂಗ್ರಹಿಸಬೇಕೆಂದೂ ತಿಳಿಸಿದ್ದರು. ಆಗಲೇ ತಮ್ಮ ಹಳ್ಳಿಯಲ್ಲಿರುವ ಜನಪದ ಸಾಹಿತ್ಯವನ್ನು (ಹಾಡುಗಳನ್ನು) ಸಂಗ್ರಹಿಸಬೇಕೆಂದು ತೀರ್ಮಾನಿಸಿದರು. ಮ.ಕೃ. ಈ ಸಂಗ್ರಹ ಕಾರ್ಯ ಅವರ ೯೩ರ ಇಳಿವಯಸ್ಸಿನಲ್ಲಿಯೂ ಬನವಾಸಿಯವರೆವಿಗೂ ಕರೆದೊಯ್ದಿತ್ತು.

ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಬೆಂಗಳೂರಿಗೆ ಬಂದು ಅಣ್ಣನ ಮನೆಯಲ್ಲಿದ್ದು ಕಾಲೇಜಿಗೆ ಸೇರಿದರು. ಅವರನ್ನು ಅನುಸರಿಸಿ ವ್ಯವಸಾಯವನ್ನು ಕೈಗೊಂಡರು. ಅಣ್ಣ ಅತ್ತಿಗೆಯನ್ನು ಕಂಡರೆ ಮ.ಕೃ.ಗೆ ಬಹಳ ಗೌರವ–ಪ್ರೀತಿ, ವಿಶ್ವಾಸ. ಅತ್ತಿಗೆ ಶಾರದಮ್ಮನವರು ಸಹ ಮರಿ ಎಂದೇ ಕರೆಯುತ್ತಿದ್ದರು. ಮೈದುನನೊಡನೆ ಮುಕ್ತವಾಗಿ ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಶಾರದಮ್ಮನವರು ಮರಣ ಹೊಂದಿದ ವಾರದ ಮುಂಚೆ ಮ.ಕೃ. ಮನೆಗೆ ಬಂದು, ಊಟಮಾಡಿ ಪಗಡೆ ಆಡಿ ಹೋಗಿದ್ದರು. ಪಗಡೆ ಆಟದಲ್ಲಿ ಅತ್ತಿಗೆ–ಮೈದುನ ಸರಿಸಮನಾದ ಆಟಗಾರರಾಗಿದ್ದರು.

ಆ ಹೊತ್ತಿಗೆ ಸ್ವಾತಂತ್ರ್ಯದ ಹೋರಾಟ ದೇಶದೆಲ್ಲೆಡೆ ಹರಡಿತ್ತು. ಮೊದಲೇ ಗಾಂಧಿ ತತ್ವವನ್ನು ನಂಬಿದ್ದ ಮ.ಕೃ. ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿದ್ಯಾಭ್ಯಾಸ ನಿಲ್ಲಿಸಿ ಮತಿಘಟ್ಟಕ್ಕೆ ತೆರಳಿದರು. ಆಗ ಟಿ.ಸಿಎಚ್. ಓದುತ್ತಿದ್ದ ಅಣ್ಣ ಮುತ್ತುರಾಮಸ್ವಾಮಿ ಓದು ಮುಗಿಸಿ ಹಳ್ಳಿಗೆ ಬಂದರು. ಮ.ಕೃ. ೧೯೩೧ರಲ್ಲಿ ಇಂಟರ್ ಮೀಡಿಯಟ್ ಓದಿ ಉತ್ತೀರ್ಣರಾದರು. ಜೊತೆಗೆ ಖಾದಿ ಪ್ರಚಾರ, ವಯಸ್ಕರ ಶಿಕ್ಷಣ, ಕಾರ್ಯಕ್ರಮವನ್ನು ಹಮ್ಮಿಕೊಂಡರು. ಹೊಲದ ಕೆಲಸಕ್ಕೆ ಹಾಡು ಬರುತ್ತಿದ್ದವರನ್ನೆ ಕರೆಯುತ್ತಿದ್ದರು, ತಮ್ಮ ತೋಟದಲ್ಲಿದ್ದ ಮಲ್ಲಿಗೆ ಹೂ ಕೊಡುವುದಾಗಿ ಹೇಳಿ ಹಾಡು ಹೇಳಿಸುತ್ತಿದ್ದರು. ಈ ರೀತಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಧಾರವಾಡದ ಜಯಕರ್ನಾಟಕ ಪತ್ರಿಕೆಗೆ ಪ್ರಕಟಿಸಲು ಕಳುಹಿಸುತ್ತಿದ್ದರು.

ಆಗ ಆರ್ಥಿಕ ಮುಗ್ಗಟ್ಟಿನ ಕಾಲ (ಬರಗಾಲ ಬೇರೆ) ರೈತ ಬೆಳೆದ ದವಸ ಧಾನ್ಯಗಳಿಗೆ ಸರಿಯಾದ ಬೆಲೆ ಇರಲಿಲ್ಲ. ಕೃಷಿಕರು ನೆಲ ಕಚ್ಚಿದ್ದರು. ಒಂದು ಮಣ ಬೆಲ್ಲಕ್ಕೆ ೪ ಆಣೆ, ೧ ಮಣ ಹತ್ತಿಗೆ ೪ ಆಣೆ, ಒಂದು ಪಲ್ಲ ರಾಗಿಗೆ ೨.೫ ರೂ. ೧ರೂ.ಗೆ ೨೬–೨೮ ಸೇರು ಅಕ್ಕಿ, ೧೧೦೦ ತೆಂಗಿನ ಕಾಯಿಗೆ ೧೮ರೂ. ಇವರು ೩೦–೪೦ ಪಲ್ಲ ರಾಗಿ ಬೆಳೆದರೂ ೧೫೦/– ಕಂದಾಯ ಕೊಡಲು ಸಾಧ್ಯವಾಗುತ್ತಿರಲಿಲ್ಲ.

ಬರದ ಕಾಲದಲ್ಲಿ ರೈತರಿಗೆ ಕೆಲಸವಿಲ್ಲದೆ, ಹೊಟ್ಟೆಗಿಲ್ಲದೇ ಬಳಲುತ್ತಿದ್ದರು. ಇದನ್ನು ಕಂಡು ಸರ್ಕಾರದಿಂದ ಪರಿಹಾರ ಪಡೆಯಬೇಕೆಂದು ನಿರ್ಧರಿಸಿದರು. ಮ.ಕೃ. ಜಿಲ್ಲಾಧಿಕಾರಿಗಳ ಬಳಿಗೆ ಹೋಗಿ ತಮ್ಮ ಹಳ್ಳಿಯ ಜನರ ಪರಿಸ್ಥಿತಿಯನ್ನು ಮನಕರಗುವಂತೆ ತಿಳಿಸಿದರು. ಇವರ ಮಾತಿನ ವೈಖರಿಗೆ ಪ್ರಭಾವಿತರಾದ ಜಿಲ್ಲಾಧಿಕಾರಿಗಳು ಜನರಿಂದ

ಯಾವುದಾದರೂ ಕೆಲಸ ಮಾಡಿಸಿ ತೋರಿಸಿ, ಉಗ್ರಾಣದಲ್ಲಿರುವ ಧಾನ್ಯವನ್ನು ಕೂಲಿಯಾಗಿ ಕೊಡುವುದಾಗಿ ಹೇಳಿದರು. ಮ.ಕೃ. ತಮ್ಮ ಹಳ್ಳಿಗೆ ರಸ್ತೆ ಹಾಗೂ ಚರಂಡಿ ಮಾಡಿಸುವುದಾಗಿ ಹೇಳಿ ಅವರನ್ನು ಒಪ್ಪಿಸಿ ಬಂದರು. ಹಳ್ಳಿಯ ಜನಕ್ಕೆ ಈ ವಿಷಯ ತಿಳಿಸಿದಾಗ ಜನಕ್ಕೆ ನಂಬಿಕೆ ಬರಲಿಲ್ಲ. ಜೊತೆಗೆ ಕೆಲಸ ಮಾಡಲು ತ್ರಾಣವೂ ಇರಲಿಲ್ಲ. ತಮ್ಮ ಮಾತನ್ನು ಕೇಳುವ ಕೆಲವು ಜನರನ್ನು ಮಕ್ಕಳನ್ನು ಕರೆತಂದು, ತಾವು ಸೇರಿ ಸ್ವಲ್ಪದೂರ ರಸ್ತೆ ಮಾಡಿದರು. ಕೆಲವರ ಹೆಸರನ್ನು ಸೇರಿಸಿ ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ತೋರಿಸಿದರು. ಜಿಲ್ಲಾಧಿಕಾರಿಗಳು ಕೊಟ್ಟ ಎರಡು ಮೂಟೆ ರಾಗಿಯನ್ನು ಕೂಲಿಯಾಗಿ ತಂದರು. ಧಾನ್ಯವನ್ನು ಕಂಡ ಹಳ್ಳಿಗರು ನಾಮುಂದು-ತಾಮುಂದೆಂದು ಗುದ್ದಲಿ ಪಿಕಾಸಿಗಳನ್ನು ತಂದು ರಸ್ತೆ ಕೆಲಸಕ್ಕೆ ಬಂದರು. ಗಂಡಸರು ಹೆಂಗಸರು-ಮಕ್ಕಳೆನ್ನದೆ ದುಡಿದು ಊರಿಗೆ ರಸ್ತೆ ಚರಂಡಿ ಮಾಡಿದರು. ಗುಡ್ಡದಿಂದ ಆಚೆ ಬದಿಗೆ ಹೋಗಲು ಮಣ್ಣು ರಸ್ತೆ (ಕಚ್ಚಾರಸ್ತೆ) ಮಾಡಿಸಿದರು. ಸರ್ಕಾರದಿಂದ ಮಂಜೂರಾಗಿ ಆ ರಸ್ತೆ ಈಗ ಒಳ್ಳೆಯ ರಸ್ತೆಯಾಗಿ ಮಾರ್ಪಟ್ಟಿದೆ. ಸಧ್ಯದಲ್ಲೆ ಬಸ್ಸಿನ ಓಡಾಟವೂ ಪ್ರಾರಂಭವಾಗಲಿದೆ. ಮತಿಘಟ್ಟಕ್ಕೂ ಈಗ ಬಸ್ ಸೌಲಭ್ಯವಿದೆ. ಮುತ್ತುರಾಮ ಸ್ವಾಮಿ ಹಾಗೂ ಅವರ ಮಗ ಶಿವಸ್ವಾಮಿ- ಮುಂದಾಳತ್ವದಲ್ಲಿ ಹಳ್ಳಿಗರ ನೆರವಿನಿಂದ ಈಗ ಊರಿನಲ್ಲಿ ಪ್ರಾಥಮಿಕ ಶಾಲೆ, ಬಸ್ ಸೌಕರ್ಯ, ನೀರಿನ ಸೌಕರ್ಯ, ವಿದ್ಯುತ್ ಸೌಕರ್ಯಗಳನ್ನು ಈಗ ಕಾಣಬಹುದು. ಈಗಲೂ ಮತಿಘಟ್ಟಕ್ಕೆ ಹೋದರೆ ಅಂದು ಮಕ್ಕಳಾಗಿ ಕೆಲಸ ಮಾಡಿದವರು ಇಂದಿನ ಹಿರಿಯರು ಅಂದಿನ ಘಟನೆಯನ್ನು ಹೇಳಿ ಮರಿಅಯ್ಯನವರನ್ನು ಕೃತಜ್ಞತೆಯಿಂದ ಗೌರವದಿಂದ ಸ್ಮರಿಸಿಕೊಳ್ಳುತ್ತಾರೆ.

ಮ.ಕೃ. ಅವರು ತೋರಿಕೆಗಾಗಿ ಗಾಂಧೀವಾದಿಯಾಗದೆ ಮಾನಸಿಕವಾಗಿಯೂ (ಆಚರಣೆಯಲ್ಲಿ) ಗಾಂಧಿ ತತ್ವವನ್ನು ನಂಬಿದವರು. ಆಚರಣೆಗೆ ತಂದವರು ಮ.ಕೃ.

ಹಾಸನದ ಹೆಸರಾಂತ ನಾಟೀ ವೈದ್ಯರು ಹೆಚ್. ಕೃಷ್ಣಮೂರ್ತಿಗಳು ಇವರು ಎರಡು ಔಷಧಿ ಅಂಗಡಿಯನ್ನು ಇಟ್ಟು ಕೊಂಡಿದ್ದರು. (ಕೃಷ್ಣ ಮೆಡಿಕಲ್ ಹಾಲ್) ಬಹಳ ಶ್ರೀಮಂತರು. ಮತಿಘಟ್ಟ ಕೃಷ್ಣಮೂರ್ತಿಯವರ ತಾಯಿ ಚೆನ್ನಮ್ಮ ಹಾಗೂ ಹೆಚ್. ಕೃಷ್ಣಮೂರ್ತಿಯವರ ಪತ್ನಿ ಲಕ್ಷ್ಮೀದೇವಮ್ಮ ನೆಂಟರು. ಹಾಗಾಗಿ ಆಗಾಗ್ಗೆ ಮ.ಕೃ. ಅವರ ಅಣ್ಣ ಮುತ್ತುರಾಮಸ್ವಾಮಿ ಹಾಸನಕ್ಕೆ ಹೋದಾಗ ಅವರ ಮನೆಗೆ ಹೋಗುತ್ತಿದ್ದರು. ಹಾಗೂ ತಂಗುತ್ತಿದ್ದರು.

ಒಮ್ಮೆ ಹೆಚ್. ಕೃಷ್ಣಮೂರ್ತಿಯವರು ಮುತ್ತುರಾಮಸ್ವಾಮಿಗೆ "ನಿಮ್ಮ ಮರಿಗೆ ನನ್ನ ಮಗಳು ಲಲಿತನ್ನ ಯಾಕೆ ತಂದುಕೊಳ್ಳಬಾರದು" ಎಂದು ಕೇಳಿದರು. ಆಗ ಮುತ್ತುರಾಮಸ್ವಾಮಿ "ಆಗಲಿ ನನ್ನ ಮನೆಯಲ್ಲಿ ವಿಚಾರಿಸ್ತಿನಿ" ಅಂದ್ರು.

ತಮ್ಮನಿಗೆ ಬಂದು ತಿಳಿಸಿದರು. ಅಣ್ಣ ಗುಂಡಪ್ಪನವರ ಮದುವೆಯಲ್ಲಿ ಪುರಿ ಉಂಡೆಗಾಗಿ ತೊಟ್ಟಿ ತುಂಬ ಉರುಳಾಡಿದ ಹುಡುಗಿ ಎಂದು ತಿಳಿದು, ಮತ್ತೆ ಹುಡುಗಿ ನೋಡುವ ಗೋಜಿಗೂ ಹೋಗದೇ ಒಪ್ಪಿಗೆ ಕೊಟ್ಟರು. ಮ.ಕೃ. ಮನೆಯವರನ್ನೆಲ್ಲಾ ಕೇಳಿ ಮದುವೆ ನಿಶ್ಚಯಿಸಿದರು. ಮುತ್ತು, ಸಂಬಂಧದ ಹುಡುಗಿ, ರೂಪವಂತೆ, ಗುಣವಂತೆ, ವಿದ್ಯಾವಂತೆ (೩ನೇ ತರಗತಿ ಓದಿದ್ದಳು) ಎಂಬ ಅಭಿಮಾನವಿದ್ದರೂ, ಹುಡುಗಿ ನೋಡೋ ಶಾಸ್ತ್ರನೂ ಮಾಡದೆ ಒಪ್ಪಿಗೆ ಕೊಡೋದೆ ಅಂತ ಪೇಚಾಡಿಕೊಂಡರು ಚೆನ್ನಮ್ಮ.

ಲಲಿತಮ್ಮ ಚೆಲುವೆಯಾದ ಹುಡುಗಿ, ಮದುವೆಯಾದಾಗ ೧೪ ವರ್ಷ. ಕಸ್ತೂತಿ ಕೆಲಸದಲ್ಲಿ ಜಾಣೆ, ಸಣ್ಣ ವಿವಿಧ ಬಣ್ಣದ ಮಣಿಗಳಿಂದ ತೇರು, ದಮಾಸ್ ಬಟ್ಟೆಯಿಂದ (ಕತ್ತರಿಸಿ) ಹೂ, ಬಳ್ಳಿ, ಇತ್ಯಾದಿ ಹೊಲಿಯುತ್ತಿದ್ದರು. ದೇವರನಾಮವನ್ನು ಮಧುರವಾಗಿ ಹಾಡುತ್ತಿದ್ದರು. ಸ್ವಲ್ಪ ಸಂಗೀತವೂ ಬರುತ್ತಿತ್ತು. ಅಷ್ಟೆ ಹಠವಾದಿ, ಜೋರು, ಸ್ವಾಭಿಮಾನಿ ಹುಡುಗಿ ಲಲಿತಮ್ಮ, ಮನೆಯಲ್ಲಿ ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದರು. ಇವರು ಹುಟ್ಟಿದ್ದು ಎರಡನೇ ಮಹಾಯುದ್ಧದ ಸಮಯ. ಆಗ ಎಲ್ಲಾ ಕಡೆ ಮಲೇರಿಯಾ ಬಂದು ಕ್ವಿನಯನ್ (ಕ್ವಿನೈನ್) ಮಾತ್ರೆಗೆ ಬಹಳ ಬೇಡಿಕೆ ಬಂತು. ಕಸದ ಮೂಲೆಯಲ್ಲಿ ಬಿದ್ದಿದ್ದ ಮಾತ್ರೆಯು ಹೇಳಿದಷ್ಟು ಬೆಲೆಗೆ ಮಾರಾಟವಾಯಿತು. ಹೆಚ್. ಕೃಷ್ಣಮೂರ್ತಿಯವರ ಮನೆಗೆ ಹಣದ ಹೊಳೆಯೇ ಹರಿದು ಬಂತು. ಹಾಗಾಗಿ ಲಲಿತಮ್ಮ ಮನೆಗೆ ಅದೃಷ್ಟದ ಮಗುವಾಗಿದ್ದಳು. ೧೯೩೪ರ ಕಾಲದಲ್ಲಿ ಮದುವೆಗೆ ಹೆಣ್ಣಿನ ಒಪ್ಪಿಗೆ ಅಷ್ಟು ಮುಖ್ಯವಾಗಿರಲಿಲ್ಲ. ಯಾರು ಅವಳನ್ನು ಕೇಳುತ್ತಲೂ ಇರಲಿಲ್ಲ. ಆದರೆ ಮ.ಕೃ ತಮ್ಮ ಭಾವಿ ಮಾವನವರಿಗೆ ಕಾಗದ ಬರೆದು, ಹುಡುಗಿಯ ಒಪ್ಪಿಗೆಯನ್ನು ಕೇಳಿ ತಮಗೆ ತಿಳಿಸಬೇಕೆಂದು ಕೇಳಿಕೊಂಡಿದ್ದರು. ಆದರೆ ಇದು ಒಂದು ಹುಚ್ಚಾಟ ಎಂದೂ ಮಾವನವರು ಕಾಗದವನ್ನು ಹರಿದು ಹಾಕಿದರು. ಮ.ಕೃ. ಅವರಿಗೆ ಉತ್ತರವನ್ನೇ ಬರೆಯಲಿಲ್ಲ. ಮದುವೆ ಬಹಳ ಸರಳವಾಗಿ ನಡೆಯಿತು.

ಮ.ಕೃ ಅವರ ಅಪೇಕ್ಷೆಯಂತೆ ಖಾದಿ ಜುಬ್ಬ, ಪಂಚೆ, ಉತ್ತರೀಯ ಕರೀವೇಸ್ಟ್ ಕೋಟು, ಕಾರಣ ಹೆಚ್. ಕೃಷ್ಣಮೂರ್ತಿಯವರು ಮೊಣಕಾಲಿನ ಮೇಲೆ ಕಚ್ಚೇಪಂಚೆ, ಮೇಲೊಂದು ಉತ್ತರೀಯ ಧರಿಸುತ್ತಿದ್ದರು. ಅವರ ಮನೆಯಲ್ಲೂ ಖಾದಿ ಧರಿಸುತ್ತಿದ್ದ ಮಕ್ಕಳಿದ್ದರು. (ಗಾಂಧೀವಾದಿಗಳು) ಮ.ಕೃ. ಅವರಿಗೆ ಹತ್ತು (೧೦) ಹೆಣ್ಣು ಮಕ್ಕಳು ಒಬ್ಬ ಮಗ ಮೊದಲನೆ ಮಗಳು ಹುಟ್ಟಿದಾಗ ಮಗುವಿಗೆ ಹೊಂಬಾಳೆ ಎಂದು ಹೆಸರಿಟ್ಟರು ಮ.ಕೃ. ಮನೆದೇವರು ನಂಜುಂಡನಾದ್ದರಿಂದ ಉಮಾ ಎಂಬ ಹೆಸರು ರೂಢಿಯಲ್ಲಿ ಬಂತು.

ಹೆಣ್ಣುಮಗು ಹುಟ್ಟಿದಾಗಲೆಲ್ಲಾ ಸಂಬಂಧಿಕರು ಈಗಲೂ ಹೆಣ್ಣೆ ಎಂದು ಹೇಳಿದಾಗಲೂ ಸ್ವಲ್ಪವೂ ಬೇಸರವಿಲ್ಲದೆ ಸಂತಸಪಡುತ್ತಿದ್ದರು ಮ.ಕೃ ದಂಪತಿಗಳು.

ಮಕ್ಕಳನ್ನು ಕಂಡರೆ ಅಪಾರ ಪ್ರೀತಿ ಒಮ್ಮೆಯಾದರೂ ಗದರಿದವರಲ್ಲ. ಎಲ್ಲಾ ಮಕ್ಕಳು ವಿದ್ಯಾವಂತರು, ಎಲ್ಲರೂ ಕೆಲಸದಲ್ಲಿದ್ದವರು. ಈಗ ಕೆಲವರು ನಿವೃತ್ತಿ ಪಡೆದಿದ್ದಾರೆ. ಮೊಮ್ಮಕ್ಕಳಲ್ಲಿ ೪ ಜನ ಇಂಜನೀಯರ್ (ಕಂಪ್ಯೂಟರ್) ಓದುತ್ತಿದ್ದಾರೆ. ಇಬ್ಬರ ಶಿಕ್ಷಣ ಕ್ಷೇತ್ರದಲ್ಲಿದ್ದಾರೆ. ಒಬ್ಬ ಮೊಮ್ಮಗ (Law) ಲಾ ಓದಿದ್ದಾನೆ. ಇಬ್ಬರು ಬಿ.ಎಸ್ಸಿ. ಪದವೀಧರರು.

ಮದುವೆಯಾದ ನಂತರ ವ್ಯವಸಾಯ ಇಬ್ಬರಿಗೆ ಲಾಭದಾಯಕವಲ್ಲವೆಂದು ಬೆಂಗಳೂರಿಗೆ ಬಂದರು ಮ.ಕೃ. ದಂಪತಿಗಳು ಅಣ್ಣನ ಮನೆಯಲ್ಲಿ ನೆಲೆ ನಿಂತರು. ಲಲಿತಮ್ಮನವರು ಎಲ್ಲರೊಡನೆ ಹೊಂದಿಕೊಂಡು ಶಾರದಮ್ಮ ಗುಂಡಪ್ಪನವರನ್ನು ಕಂಡರೆ ಪ್ರೀತಿ ಗೌರವದಿಂದ ಇದ್ದು ಸಂತೋಷವಾಗಿದ್ದರು. ಅವರ ಮನೆಯಲ್ಲಿ ಓದಲು ಬಂದಿದ್ದ ನಾರಾಯಣ-ಸುಬ್ರಹ್ಮಣ್ಯ ಎಂಬ ಇಬ್ಬರು ಲಲಿತಮ್ಮನವರನ್ನು ಪ್ರೀತಿ ವಿಶ್ವಾಸದಿಂದ ಕಂಡರು. ಅನೇಕ ಕೆಲಸಗಳನ್ನು ಅವರಿಂದ ಕಲಿತರು ಲಲಿತಮ್ಮ.

ಸ್ವಲ್ಪ ಸಮಯದ ನಂತರ ವಿಶ್ವೇಶ್ವರಪುರಂನಲ್ಲಿ ಮನೆ ಮಾಡಿದರು. ಅ.ನ.ಕೃ. ಅವರ ಮನೆಯ ಕಾಂಪೌಂಡಿನಲ್ಲಿ ಒಂದು ಚಿಕ್ಕ ಮನೆ. ಅ.ನ.ಕೃ ಅವರ ಪತ್ನಿ ವಾಸಂತಿಕಾದೇವಿ ಹಾಗೂ ಲಲಿತಮ್ಮ ಒಳ್ಳೆಯ ಸ್ನೇಹಿತರು. ಇವರ ಮನೆಯ ಪಕ್ಕದಲ್ಲೆ ಅರಳೀಕಟ್ಟೆ, ಅ.ನ.ಕೃ, ಮ.ಕೃ, ಎಚ್.ಎಸ್. ದೊರೆಸ್ವಾಮಿ ಮುಂತಾದವರು ಸಂಜೆ ಸೇರುತ್ತಿದ್ದ ಜಾಗ ಅರಳಿಕಟ್ಟೆ. ಎಚ್.ಎಸ್. ದೊರೆಸ್ವಾಮಿ ಆಗ ಇಂಟರ್ ಮೀಡಿಯಟ್ ಓದುತ್ತಿದ್ದರು. ಎಲ್ಲರಿಗೂ ಹರಟೆಯ ಜಾಗ ಅರಳೀಕಟ್ಟೆ, ದೇಶದ ಆಗಿನ ಪರಿಸ್ಥಿತಿ, ರಾಜಕೀಯ, ಸಾಹಿತ್ಯ ಎಲ್ಲವೂ ಚರ್ಚೆಯ ವಿಷಯವಾಗಿತ್ತು. ರಾತ್ರಿ ಎಷ್ಟು ಹೊತ್ತಾದರೂ ಇವರ ಚರ್ಚೆ ಮುಗಿಯುತ್ತಿರಲಿಲ್ಲ. ಕೆಲವು ವೇಳೆ ಲಲಿತಮ್ಮ ಒಬ್ಬಳೇ ಇರುವುದನ್ನು ಕಂಡು ತಮ್ಮ ಪತಿಯನ್ನು ಕರೆದು ಹರಟೆಗೆ ಮುಕ್ತಾಯ ಹಾಡಬೇಕಾಗಿತ್ತು ಶ್ರೀಮತಿ ವಾಸಂತಿಕಾದೇವಿಯವರು.

ಚಳುವಳಿಯ ಸಮಯದಲ್ಲಿ ಬಹಳಷ್ಟು ಜನ ಹೋರಾಟಗಾರರು ಮ.ಕೃ. ಅವರಿಗೆ ಸ್ನೇಹಿತರಾದರು. ಕೆಲವು ಸಲ ಮಧ್ಯಾಹ್ನದ ಹೊತ್ತಿಗೆ ಮನೆಯಲ್ಲಿ ಕೆಲವು ಸ್ನೇಹಿತರು ಬರುತ್ತಿದ್ದರು. ಅವರಿಗೆ ಮ.ಕೃ. ಮನೆಯಲ್ಲಿ ಊಟದ ಏರ್ಪಾಡಾಗಬೇಕಾಗುತ್ತಿತ್ತು. ಸ್ನೇಹಿತರಲ್ಲಿ ಎಲ್ಲಾ ಜಾತಿಯವರೂ ಇರುತ್ತಿದ್ದರು. ಒಂದೇ ಪಂಕ್ತಿಯಲ್ಲಿ ಊಟ ಬಡಿಸಲು ಲಲಿತಮ್ಮ ಒಪ್ಪುತ್ತಿರಲಿಲ್ಲ. ಆದರೆ ಎಲ್ಲರೂ ಸಮಾನರು ಎಂದು ನಂಬಿದ್ದ ಮ.ಕೃ. ಅವರ ಹಠದ ಮುಂದೆ ಲಲಿತಮ್ಮನವರು ತಮ್ಮ ನಿಲುವನ್ನು

ಬದಲಿಸಿಕೊಳ್ಳಬೇಕಾಯಿತು. ಮತ್ತೆಂದೂ ಅವರ ಆ ರೀತಿ ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಜಾತಿ ಬೇಧವಿಲ್ಲದೇ ಎಲ್ಲರನ್ನು ಸಮನಾಗಿ ಕಂಡರು.

ಹಳ್ಳಿಯಿಂದ ಬೆಂಗಳೂರಿಗೆ ಬಂದ ನಂತರ, ಶ್ರೀ ಟಿ.ಟಿ. ಶರ್ಮ ಅವರು ನಡೆಸುತ್ತಿದ್ದ ವಿಶ್ವಕರ್ನಾಟಕ ವಾರಪತ್ರಿಕೆಯ ಉಪಸಂಪಾದಕರಾಗಿ ಕೆಲಸಕ್ಕೆ ಸೇರಿದರು. ಅವರ ಮಗ ಶ್ರೀರಂಗ ಅವರ ಪರಿಚಯವಾಯಿತು. ಆನಂತರ ಜಿ.ವಿ. ದೊಡ್ಡವೀರಪ್ಪನವರು ನಡೆಸುತ್ತಿದ್ದ ಮೈಸೂರು (ಇನ್ಸೂರೆನ್ಸ್) ಕಂಪನಿಯಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರಿದರು. ಜೊತೆಗೆ ಆ ಕಂಪನಿ ನಡೆಸುತ್ತಿದ್ದ (ಪ್ರಕಟಿಸುತ್ತಿದ್ದ) ವಿಮೆ–ವಾಣಿಜ್ಯ ಎಂಬ ಪತ್ರಿಕೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತಿತ್ತು. ಆ ಕಾಲದಲ್ಲಿ ಇವರಿಗೆ ಕಾರಿನ ಸೌಲಭ್ಯವನ್ನು ಕಂಪನಿ ಕೊಟ್ಟಿತ್ತು. ಕಂಪನಿಯ ಕಾರ್ಯವನ್ನು ತಿಳಿಸುವ, ಕಥೆ ಪದ್ಯಗಳನ್ನು ರಚಿಸಿ ಅಚ್ಚು ಹಾಕಿಸುತ್ತಿದ್ದರು ಮ.ಕೃ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಶ್ರೀ ಗೋಪಾಲಕೃಷ್ಣ ಅಡಿಗರ, ಕವನ, ಕಥೆಗಳು ಪ್ರಕಟಣೆಗಾಗಿ ಬರುತ್ತಿತ್ತು. ಆ ಕಂಪನಿಯೇ ಮುಂದೆ ಎಲ್.ಐ.ಸಿ. ಆಗಿ ಮಾರ್ಪಟ್ಟಿತು. ಆ ಕಂಪನಿಯ ಒಬ್ಬ ಡೈರೆಕ್ಟರ್ ಅವರಿಂದ ಶ್ರೀಮತಿ ಆರ್. ಕಲ್ಯಾಣಮ್ಮನವರ ಪರಿಚಯವಾಗಿತ್ತು. ಕಲ್ಯಾಣಮ್ಮನವರು ಸ್ಥಾಪಿಸಿದ ಸರಸ್ವತಿ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಹಾಗೂ ಕಲ್ಯಾಣಮ್ಮನವರ ಮಕ್ಕಳ ಕೂಟದಲ್ಲಿ ಸಕ್ರಿಯ ಕಾರ್ಯಕರ್ತರಾದರು ಮ.ಕೃ. ೧೯೭೪ರಲ್ಲಿ ನಡೆದ ಮಕ್ಕಳ ಕೂಟದ ರಜತ ಮಹೋತ್ಸವದಲ್ಲಿ ಸ್ಮರಣ ಸಂಚಿಕೆಯ ಸಂಪಾದಕರು ಆಗಿದ್ದರು.

೧೯೪೦ ರಲ್ಲಿ ಮಯೂರ ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು ಹತ್ತು ತಿಂಗಳು ನಿರಾತಂಕವಾಗಿ ನಡೆಯಿತು, ಸ್ವತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಜೈಲಿಗೆ ಹೋಗಬೇಕಾಯಿತು. ಪತ್ರಿಕೆ ನಿಂತು ಹೋಯಿತು. ಜೈಲಿನಿಂದ ಬಂದ ನಂತರ ಪ್ರಕಟಿಸಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ೧೯೬೧ರ ನಂತರ ತಾಯಿನಾಡು ಕೈಲಾಸ, ಕನ್ನಡಪ್ರಭ ಪತ್ರಿಕೆಯಲ್ಲಿ ಸಂಪಾದಕೀಯ ವರ್ಗದಲ್ಲಿ ಕೆಲಸ ಮಾಡಿದರು. ೧೯೭೫ರಲ್ಲಿ ಜನಪದ ಸಾಹಿತ್ಯ ಪುಸ್ತಕಗಳ ಪ್ರಕಟಣೆಯ ಕಾರ್ಯ ನಿರ್ವಹಿಸಬೇಕಾಗಿತ್ತು. ಎರಡು ಕೆಲಸಗಳು ಸಾಧ್ಯವಿಲ್ಲದ್ದರಿಂದ ಹಿರಿಯ ಮಗಳು ಉಮ ಕೆಲಸ ಬಿಡುವಂತೆ ಸಲಹೆ ಮಾಡಿದಳು. ಕನ್ನಡ ಪ್ರಭದಿಂದ ಸ್ವಯಂ ನಿವೃತ್ತಿ ಪಡೆದರು ಮ.ಕೃ. ಗುರುಮೂರ್ತಿ ಪ್ರಕಾಶನ ಅಡಿಯಲ್ಲಿ ತಾವು ಬರೆದ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು. ನಂತರ ಜನಪದ ಸಾಹಿತ್ಯ ಭಂಡಾರ, ಪ್ರಾರಂಭಿಸಿ, ಅದರ ಮೂಲಕ ತಮ್ಮ ಕೃತಿಗಳನ್ನು ಮತ್ತು ಜನಪದ ಕೃತಿಗಳನ್ನು ಪ್ರಕಟಿಸಿದರು.

ಅ.ನ.ಕೃ. ಅವರ ಮನೆಯನ್ನು ಬಿಟ್ಟು ಡಯಗ್ನಲ್ ರಸ್ತೆಗೆ ಮನೆ ಬದಲಿಸಿವರು. ಮ.ಕೃ ಚಿಕ್ಕಮನೆ, ಮಹಡಿಮನೆ (೧೯೪೨ರಲ್ಲಿ) ಒಬ್ಬಳು ಮಗಳು. ಅಲ್ಲಿ ವಾಸವಾಗಿದ್ದರು, ಕ್ವಿಟ್ ಇಂಡಿಯಾ ಚಳುವಳಿಯ ಸಮಯ ಮ.ಕೃ. ಬ್ರಿಟೀಷರ ವಿರುದ್ಧ ಲೇಖನ ಬರೆದು ಪ್ರಕಟಿಸಿ ಗುಟ್ಟಾಗಿ ಹಂಚುತ್ತಿದ್ದರು. ಈ ವಿಷಯ ತಿಳಿದ ಬ್ರಿಟೀಷ್ ಸರ್ಕಾರದ ಪೋಲಿಸರು ಮ.ಕೃ. ಅವರನ್ನು ಪತ್ರಗಳ ಸಮೇತ ಹಿಡಿಯಲು ಹೊಂಚುಹಾಕುತ್ತಿದ್ದರು. ಎಷ್ಟೋ ಸಲ ರಾಜಕೀಯ ಖೈದಿಯಾಗಿ ಹಿಡಿದು ಆಧಾರವಿಲ್ಲದೆ, ಸಾಕ್ಷಿಗಳಿಲ್ಲದೆ, ಬಿಡುಗಡೆ ಮಾಡಿದ್ದರು. ಬೇಹುಗಾರರು ಮನೆಯಲ್ಲಿ ಕರಪತ್ರ ಇಟ್ಟಿರುವುದನ್ನು ತಿಳಿದು ರಾತ್ರಿ ಮನೆಗೆ ಜಪ್ತಿಗಾಗಿ ಬಂದರು. ಬಾಗಿಲು ತಟ್ಟಿದಾಗ ಎದ್ದು ಬಾಗಿಲು ತೆಗೆದು ನೋಡಿ ಧೃತಿಗೆಡದೆ ಮನೆಯನ್ನು ಶೋಧಿಸಲು ದಾರಿ ಮಾಡಿಕೊಟ್ಟರು ಮ.ಕೃ. ದಂಪತಿಗಳು ಅಟ್ಟದ ಮೇಲೆ (ಹಲಗೆಯದು) ಪುಸ್ತಕ ಹಾಗೂ ಹಾಳೆ ಜೋಡಿಸಿರುವುದನ್ನು ಕಂಡು ಅದೇನೆಂದು ಕೇಳಿದರು ಪೋಲಿಸರು. ತಾವು ಸಾಹಿತಿ ಎಂದೂ, ತಾವು ಬರೆದ ಕಥೆ ಹಾಗೂ ಲೇಖನಗಳು ಇವೆ ಎಂದು ಹೇಳಿದರು. ಮ.ಕೃ. ಆ ಕಟ್ಟನ್ನು ತೆಗೆದು ಮಗುಚಿ ಹಾಕಿ ನೋಡತೊಡಗಿದರು ಪೋಲಿಸರು. ಒಂದೆರಡು ಕಥೆ ಓದಿ, ಹಾಡಿನ ಸಂಗ್ರಹ ಗಮನಿಸಿ, ಕರಪತ್ರ ಸಿಗದೇ ವಾಪಸ್ಸಾದರು. ಪೋಲಿಸರು. ಶಾಂತರಾಗಿ ವೀಕ್ಷಿಸುತ್ತಿದ್ದ ದಂಪತಿಗಳು ಪೋಲಿಸರು ಹೋದ ನಂತರ ಹಾಳೆಗಳನ್ನು ಮಗುಚಿ ಹಾಕಿದಾಗ ಅಲ್ಲಿ ಕರಪತ್ರದ ಕಟ್ಟಿತ್ತು. ಮಗದೊಮ್ಮೆ ಬಚ್ಚಲ ಒಲೆಯ ಒಳಗೆ ಇಟ್ಟು ತಪ್ಪಿಸಿಕೊಂಡಿದ್ದರು. ಇದು ಹೆಚ್ಚು ಕಾಲ ನಡೆಯಲಿಲ್ಲ. ಪಿಕೆಟಿಂಗ್ ಸಮಯದಲ್ಲಿ ಸಿಕ್ಕುಬಿದ್ದು ಹಾಸನದ ಜೈಲಿನಲ್ಲಿ ರಾಜಕೀಯ ಕೈದಿಯಾಗಿ ಇರಬೇಕಾಯಿತು. ಅಲ್ಲಿಯೇ ಶ್ರೀ ಕೆಂಗಲ್ ಹನುಮಂತಯ್ಯ ಶ್ರೀ ಎ.ಜಿ. ರಾಮಚಂದ್ರರಾಯರು, ಕರೀಂಖಾನ್ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ರಾಜಕೀಯ ವ್ಯಕ್ತಿಗಳ ಪರಿಚಯವಾಯಿತು.

ಅಳಿಯ ಜೈಲಿನಲ್ಲಿದ್ದು ಬವಣೆ ಪಡುತ್ತಿರುವನೆಂದು ತಿಳಿದು ಹೆಚ್. ಕೃಷ್ಣಮೂರ್ತಿಯವರ ಮನೆಯಿಂದ ರುಚಿ ರುಚಿಯಾದ ಊಟ ಬರುತ್ತಿತ್ತು. ಅಳಿಯ ಜೈಲಿನಲ್ಲಿರುವ ವಿಷಯ ಮಾವನ ಮನೆಯವರಿಗೆ ಹೆಮ್ಮೆಯ ವಿಷಯವಾಗಿತ್ತು. ಊಟವನ್ನು ಜೈಲಿನಲ್ಲಿರುವ ಸ್ನೇಹಿತರೊಡನೆ ಹಂಚಿ ತಿನ್ನುತ್ತಿದ್ದರು ಮ.ಕೃ. ಜೈಲು ರಾಜಕೀಯ ಕೈದಿಗಳಿಂದ ಭರ್ತಿಯಾಗಿ ಸುಧಾರಿಸಲು ಸಾಧ್ಯವಾಗದೇ ಕೆಲವರನ್ನು ಬಿಡುಗಡೆ ಮಾಡಿದರು. ಅವರಲ್ಲಿ ಮ.ಕೃ. ಸೇರಿದ್ದರು. ಬಿಡುಗಡೆ ಹೊಂದಿದ ನಂತರ ಮತ್ತೆ ಚಳುವಳಿಯನ್ನು ಮುಂದುವರಿಸಿದರು ಮ.ಕೃ.

ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಒಮ್ಮೆ ಒಂದು ಕಾರ್ಯಕ್ರಮದಲ್ಲಿ ಪರಸ್ಪರ ಭೇಟಿಯಾಗಿದ್ದರು. ಕುಶಲೋಪರಿಯನಂತರ ತಮ್ಮನ್ನು ಬಂದು ಕಾಣಬೇಕೆಂದು ತಿಳಿಸಿದರು ಶ್ರೀ ಹನುಂತಯ್ಯನವರು. ಆದರೆ ಸ್ನೇಹಿತರಾಗಿಯೇ ಇರಲು ಇಚ್ಛಿಸಿದ ಮ.ಕೃ. ಮತ್ತೆಂದೂ ಅವರನ್ನು ಕಾಣಲಿಲ್ಲ.

೧೯೪೭ರ ಆಗಸ್ಟ್ ೧೫ ರಂದು ದೇಶಕ್ಕೆ ಬಿಡುಗಡೆಯ ಸಂಭ್ರಮ. ಮ.ಕೃ. ಅವರು ತಮ್ಮ ಕಿಂಚಿತ್ ಸೇವೆ ಫಲಕೊಟ್ಟಿದ್ದನ್ನು ಕಂಡು ಹರ್ಷಿಸಿದರು. ತಮ್ಮ ಸುತ್ತಮುತ್ತ ಇದ್ದ ಜನರಿಗೆ ಸಿಹಿ ಹಂಚಿದರು. ಈ ಸಿಹಿ ಹಂಚುವ ಕಾರ್ಯಕ್ರಮ, ರಾಜ್ಯೋತ್ಸವ, ಆಗಸ್ಟ್ ೧೫, ಜನವರಿ ೨೬ ರಂದು ಇರುತ್ತಿತ್ತು. ಮನೆಯ ಮೇಲೆ ಬಾವುಟ ಹಾರಿಸಿ, ಅಂದು ಮನೆಗೆ ಬಂದ ಎಲ್ಲರಿಗೂ (ರಾತ್ರಿಯವರೆಗೂ) ಸಿಹಿ ಹಂಚುತ್ತಿದ್ದರು. ಈ ಕಾರ್ಯಕ್ರಮವನ್ನು ಕೊನೆಯವರೆವಿಗೂ ನಡೆಸಿಕೊಂಡು ಬಂದರು ಮ.ಕೃ. ಮನೆಯವರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ರಾಜ್ಯ ಸರ್ಕಾರ ಸ್ವಾತಂತ್ರಕ್ಕಾಗಿ ಹೋರಾಡಿದವರಿಗೆ ಮಾಸಾಶನ ಕೊಡುವುದಾಗಿ ಪ್ರಕಟಿಸಿತು. ಕೃಷ್ಣಮೂರ್ತಿಯವರ ಸ್ನೇಹಿತರು, ಬಂಧುಗಳು ಮಾಸಾಶನ ಪಡೆಯಲು ಅರ್ಜಿ ತಂದು ಸಹಿ ಮಾಡಲು ಒತ್ತಾಯಿಸಿದರು. ಆದರೆ ಅವರ ಮಾತು ಒಂದೇ. "ಸ್ವಾತಂತ್ರಕ್ಕಾಗಿ ಹೋರಾಡಿ ಸತ್ತವರು ಎಷ್ಟೋ ಮಂದಿ ಅವರೆಲ್ಲರಿಗಿಂತಲೂ ನಾವು ಅದೃಷ್ಟವಂತರು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ. ತಾಯಿ ಸೇವೆ ಮಾಡಿದ್ದಕ್ಕೆ ಬೆಲೆ ಕಟ್ಟಬಾರದು ಇದು ನನ್ನ ಭಾವನೆ". ಈ ಮಾತನ್ನು ಕೇಳಿ ಬಂದವರು ಸುಮ್ಮನಾಗಬೇಕಾಯಿತು. ಮ.ಕೃ. ಅವರಿಗೆ ಗೊತ್ತಿರುವವರೇ ರಾಜಕೀಯದಲ್ಲಿ ಉನ್ನತ ಸ್ಥಾನದಲ್ಲಿದ್ದರು. ಮಕ್ಕಳ ಉನ್ನತ ಶಿಕ್ಷಣಕ್ಕಾಗಲಿ, ಕೆಲಸಕ್ಕಾಗಲೀ ಅರ್ಜಿ ಹಾಕಿದಾಗ "ಸ್ವಾತಂತ್ರ್ಯ ಹೋರಾಟಗಾರ" ಎಂದು ನಮೂದಿಸಲು, ಅಥವ ಸೀಟಿಗಾಗಿ ಬಂದು ಹೇಳಬೇಕೆಂದು ಕೇಳಿದರೂ ಆ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲು ಇಷ್ಟಪಡಲಿಲ್ಲ. ಬದಲಾಗಿ ಮೆರಿಟ್ ಮೇಲೆ ಕೆಲಸವಾಗಲೀ ಸೀಟಾಗಲಿ ಪಡೆಯಬೇಕೆಂದು ತಿಳಿಸಿ ಮಕ್ಕಳಿಗೆ ಸ್ವಾಭಿಮಾನದ ಬೆಳವಣಿಗೆಗೆ ಕಾರಣರಾದರು. ಯಾವುದೇ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಅತಿಥಿಯಾಗಿ ಕರೆದರೆ ತಕ್ಷಣ ಒಪ್ಪಿ, ಸಭೆಯಲ್ಲಿ ತಮ್ಮ ಹೋರಾಟದ ಅನುಭವಗಳನ್ನು ಹೇಳಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು ಮ.ಕೃ. ೨೦೦೨ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬಂದಾಗಲೂ, ಅನೇಕ ಸೌಲಭ್ಯಗಳು ಸರ್ಕಾರದಿಂದ ಪಡೆಯಬಹುದಾಗಿತ್ತು ಅದರಲ್ಲಿ ಒಂದು, ವೈದ್ಯಕೀಯ ಸೌಲಭ್ಯ, ಯಾವ ಖಾಯಿಲೆಯೂ ಇಲ್ಲದ ತಮಗೆ ಆ ಸೌಲಭ್ಯ ಬೇಡವೆಂದೂ ಅದನ್ನು ಪಡೆಯಲು ಅರ್ಜಿ ಹಾಕಲೇ ಇಲ್ಲ ಮ.ಕೃ.

ಪತ್ರಕರ್ತರಿಗೆ ಕೊಡಲ್ಪಟ್ಟ ಪತ್ರಕರ್ತರ ಬಡಾವಣೆ (ಜರ್ನಲಿಸ್ಟ್ ಕಾಲೋನಿ)ಯಲ್ಲಿ ಸೈಟನ್ನು ಕೊಂಡು ಒಂದು ಚಿಕ್ಕ ಮನೆ ಕಟ್ಟಿದರು ಮ.ಕೃ. ಅದು ಹಿಂದೆ ಇದ್ದ ಭಾರತ್ ಟಾಕೀಸ್ ಎದುರಿನ ಕೆರೆ ಅಂಗಳದಲ್ಲಿ ಇತ್ತು. ತಮ್ಮ ಸ್ನೇಹಿತನಿಗಾಗಿ ಬ್ರೆಡ್ ಸುಡುವ ಒಂದು ದೊಡ್ಡ ಒಲೆಯನ್ನು ಕಟ್ಟಿಸಿ ಸಹಾಯ ಮಾಡಿದ್ದರು. ತಂದೆಯವರ ಮರಣದ ಸುದ್ದಿ ಕೇಳಿ ಸಂಸಾರದೊಂದಿಗೆ ಹಳ್ಳಿಗೆ ಹೋಗಿದ್ದಾಗ ಭಾರಿ ಮಳೆ ಬಂದು, ಕೆರೆ ತುಂಬಿ ಮನೆಯನ್ನು ಮುಳುಗಿಸಿತ್ತು. ವಿಷಯ ತಿಳಿದು ಬಂದ ಮ.ಕೃ.ಗೆ ನೀರು ಬಂದ ಮನೆಯಲ್ಲಿ ವಾಸ ಮಾಡಬಾರದೆಂದು ಹೇಳಿದ ಜನರ ಮಾತನ್ನು ಕೇಳಿ ಆ ಮನೆಯನ್ನು ಮಾರಿದರು. ಮೊದಲ ಇಬ್ಬರು ಮಕ್ಕಳು ಉಮ–ಉಷಾಳನ್ನು ಹಾಸನಕ್ಕೆ ಮಾವನ ಮನೆಗೆ ಓದಲು ಕಳುಹಿಸಿ ಉಳಿದವರನ್ನು ಹಳ್ಳಿಯಲ್ಲಿ ಬಿಟ್ಟು ಬೆಂಗಳೂರಿನಲ್ಲಿ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದರು.

ಮತಿಘಟ್ಟದ ಮನೆಯಲ್ಲಿ ತುಂಬು ಬಸುರಿ ಲಲಿತಮ್ಮ ಸಂಜೆ ಮನೆಯ ಅಂಗಳದಲ್ಲಿ ಗೋಡೆಗೆ ಒರಗಿ ಕಾಲು ಚಾಚಿ ಕುಳಿತಿದ್ದಾಗ ಕೆಳ ಬೆನ್ನು ತಣ್ಣನೆಯ ಅನುಭವವಾಗಲು ತಿರುಗಿ ನೋಡಿದಾಗ ಮಾರುದ್ದದ ನಾಗರಹಾವು ಹರಿದು ಬಚ್ಚಲ ಹಂಡೆಯ ತೊಲೆಯ ಮೇಲೆ ಕುಳಿತದ್ದನ್ನು ಕಂಡು ಗಾಬರಿಯಾಗಿ ಕೂಗಿದಾಗ, ಚನ್ನಮ್ಮ ಹೆದರಬೇಡವೆಂದು ಸೊಸೆಗೆ ಹೇಳಿ ಹಾವು ತಾನಾಗಿಯೇ ಹೋಗುವುದೆಂದು ಸಮಾಧಾನ ಮಾಡಿದರು. ಮುತ್ತುರಾಮಸ್ವಾಮಿಯವರೂ ಊರಲ್ಲಿರಲಿಲ್ಲ. ಆದರೆ ಹೆದರಿದ ಲಲಿತಮ್ಮ ಹುಟ್ಟುವ ಮಗುವಿಗೆ ನಿನ್ನ ಹೆಸರಿಡುವೆನೆಂದು ತೊಂದರೆ ಮಾಡಬೇಡವೆಂದೂ ಬೇಡಿಕೊಂಡರು. ಹಾವು ರಾತ್ರಿಯ ವೇಳೆಗೆ ಅಡಿಗೆ ಮನೆಯಲ್ಲಿದ್ದ ದೇವರಗೂಡಿನ ತೊಲೆಯ ಮೇಲೆ ಹೋಗಿ ಹೆಡೆಬಿಚ್ಚಿ ಕುಳಿತಿತು. ಊರ ಜನ ಹಾವನ್ನು ಕೊಲ್ಲಲು ಬಂದಾಗ ಚನ್ನಮ್ಮ ಬೇಡವೆಂದು ತಡೆದು ಬೆಳವಾಡಿ ಗಣಪನಿಗೆ ಹಾವಿನ ಹರಕೆ ತೀರಿಸಿಲ್ಲವೆಂದೂ, ಹರಕೆಯ ಬೆಳ್ಳಿಯ ಹಾವು ದೇವರಗೂಡಿನಲ್ಲಿ ಇದೆ ಎಂದು ಹಾವು ತಮಗೇನು ಮಾಡುವುದಿಲ್ಲವೆಂದು ಹೇಳಿ ಕಳುಹಿಸಿದರು. ಅತ್ತೆಯ ಧೈರ್ಯವನ್ನು ನಂಬಿಕೆಯನ್ನು ಕಂಡ ಲಲಿತಮ್ಮ ಧೈರ್ಯವಾಗಿ ಎರಡು ದಿನಗಳ ಕಾಲ ಮಕ್ಕಳೊಡನೆ ಮಲಗಿದ್ದರು. ಮೂರನೆ ದಿನ ಬೆಳಗ್ಗೆ ಕಿಟಕಿಯ ಮೂಲಕ ಹಾವು ಹೊರಗೆ ಹೋಗಿದ್ದನ್ನು ಕಂಡ ಜನ ಅದನ್ನು ಕೊಂದು ಹಾಕಿದರು. ಆಗ ಚನ್ನಮ್ಮ ನಾಗಪ್ಪನಿಗೆ ಸಂಸ್ಕಾರ ಮಾಡಬೇಕೆಂದು ಹೇಳಿ ಸಂಸ್ಕಾರ ಮಾಡಿಸಿದರು. ಹುಟ್ಟಿದ ಹೆಣ್ಣು ಮಗುವಿಗೆ ನಾಗಲಕ್ಷ್ಮಿ ಎಂದು ಹೆಸರಿಟ್ಟರು ಲಲಿತಮ್ಮ ಎರಡು ವರ್ಷದ ನಂತರ ಸಂಸಾರವನ್ನು ಹಾಸನಕ್ಕೆ ಕರೆ ತಂದರು ಮ.ಕೃ. ಅಲ್ಲಿ ಬಹಳ ದೊಡ್ಡದಾದ ಮನೆ ಕೇವಲ ೨೫ರೂ. ಬಾಡಿಗೆಗೆ ದೊರೆಯಿತು. ಕೆಲವು ದಿನಗಳಾದ ಮೇಲೆ ಅಕ್ಕಪಕ್ಕದವರು ಇದು ದೆವ್ವದ ಮನೆಯೆಂದೂ

ಯಾರು ವಾಸಮಾಡಲು ಸಾಧ್ಯವಿಲ್ಲವೆಂದೂ ಪ್ರಾಣಾಪಾಯ ಉಂಟೆಂದೂ, ತಾವು ದೆವ್ವವನ್ನು ನೋಡಿರುವುದಾಗಿ ಹೇಳಿದರು. ಆದರೆ ದೇವರಿದ್ದ ಕಡೆ ದೆವ್ವ ಇರುವುದಿಲ್ಲವೆಂದು ನಂಬಿದ್ದ ಮ.ಕೃ. ಕುಟುಂಬ ಧೈರ್ಯದಿಂದ ಎರಡು ವರ್ಷಗಳ ಕಾಲ ಆ ಮನೆಯಲ್ಲಿದ್ದರು. ಏಳಿಗೆಯನ್ನು ಕಂಡರು. ಹಾಸನದಲ್ಲಿ ಈಗ ಆ ಮನೆಯನ್ನು ಕಾಂಪ್ಲೆಕ್ಸ್ ಮಾಡಿದ್ದಾರೆ.

೧೯೫೮ರಲ್ಲಿ ಬೆಂಗಳೂರಿಗೆ ಬಂದು ಗವಿಪುರಂ ಗುಟ್ಟಹಳ್ಳಿಯಲ್ಲಿ ಮನೆ ಮಾಡಿದರು. ೧೯ ವರ್ಷಗಳ ಕಾಲ ಆ ಮನೆಯಲ್ಲಿದ್ದರು. ನಂತರ ೧೯೭೭ನೇ ಇಸವಿಯಲ್ಲಿ ಅದೇ ಬಡಾವಣೆಯಲ್ಲಿದ್ದ ದೊಡ್ಡ ಮಹಡಿ ಮನೆಗೆ ಬಾಡಿಗೆಗೆ ಬಂದರು. ಮ.ಕೃ. ಆ ಮನೆಯ ಬಾಡಿಗೆ ೧೨೦ ರೂ. ಮಾತ್ರ. ಅಷ್ಟು ಕಡಿಮೆ ಬಾಡಿಗೆಗೆ ಮನೆ ಸಿಗಲು ಕಾರಣ ನಂತರ ತಿಳಿಯಿತು. ಆ ಮನೆಯಲ್ಲಿ ದಂಪತಿಗಳು ಬೆಂಕಿ ಆಕಸ್ಮಿಕಕ್ಕೆ ಒಳಗಾಗಿದ್ದರು. ಆಸ್ಪತ್ರೆಯಲ್ಲಿ ಮರಣ ಹೊಂದಿದ್ದರು. ಅದಕ್ಕೆ ಹೆದರಿ ಯಾರೂ ಬಾಡಿಗೆಗೆ ಬರುತ್ತಿರಲಿಲ್ಲ. ಅಲ್ಲಿ ಮ.ಕೃ. ಅವರ ಏಳು ಜನ ಹೆಣ್ಣು ಮಕ್ಕಳಿಗೂ ಮದುವೆಯಾಯಿತು. ಎಲ್ಲಾ ಕಾರ್ಯದಲ್ಲಿ ದೊಡ್ಡ ಮಗಳು ಉಮ ಮ.ಕೃ. ಅವರಿಗೆ ಬಲಗೈಯಂತೆ ಇದ್ದಳು. ಆ ಮನೆ ಮಾರಾಟವಾದ ನಂತರ ಉಮ ತನ್ನ ಸ್ವಂತ ಸೈಟಿನಲ್ಲಿ ದೊಡ್ಡ ಮನೆ ಕಟ್ಟಿದಳು. ಅಲ್ಲಿ ಮಗನ ಮದುವೆಯಾಯಿತು. ತಮ್ಮ ಸಂಸಾರದ ಸಮೇತ ಅಲ್ಲಿಗೆ ಬಂದರು ಮ.ಕೃ. ಮಗಳ ಮನೆಯಲ್ಲಿ ತಮ್ಮ ಕೊನೆಗಾಲದವರೆವಿಗೂ ಇದ್ದರು.

ಗವಿಪುರಂ ಗುಟ್ಟಹಳ್ಳಿಯಲ್ಲಿದ್ದ ಸಮಯ ೧೯೬೦ ರ ಜನವರಿ ೩೧ ರಂದು ಮ.ಕೃ. ಅವರ ಜೀವನದಲ್ಲಿ ಮಹತ್ತರ ಘಟನೆ ನಡೆಯಿತು. ಅಂದು ಲಲಿತಮ್ಮನವರು ಗಂಡು ಮಗುವಿಗೆ ಜನ್ಮವಿತ್ತಿದ್ದರು. ಮನೆಯಲ್ಲಿ ಸಂಭ್ರಮವೋ ಸಂಭ್ರಮ. ೧೧ ದಿನದ ನಂತರ ಮಗುವಿನ ಜಾತಕ ಬರೆಸಲು ಜ್ಯೋತಿಷಿಗಳ ಹತ್ತಿರ ಹೋದರು. ಅವರು ಕೃಷ್ಣಮೂರ್ತಿಗಳ ಸ್ನೇಹಿತರೂ ಸಹ. ಮಗು ಹುಟ್ಟಿದ ಘಳಿಗೆ–ನಕ್ಷತ್ರ–ಗ್ರಹಗತಿಗಳನ್ನು ಗಮನಿಸಿದ ಜ್ಯೋತಿಷರು ಅಚ್ಚರಿಪಟ್ಟರು. ಮಗುವಿಗೆ ಸರ್ಪ ಕರಾಳಯೋಗವಿರುವುದಾಗಿಯೂ ರಾಜನಂತೆ ಬಾಳುತ್ತಾನೆ ಅಂದರು ಜೊತೆಗೆ ಒಂದು ವರ್ಷ ತಂದೆ, ಮಗ ಒಂದೆಡೆ ಇರಬಾರದೆಂದೂ ಇದ್ದರೆ ಒಬ್ಬರಿಗೆ ಕಷ್ಟ ತಪ್ಪಿದ್ದಲ್ಲವೆಂದೂ ತಿಳಿಸಿದರು.

ಕೃಷ್ಣಮೂರ್ತಿ ಮನೆಯವರಿಗೆ ಊರಿಗೆ ಹೋಗಿ ಬರುವುದಾಗಿ ತಿಳಿಸಿ ಹೋದರು. ೧೫ ದಿನ ೨೦ ದಿನ ಬಿಟ್ಟು ಬರುವುದು ಮಾಮೂಲಾಗಿತ್ತು. ಆದರೆ ಅವರು ಬಂದದ್ದು ಮುಂದಿನ ಡಿಸಂಬರ್ ತಿಂಗಳಲ್ಲಿ. ಕಾಗದಗಳು ಬರುತ್ತಿದ್ದರೂ ಮ.ಕೃ.

ವಿಳಾಸವೇ ಬರೆಯುತ್ತಿರಲಿಲ್ಲ. ಅವರು ಊರಿಗೆ ಬಂದ ಮೇಲೆ ಮನೆಯವರಿಗೆ ಊರು ಬಿಡಲು ಕಾರಣ ತಿಳಿದದ್ದು.

ಈ ಕಂಟಕದಿಂದ ಪಾರಾಗಲು ಅವರಿಗೆ ಹೊಳದದ್ದು ಜನಪದ ಸಾಹಿತ್ಯ ಸಂಗ್ರಹ. ಕಷ್ಟಕಾಲದಲ್ಲಿ ಅವರನ್ನು ಉಳಿಸಿದ್ದು ಈ ಸಂಗ್ರಹಕಾರ್ಯ. ಒಂದು ವರ್ಷದ ಕಾಲ ಕರ್ನಾಟಕದ ಮೂಲೆ ಮೂಲೆಯನ್ನು ಸುತ್ತಿ, ಹಳ್ಳಿ ಹಳ್ಳಿ ತಿರುಗಿ (ಬೀದರ್ ಜಿಲ್ಲೆ ಬಿಟ್ಟು) ಸಂಗ್ರಹ ಕಾರ್ಯ ಮಾಡಿದರು. ತಮ್ಮ ಜೋಳಿಗೆಯಲ್ಲಿ ಜನಪದ ಹಾಡು–ಕಥೆಗಳನ್ನು ತುಂಬಿ ತುಂಬಿ ತಂದರು ಜನಪದ ಸಾಹಿತ್ಯ ಸಂಗ್ರಾಹಕರಲ್ಲಿ ಮೊದಲಿಗರಾದರು. ಸಂಗ್ರಹ ಕಾರ್ಯ ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಬರಿಗೈ, ಅಲೆಮಾರಿ ಜೀವನ, ಹಾಡು ಸಿಕ್ಕ ಹಳ್ಳಿಯಲ್ಲಿಯೇ ವಸತಿ ಕರೆದವರ ಮನೆಯಲ್ಲಿ ಊಟ. ಶಾಲೆಯಲ್ಲಿ ಮಕ್ಕಳಿಗೆ ಜನಪದ ಸಾಹಿತ್ಯದ ಬಗ್ಗೆ ಉಪನ್ಯಾಸ ಮಾಡುವುದು, ಜೊತೆಗೆ ಜನಪದ ಗೀತೆ ಹಾಡುವುದು. ಸಹ ಶಿಕ್ಷಕರು, ಮುಖ್ಯ ಶಿಕ್ಷಕರೂ ಸೇರಿ ಹಣ ಸಂಗ್ರಹಿಸಿ, ಮಕ್ಕಳು ಕೊಟ್ಟ ಹಣವನ್ನು ಸೇರಿಸಿ ಮ.ಕೃ.ಗೆ ಕೊಡುತ್ತಿದ್ದರು. ಮ.ಕೃ ಆ ಹಣ ಮುಗಿಯುವವರೆವಿಗೆ ಸಂಗ್ರಹ ಕಾರ್ಯ. ನಂತರ ಮತ್ತೊಂದು ಶಾಲೆ. ಮತ್ತೊಂದು ಹಳ್ಳಿ ಹೀಗೆ ಸಾಗಿತ್ತು ಜೀವನ. ಎಲ್ಲಿ ಹೋದರು ಇವರ ಕಾರ್ಯವನ್ನು ಮೆಚ್ಚಿ ಸಹಾಯ ಮಾಡುವ ದೊಡ್ಡ ಮನಸ್ಸಿನ ಸಾಹಿತ್ಯಾಸಕ್ತಿಯ ಜನರೇ ಇರುತ್ತಿದ್ದರು. ಜನಪದ ಸಾಹಿತ್ಯದ ಉಳುವಿಗೆ ತಾವು ಭಾಗಿಗಳೆಂಬ ಹೆಮ್ಮೆ ಸಮಾಧಾನ ಅವರಲ್ಲಿತ್ತು. ಮ.ಕೃ. ಅವರು ದಾರಿಯಲ್ಲಿ ಸಿಕ್ಕವರೊಡನೆ, ಬಸ್ಸಿನಲ್ಲಿ ಸಂಚರಿಸುವಾಗ ಅಕ್ಕಪಕ್ಕದ ಜನರನ್ನು ಆತ್ಮೀಯವಾಗಿ ಮಾತನಾಡಿಸಿ ಊರು–ಕೇರಿ ಅಂತ ಕುಶಲಪ್ರಶ್ನೆ ಮಾಡುತ್ತಿದ್ದರು. ನಂತರ ಹಾಡಲು ಬರುವುದೇ ಇಲ್ಲದಿದ್ದರೆ ಹಾಡುವವರ ಪರಿಚಯವಿದೆಯೇ ಇತ್ಯಾದಿ ವಿಚಾರಿಸಿ, ತಮಗೆ ಹಾಡಲು ಬರುತ್ತದೆ ಎಂದರೆ ಅವರೊಡನೆ ಅವರ ಹಳ್ಳಿಗೆ ಹೋಗುತ್ತಿದ್ದರು. ಲಂಬಾಣಿಗಳು, ಹಕ್ಕಿ–ಪಿಕ್ಕಿಗಳು, ಜೋಗಿ ಜಂಗಮರು ಮೇಳದವರು ಯಾರು ಸಿಕ್ಕಿದರೂ ಅವರನ್ನು ಹಿಂಬಾಲಿಸಿ ಅವರೊಡನೆ ಅವರಂತೆ ಇದ್ದು ಸಂಗ್ರಹಕಾರ್ಯ ಮಾಡುತ್ತಿದ್ದರು. ಕೆಲವು ವೇಳೆ ಸಿಕ್ಕ ಹಳ್ಳಿಯ ಮುಖಂಡರನ್ನು ಭೇಟಿ ಮಾಡಿ (ಗೌಡರು. ಶ್ಯಾನುಭೋಗರು, ಸಾಹಿತ್ಯಾಭಿಮಾನಿಗಳು) ತಮ್ಮ ಆಸೆಯನ್ನು ಕೆಲಸದ ಬಗ್ಗೆ ತಿಳಿಸುತ್ತಿದ್ದರು. ಹಾಡುವವರ ಬಗ್ಗೆ ವಿಚಾರಿಸುತ್ತಿದ್ದರು. ಇವರ ಧ್ಯೇಯವನ್ನು ಕಳಕಳಿಯನ್ನು ಉತ್ಸಾಹವನ್ನು ತಿಳಿದ ಹಿರಿಯರು, ತುಂಬು ಮನದಿಂದ ಪ್ರೋತ್ಸಾಹ ಕೊಡುತ್ತಿದ್ದರು. ಅವರು ಮ.ಕೃ. ಉಳಿಯಲು ಜಾಗಕೊಟ್ಟು ಹಾಡುವ ಜನರನ್ನು, ಕಲಾವಿದರನ್ನು ಮನೆಗೆ ಕರೆಸುತ್ತಿದ್ದರು. ದೊಡ್ಡವರು ಕರೆಯುವರೆಂಬ ಗೌರವದ ಜೊತೆಗೆ ಪಟ್ಟಣದಿಂದ ತಮ್ಮ ಹಾಡನ್ನು ಕೇಳಲು ಬಂದಿದ್ದಾರೆ ಎಂದಾಗ

ಹೆಮ್ಮೆಯಿಂದ ಗೌಡರ ಮನೆಗೆ ಬರುತ್ತಿದ್ದರು, ಹಳ್ಳಿಯಲ್ಲಿ ಆಗಲೀ ಪಟ್ಟಣದಲ್ಲಿಯಾಗಲೀ ಆಗ ಜನಪದ ಹಾಡು ಕೇಳುವ ಜನರೇ ಇರುತ್ತಿರಲಿಲ್ಲ. ಹಾಗಾಗಿ ಹಾಡು ಕಲಿತವರು ಆಸ್ಥೆಯಿಂದ ಹಾಡು ಹೇಳುತ್ತಿದ್ದರು.

ಜನರು ಸ್ವಸಂತೋಷಕ್ಕಾಗಿ, ಕೆಲಸದ ಆಯಾಸ ಮರೆಯಲು, ರಾಗಿ ಬೀಸುವಾಗ, ಕಳೆ ಕೀಳುವಾಗ, ಕೋಲಾಟ ಆಡುವಾಗ ಹಾಡುತ್ತಿದ್ದರು. ಕಳೆ ಕೀಳುವ ಸಮಯದಲ್ಲಿ ಹೊಲಕ್ಕೆ ಹೋಗಿ ಹಾಡನ್ನು ಸಂಗ್ರಹಿಸಬೇಕಾಗುತ್ತಿತ್ತು. ಅವರು ಹೇಳುವ ರೀತಿಯಲ್ಲಿ ವೇಗದಲ್ಲಿ ಮ.ಕೃ. ಕಾಗದದ ಮೇಲೆ ಮೂಡಿಸುತ್ತಿದ್ದರು ಮತ್ತು ರಾಗವಾಗಿ ಹೇಳುತ್ತಿದ್ದರು ಕೂಡ, ಒಮ್ಮೊಮ್ಮೆ ಒಂದು ಹಳ್ಳಿಯಲ್ಲಿ ವಾರ ಹದಿನೈದು ದಿನ ತಂಗಿದ್ದು ಇದೆ. ಒಮ್ಮೆ ಹುಬ್ಬಳ್ಳಿ ಕಡೆ ಸಂಗ್ರಹಕ್ಕಾಗಿ ಹೋದಾಗ ಒಂದು ಹೋಟೆಲ್‌ಗೆ ಹೋದರು. ಒಬ್ಬ ಹುಡುಗ ಬಂದು ಏನುಬೇಕೆಂದು ಕೇಳಿದ? ಮ.ಕೃ. ತಿಂಡಿ ಏನಿದೆ? ಅಂದ್ರು ಹುಡುಗ ತನ್ನನ್ನು ಒಮ್ಮೆ ನೋಡಿಕೊಂಡು ಮತ್ತೆ ಏನುಬೇಕೆಂದು ಕೇಳಿದ, ಮತ್ತೆ ಇವರು ತಿಂಡಿ ಏನಿದೆ? ಅಂದ್ರು, ಹುಡುಗ ಕಕ್ಕಾಬಿಕ್ಕಿಯಾಗಿ ನೋಡುತ್ತ ನಿಂತ. ಇವರ ಪೇಚಾಟವನ್ನು ನೋಡಿದ ಪಕ್ಕದವರು ಹುಡುಗನಿಗೆ ತಿನ್ನಲಿಕ್ಕೆ ಏನಿದೆ? ಎಂದು ಕೇಳಿ ಪದಾರ್ಥ ತರಲು ಅವನು ಒಳಗೆ ಹೋದಾಗ ಮ.ಕೃ. ಅವರಿಗೆ ತಿಂಡಿ ಎಂದರೆ ಇಲ್ಲಿ ಕಜ್ಜಿ ಎಂದು ಅರ್ಥ ಅಂತ ಹೇಳಿದರು. ಅಂದಿನಿಂದ ಸ್ಥಳೀಯ ಕನ್ನಡ ಭಾಷೆಯನ್ನು ಕಲಿಯ ತೊಡಗಿದರು ಮ.ಕೃ.

ಒಮ್ಮೆ ಉತ್ತರ ಕರ್ನಾಟಕದ ಒಂದು ಹಳ್ಳಿಯಲ್ಲಿ ಹಾಡು ಸಂಗ್ರಹಿಸುತ್ತಿದ್ದಾಗ ಪಕ್ಕದ ಹಳ್ಳಿಗಳಲ್ಲಿಯೂ ಹಾಡುವವರಿದ್ದಾರೆಂದು ತಿಳಿಯಿತು. ಹಳ್ಳಿಗಳಿಗೆ ದಾರಿ ತೋರಿಸಲೆಂದು ಶ್ರೀ ಸಾಲಿರಾಮಚಂದ್ರರಾಯರ ಸಂಬಂಧಿಯೊಬ್ಬರು ತಮ್ಮ ಒಬ್ಬ ಆಳು ಫಕೀರ ಎಂಬುವವರನ್ನು ಜೊತೆಗೆ ಕಳುಹಿಸಿದ್ದರು. ತಿಂಗಳ ಮೇಲಾಗಿತ್ತು. ಚೌರ ಮಾಡಿಸಿಕೊಂಡು ಹಾಗಾಗಿ ಮ.ಕೃ. ಒಂದು ಚೌರದ ಅಂಗಡಿಗೆ ಹೋದರು. ಕ್ಷೌರಿಕ (ಹಜಾಮ) ಯಾವ ರೀತಿ ಹಜಮತಿ ಮಾಡಬೇಕೆಂದು ಕೇಳಿದ, ಪೇಪರ್ ಓದುವುದರಲ್ಲಿ ಮಗ್ನರಾಗಿದ್ದ ಮ.ಕೃ. ಸಣ್ಣಗೆ ಕಟ್‌ಮಾಡು ಎಂದು ಹೇಳಿದರು. ಆದರೆ ಕ್ಷೌರಿಕ "ನುಣ್ಣಗೆ" ಮಾಡಿ ಬಿಟ್ಟ. ಕನ್ನಡಿಯಲ್ಲಿ ನೋಡಿಕೊಂಡ ಮ.ಕೃ. ಇನ್ನು ಎರಡು ತಿಂಗಳು ಕ್ಷೌರ ಮಾಡಿಸಬೇಕಾಗಿಲ್ಲವೆಂದು ಸಂತಸಪಟ್ಟರು. ಆಗ ಮಳೆಗಾಲ, ಕೆಂಪು ಮಣ್ಣಿನ ಪ್ರದೇಶದಲ್ಲಿ ಬಿದ್ದ ನೀರು ಘಟಪ್ರಭಾ ನದಿಗೆ ಹರಿದು ನೀರು ಕೆಂಪಾಗಿತ್ತು, ಆ ಹಳ್ಳಿ ನದಿಯ ಪಕ್ಕದಲ್ಲೇ ಇತ್ತು. ಫಕೀರ ಮ.ಕೃ ಅವರ ಬಟ್ಟೆಗಳನ್ನು ನೀರಿಗೆ ಅದ್ದಿ ಹಿಂಡಿದಾಗ ಬಿಳಿಯ ಬಣ್ಣದ ಖಾದಿ ಬಟ್ಟೆ ತಿಳಿ ಕೆಂಪು ಬಣ್ಣಕ್ಕೆ ಕಾವಿಯ ಬಣ್ಣಕ್ಕೆ ತಿರುಗಿತು. ಅದನ್ನೇ ತೊಟ್ಟು ಬೇರೆ ಹಳ್ಳಿಗೆ ಹೊರಟರು. ಮ.ಕೃ.

ದಾರಿಯಲ್ಲಿ ಓಡಾಡುತ್ತಿದ್ದ ಹಳ್ಳಿಯ ಜನ ಹೆಂಗಸರು ಗಂಡಸರೆನ್ನದೆ ಇವರನ್ನು ಕಂಡ ತಕ್ಷಣ 'ಶರಣು' ಎಂದು ಹೇಳಿ ಅಡ್ಡ ಬೀಳುತ್ತಿದ್ದರು. ಮೊದಮೊದಲು ಮ.ಕೃ.ಗೆ ಅರ್ಥವಾಗಲೇ ಇಲ್ಲ. ಜೊತೆಯಲ್ಲಿದ್ದ ಫಕೀರಪ್ಪ "ನಿಮ್ಮ ಬಟ್ಟೆ ಖಾವಿ ಬಟ್ಟೆಹಾಗಿದೆ. ತಲೆ ನುಣ್ಣಗೆ ಇದೆ. ಜನ ನಿಮ್ಮನ್ನ ಜಂಗಮರೆಂದು ತಿಳಿದು ಈ ರೀತಿ ನಡೆದುಕೊಳ್ಳುತ್ತಿರುವರು. ನೀವು ಅವರು ಹಾಗೆ ಅಡ್ಡಬಿದ್ದಾಗ ಶಿವ ಒಳ್ಳೇದು ಮಾಡಲಿ ಎಂದು ಹೇಳಿ" ಹೇಳಿದ. ಹೀಗೆ ಮ.ಕೃ. ಜಂಗಮರ ಪಾತ್ರವನ್ನು ಮಾಡಬೇಕಾಯಿತು.

ಪಕ್ಕದ ಹಳ್ಳಿ ತಲುಪಿದಾಗ ಸಂಜೆ ಆಗಿತ್ತು. ಊರ ಹಿರಿಯರ ಮನೆಯಲ್ಲಿ ಊಟ ವಸತಿ ಮ.ಕೃ. ಹಿರಿಯರಿಗೆ ತಾವು ಬಂದ ಕಾರ್ಯ ಹಾಗೂ ಉದ್ದೇಶಗಳನ್ನು ತಿಳಿಸಿದರು. ಹಿರಿಯರು ಹಾಡುವವರ ಮನೆಗಳನ್ನು ತಿಳಿಸಿದರು. ದೇವಿಯ ಬಗ್ಗೆ ಹಾಡು ಬರುವುದಾಗಿ ಒಂದು ಮನೆಯಲ್ಲಿ ಹೇಳಿದರು. ಹಾಡಲು ಕೇಳಿದಾಗ ಹಾಗೆಲ್ಲಾ ಎಲ್ಲೆಂದರೆ ಅಲ್ಲಿ ಹಾಡಲು ಸಾಧ್ಯವಿಲ್ಲವೆಂದೂ ಮಂಗಳವಾರ ದೇವರನ್ನು ಕರೆಸಿದರೆ ಮಾತ್ರ, ಆಗ ಹಾಡುವುದಾಗಿ ಹೇಳಿದರು. ಇದು ಅವರ ನಿಯಮವೂ ಆಗಿತ್ತು. ಆಗ ಊರ ಹಿರಿಯರು ಬರುವ ಮಂಗಳವಾರ ತಮ್ಮ ಮನೆಗೆ ದೇವಿಯನ್ನು ಕರೆಸಿದರು. ಅಂದು ಪೂಜೆಗೆ ಬೇಕಾದ ಸಾಮಾನುಗಳನ್ನು ಹೊಂದಿಸಿದ್ದರು. ಅಂಗಳವನ್ನು ಶುಚಿಗೊಳಿಸಿ ರಂಗವಲ್ಲಿ ಹಾಕಿ, ದೇವಿಯನ್ನು ಕರೆಸಿದರು.

ಊರ ಜನರೆಲ್ಲಾ ಸೇರಿದರು. ಕಲಾವಿದರು ಮೇಳ, ಹಿಮ್ಮೇಳದೊಂದಿಗೆ ದೇವಿ ಮಹಿಮೆಯನ್ನು ಹಾಡಲು ಪ್ರಾರಂಭಿಸಿದರು. ಮ.ಕೃ. ಅವರಿಗೆ ಹಾಡು ಕೇಳುತ್ತಾ ಬರೆದುಕೊಳ್ಳುವುದು ಕಷ್ಟದ ಕೆಲಸವಾಯಿತು. ಮಧ್ಯೆ-ಮಧ್ಯೆ ಪದಗಳು ಬಿಟ್ಟು ಹೋಗುತ್ತಿತ್ತು. ಗಾಯಕರು ಮಂಗಳ ಹಾಡಿದರು. ಕಥೆ ಪೂರ್ಣವಾಗಿ ಬರೆಯಲಾಗಲಿಲ್ಲ. ತಳಮಳಿಸಿದರು ಮ.ಕೃ. ಆಗ ಆ ಹಿರಿಯರು ಮುಂದಿನ ಮಂಗಳವಾರ ಮತ್ತೆ ಪೂಜೆ ಇಡಿಸಿದರು. ಕಥೆ ಪೂರ್ಣವಾಗಲು ಸಹಕರಿಸಿದರು. ಮ.ಕೃ. ಅವರ ಸಂಗ್ರಹಕಾರ್ಯದಲ್ಲಿ ಇಂಥ ಘಟನೆಗಳು ಹಲವಾರು. ಕೆಲವೆಡೆ ಹಾಡುಗಾರರಿಗೆ ಹಣ ಕೊಡಬೇಕಾಗುತ್ತಿತ್ತು. ತಮ್ಮ ಖರ್ಚಿಗಾಗಿ ಇಟ್ಟು ಕೊಂಡಿದ್ದ ಹಣವನ್ನು ಕೊಟ್ಟು ಹಾಡು ಹೇಳಿಸಿದ್ದು ಉಂಟು. ತಮ್ಮ ಜೊತೆ ಅವರಿಗೂ ಊಟವನ್ನು ಕೊಡಿಸುವುದು ಇತ್ತು.

ಕೃಷ್ಣಮೂರ್ತಿಯವರೇನೊ ಭವಿಷ್ಯದ ಶಾಪವನ್ನು ವರವಾಗಿಸಿಕೊಂಡರು ಈ ಕಡೆ ಅವರ ಮನೆಯವರಿಗೆ ಅದು ಅಗ್ನಿ ಪರೀಕ್ಷೆಯಾಯಿತು. ಮ.ಕೃ. ಮನೆ ಬಿಟ್ಟು ಹೋಗಲು ಕಾರಣವೂ ತಿಳಿಯದೇ ಒದ್ದಾಡಿದರು. ಲಲಿತಮ್ಮ ಇದ್ದಕ್ಕಿದಂತೆ ಮರೆಯಾದ ಯಜಮಾನ, ಚಿಕ್ಕಮಕ್ಕಳು, ಬಾಣಂತಿ ಬೇರೆ ಮುಂದಿನ ದಿನಗಳು ಹೇಗೆ ಎಂಬ

ಚಿಂತೆ. ಚಿಕ್ಕಂದಿನಿಂದಲೂ ಸಂಸಾರದ ಆಗುಹೋಗುಗಳಿಗೆ ಸಹಾಯ ಹಸ್ತ ನೀಡಿದ್ದ ದೊಡ್ಡಮಗಳು ತಾಯಿಗೆ ಧೈರ್ಯ ಹೇಳಿ ಸಂಸಾರದ ಜವಾಬ್ದಾರಿ ಹೊತ್ತಳು. ಓದು ಬಿಟ್ಟು ಕೆಲಸಕ್ಕೆ ಸೇರಿದಳು. ಉಳಿದ ಮಕ್ಕಳು ತಂದೆ–ತಾಯಿಗೆ, ಅಕ್ಕನಿಗೆ ಬೆಂಬಲವಾಗಿ ನಿಂತರು. ಬೆಳಿಗ್ಗೆ ಸಂಜೆ ಮನೆಪಾಠ ಹೇಳಿಕೊಟ್ಟರು ಅವರ ಓದಿನ ಕಡೆಗೂ ಗಮನ ಕೊಡುತ್ತಿದ್ದರು.

ಸುತ್ತ–ಮುತ್ತ ಇದ್ದ ಮನೆಯವರು ಲಲಿತಮ್ಮನಿಗೆ, ಮನೆಯವರಿಗೆ ಸಾಂತ್ವನ ಹೇಳಿ ಕಷ್ಟ ಕಾಲದಲ್ಲಿ ಸಹಾಯ ಮಾಡಿದರು. ಮುಖ್ಯವಾಗಿ ಮನೆಯ ಮಾಲಿಕರಾದ ರಾಜರಾಯರು ೨೫ ರೂ. ಬಾಡಿಗೆಯನ್ನು ಕೇಳಲಿಲ್ಲ. ಉಮ ಕೊಡಲು ಹೋದಾಗ ನಿಮ್ಮ ಖರ್ಚಿಗೆ ಇರಲೆಂದೂ ಕೃಷ್ಣಮೂರ್ತಿ ಬಂದಾಗ ಒಟ್ಟಾಗಿ ಪಡೆಯುತ್ತೇನೆಂದು ಹೇಳಿದರು. ಮ.ಕೃ. ಮಕ್ಕಳು ಹೆಚ್ಚಿನ ಅಂಕ ಪಡೆದರೆ, ಉತ್ತೀರ್ಣರಾದರೆ ತಾವೇ ಸಿಹಿಯನ್ನು ಹಂಚುತ್ತಿದ್ದರು. ಮನೆಯ ಹಿರಿಯರಂತೆ ಗಮನಿಸುತ್ತ ಲಲಿತಮ್ಮನನ್ನ ತನ್ನ ಮಗಳಂತೆ ನೋಡಿಕೊಂಡರು. ಮತ್ತೊಬ್ಬ ಮಹನೀಯರು ರೇಷನ್ ಅಂಗಡಿ ಮಾಲೀಕರು. ಜೈನರಾದ ಅವರು ಬಹಳ ಸಾಧು ಸ್ವಭಾವದವರು. ಗುಟ್ಟಹಳ್ಳಿಗೆ ಬಂದಾಗಿನಿಂದಲೂ ಅವರ ಅಂಗಡಿಯಲ್ಲೆ ದಿನಸಿ ಖರೀದಿಸುತ್ತಿದ್ದುದ್ದು. ಕೆಲವು ವೇಳೆ ಮ.ಕೃ ಇಲ್ಲದ ವೇಳೆಯಲ್ಲಿ ಸಾಮಾನು ತಂದು ತಿಂಗಳ ಕೊನೆಯಲ್ಲಿ ಮ.ಕೃ. ಅವರು ಬಂದ ಮೇಲೆ ಹಣ ಕೊಡುತ್ತಿದ್ದರು ಮನೆಯವರು. ಉಮ ಮನೆಯ ತೊಂದರೆಯನ್ನು ತಿಳಿಸಿದಾಗ ತಿಂಗಳಿಗೊಮ್ಮೆ ಆದಷ್ಟು ಹಣ ಕೊಡಲು ತಿಳಿಸಿದರು. ಕೆಲವು ತಿಂಗಳು ಹಣವಿಲ್ಲದಾಗ ತಪ್ಪಿದರೂ ಈಗ ಸಾಮಾನು ತೆಗೆದುಕೊಳ್ಳಿ ಆನಂತರ ಕೊಟ್ಟರಾಯಿತು ಎನ್ನುತ್ತಿದ್ದರು. ಮ.ಕೃ. ಬಂದ ನಂತರ ಇಬ್ಬರಿಗೂ ಹಣ ಕೊಟ್ಟು ಅವರ ಉಪಕಾರವನ್ನು ಸ್ಮರಿಸಿದರು.

ಮ.ಕೃ. ಮನೆಯಲ್ಲಿಲ್ಲದ ವಿಚಾರ ಎಲ್ಲಾ ನೆಂಟರಿಷ್ಟರಿಗೂ ತಿಳಿಯಿತು. ಕೆಲವರು ಹೆಂಡತಿ ಮಕ್ಕಳನ್ನು ಬಿಟ್ಟು ದೇಶಾಂತರ ಹೋಗಿ ನಮಗೆಲ್ಲಾ ಅವಮಾನ ಮಾಡಿದರು ಅಂತ ಆಡಿಕೊಂಡರು. ಲಲಿತಮ್ಮನವರಿಗೆ ಈ ಸುದ್ದಿ ತಿಳಿದು ಬಹಳ ನೊಂದುಕೊಂಡರು. ಮನೆಯ ಹತ್ತಿರದಲ್ಲೆ ಎಕ್ಕದ ಗಣಪನನ್ನು ಪೂಜಿಸುತ್ತಿದ್ದ ಹೆಸರಾಂತ ಪಂಡಿತರ ಮನೆ ಇತ್ತು. ಅವರಲ್ಲಿ ಹೋಗಿ ಅವರು ಹೇಳಿದ ವ್ರತ ಉಪವಾಸ ಮಾಡಿ ಗಂಡ ಬೇಗ ಮನೆಗೆ ಬರಲೆಂದು ಕಂಡ ಕಂಡ ದೇವರಿಗೆ ಹರಕೆ ಹೊತ್ತರು. ನೆಂಟರಿಷ್ಟರ ಮನೆಗೆ ಹೋಗುವುದನ್ನು ನಿಲ್ಲಿಸಿದರು. ಆ ಸಮಯದಲ್ಲಿ ಲಲಿತಮ್ಮನವರ ದೊಡ್ಡಪ್ಪನ ಮಗ ಶಂಕರಯ್ಯನವರು ಹಾಗೂ ಮಕ್ಕಳಾದ ಸತ್ಯನಾರಾಯಣ ಶ್ಯಾಮ ಹಾಗೂ ಸುಂದರ ಸಹಾಯಕ್ಕೆ ಬಂದರು. ಒಬ್ಬರಲ್ಲ ಒಬ್ಬರು ಪ್ರತಿದಿನ ಮನೆಗೆ ಬಂದು,

ಪರಿಸ್ಥಿತಿ ತಿಳಿದು ಸಹಾಯ ಮಾಡುತ್ತಿದ್ದರು. ಮನೆಯವರಿಗೆ ಧೈರ್ಯ ಹೇಳುತ್ತಿದ್ದರು. ಲಲಿತಮ್ಮನ ಮಕ್ಕಳು ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದರು.

ಎರಡನೆ ಮಗಳು ಉಷಾ ಬಸವೇಶ್ವರನಗರದ ಒಂದು ಶಾಲೆಗೆ ನಡೆದು ಕೆಲಸಕ್ಕೆ ಹೋಗಿ ಬರುತ್ತಿದ್ದಳು.

ಲಲಿತಮ್ಮನಿಗೆ ನೈತಿಕವಾಗಿ ಬೆಂಬಲ ನೀಡಿದವರು ಅವರ ಚಿಕ್ಕಂದಿನ ಸ್ನೇಹಿತೆ ಶ್ರೀಮತಿ ಶಾಂತಮ್ಮ. ಶಾಂತಮ್ಮನವರು ಲಲಿತಮ್ಮನ ಚಿಕ್ಕಪ್ಪನ ಪತ್ನಿ ಶ್ರೀಮತಿ ಗೌರಮ್ಮನವರ ಸಹೋದರನ ಮಗಳು (ಎ.ಜಿ. ರಾಮಚಂದ್ರರಾಯರು) ಅವರು ಗವಿಪುರಂ ಗುಟ್ಟಹಳ್ಳಿಯಲ್ಲಿ ಇದ್ದರು. ಅವರ ಮಗಳು ಪದ್ಮ ಹಾಗೂ ಲಲಿತಮ್ಮನ ಮಗಳು ಉಷಾ ಆತ್ಮೀಯ ಗೆಳತಿಯರು. ಇಂಥ ಪರಿಸ್ಥಿತಿಯಲ್ಲಿ ತಮ್ಮ ದುಃಖ ಹೇಳಿಕೊಳ್ಳಲು ಲಲಿತಮ್ಮ ಶಾಂತಮ್ಮನವರ ಮನೆಗೆ ಆಗಾಗ್ಗೆ ಹೋಗುತ್ತಿದ್ದರು. ಶಾಂತಮ್ಮ ಸಮಾಧಾನ ಮಾಡಿ ಪರಿಹಾರವನ್ನು ಹೇಳುತ್ತಿದ್ದರು. ಮನೆಯವರೆಲ್ಲಾ ಬಹಳ ವಿಶ್ವಾಸದಿಂದ ಪ್ರೀತಿಯಿಂದ ಕಾಣುತ್ತಿದ್ದರು.

ಬೆಟ್ಟವಾಗಿ ಬಂದ ಕಷ್ಟ ಮಂಜಿನಂತೆ ಕರಗಿತು ಡಿಸಂಬರ್ ಕೊನೆಯಲ್ಲಿ ಮ.ಕೃ. ಮನೆಗೆ ಬಂದರು. ತಾವು ಮನೆ ಬಿಟ್ಟು ಹೋಗಲು ದೈವ ಪ್ರೇರಣೆ ಎಂದೂ ಎಷ್ಟು ಬಾರಿ ಮನೆಗೆ ಬರಲು ಯತ್ನಿಸಿದರೂ ಸಾಧ್ಯವಾಗುತ್ತಿರಲಿಲ್ಲವೆಂದು ಹೇಳಿದರು. ಅವರು ಸಂಗ್ರಹಿಸಿದ ಜನಪದ ಸಾಹಿತ್ಯದ ರಾಶಿಯನ್ನು ಕಂಡು ಎಲ್ಲರಿಗೂ ಖುಷಿಯಾಯಿತು ಕಷ್ಟ–ಸುಖ ಬೇವು–ಬೆಲ್ಲ ಎಂದು ತಿಳಿದ ದಂಪತಿಗಳು ಬಂದಿದ್ದ ಕಷ್ಟವನ್ನು ಮರೆತರು. ಮುಂದೆಂದೂ ಇಂಥ ಪರಿಸ್ಥಿತಿ ಬರಲಿಲ್ಲ.

ನಾಲ್ಕು ಜನ ಹೆಣ್ಣು ಮಕ್ಕಳು ಕೆಲಸಕ್ಕೆ ಸೇರಿದ್ದರು. ಮ.ಕೃ. ಅವರ ಕಥೆ ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿ ಸಂಪಾದನೆಯು ಇತ್ತು.

ಮ.ಕೃ. ಅವರು ತಾವು ಸಂಗ್ರಹಿಸಿದ ಹಾಡು–ಕಥೆಗಳನ್ನು ವಿಂಗಡಿಸಿ ಪ್ರಕಟಿಸಲು ಇಚ್ಛಿಸಿದರು. ಉಮ ತನ್ನ ಆಫೀಸ್‌ನಿಂದ ಸಾಲ ತಂದು ಹಣ ಒದಗಿಸಿದಳು. ಬ್ಯಾಂಕಿಗೆ ಆಧಾರವಾಗಿ ಎಲ್‌ಐಸಿ ಪಾಲಿಸಿಯನ್ನು ಮೂರನೆ ಮಗಳು ಕೊಟ್ಟಳು. ಕೆನರಾಬ್ಯಾಂಕ್ ಗುಟ್ಟಹಳ್ಳಿ ಶಾಖೆಯವರು ಮ.ಕೃ. ಕೇಳಿದ್ದ ಸಾಲವನ್ನು ಮಂಜೂರು ಮಾಡಿದರು. ಮ.ಕೃ. ನೂರಾರು, ಸಹೃದಯರಿಗೆ, ಸಾಹಿತ್ಯಾಭಿಮಾನಿಗಳಿಗೆ ಹಾಗೂ ಹಲವಾರು ಸಂಘ ಸಂಸ್ಥೆಗಳಿಗೆ ತಮ್ಮ ಅಭಿಲಾಷೆ ತಿಳಿಸಿ, ಪ್ರಕಟಿಸಿದ ನಂತರ ಪುಸ್ತಕ ಕೊಡುವುದಾಗಿ ಮುಂಗಡ ಚಂದಾದಾರರಾಗ ಬೇಕೆಂದು ಕೇಳಿಕೊಂಡರು. ಎಲ್ಲರೂ ಇವರ ಉತ್ಸಾಹವನ್ನು ಕಂಡು ನೂರು ರೂ. ಕೊಟ್ಟು ಚಂದಾದಾರರಾದರು.

ಶ್ರೀಯುತ ಎಂ.ಟಿ.ವಿ. ಆಚಾರ್ಯ ಅವರು ರಚಿಸಿದ ಮುಖಪುಟ ಒಳಗೊಂಡ "ಗೀತೆಗಳು" ಎಂಬ ಸಾವಿರ ಪುಟಕ್ಕೂ ಮೀರಿದ ಬೃಹತ್ ಗ್ರಂಥ ಪ್ರಕಟವಾಯಿತು.

ಜಾನಪದ ಕ್ಷೇತ್ರದಲ್ಲಿ ಇವರು ಮಾಡಿದ ಸಂಗ್ರಹಕಾರ್ಯ, ಪ್ರಕಟಣೆ ನಾಡಿನಲೆಲ್ಲಾ ಮನೆಮಾತಾಯಿತು. ಪತ್ರಿಕಾ ಮಾಧ್ಯಮದಲ್ಲಿ ಉತ್ತಮ ವಿಮರ್ಶೆ ಬಂದಿತು, ಉತ್ತಮ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಹಿರಿಯರಾದ ಮಾಸ್ತಿ, ಮುಂತಾದವರು ಇವರ ಕೆಲಸವನ್ನು ಮೆಚ್ಚಿ ಕೊಂಡಾಡಿದರು, ನೆಂಟರಿಷ್ಟರು ನಿಜವನ್ನು ತಿಳಿದಾಗ ಮ.ಕೃ. ಅವರನ್ನು ಗೌರವಿಸತೊಡಗಿದರು. ಎಲ್ಲರಲ್ಲಿಯೂ ಒಳ್ಳೆಯದನ್ನೆ ಕಾಣುವ ಮ.ಕೃ. ಮನೆಯವರು ಹಿಂದಿನ ವಿಚಾರ ಮರೆತು ಮೊದಲಿನಂತೆ ನೆಂಟರಿಷ್ಟರೊಡನೆ ಸ್ನೇಹದಿಂದ ಇರತೊಡಗಿದರು.

ನಂತರ ಮ.ಕೃ. ಹಿಂತಿರುಗಿ ನೋಡಲಿಲ್ಲ, ತಮ್ಮ ಸಂಗ್ರಹ ಕಾರ್ಯ ಪುಸ್ತಕ ಪ್ರಕಟಣೆ ಜಾನಪದ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು, ಮಕ್ಕಳಲ್ಲಿ ಕೆಲವರು ಸರ್ಕಾರಿ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಓದುತ್ತಿದ್ದರು. ಮೆರಿಟ್ ಸ್ಕಾಲರ್ ಶಿಪ್ ದೊರೆಯುತ್ತಿತ್ತು. ೧೯೭೮ ರ ವೇಳೆಯಲ್ಲಿ ಗುಟ್ಟಹಳ್ಳಿಯ ಅಕ್ಕ-ಪಕ್ಕದ ಬಡಾವಣೆಗಳಲ್ಲಿ ಖಾಸಗೀ ಶಾಲೆಗಳು ಪ್ರಾರಂಭವಾಗಿದ್ದವು. ಆಕಾಲಕ್ಕೆ ಅಲ್ಲಿ ಫೀ ೨-೩ ರೂ ತಿಂಗಳಿಗೆ ಕೊಡಬೇಕಾಗುತ್ತಿತ್ತು. ಡೊನೇಷನ್ ಬೇರೆ, ಶ್ರೀಮಂತರಿಗೆ ಮಾತ್ರ ಪ್ರವೇಶ ಸಾಧ್ಯವಾಗುತ್ತಿತ್ತು. ಬಡವರೇ ಹೆಚ್ಚಾಗಿದ್ದ ಗುಟ್ಟಹಳ್ಳಿಯ ಮಕ್ಕಳಿಗೆ ಆ ಶಾಲೆಗಳಲ್ಲಿ ವಿದ್ಯಾಭ್ಯಾಸ ಸಾಧ್ಯವಾಗುತ್ತಿರಲಿಲ್ಲ. ಇಂಗ್ಲೀಷ್ ಮೀಡಿಯಂ ನಿಧಾನವಾಗಿ ಶಾಲೆಗಳನ್ನು ಪ್ರವೇಶಿಸುತ್ತಿತ್ತು. ಇದನ್ನು ಮನಗಂಡ ಮ.ಕೃ. ಪಕ್ಕದ ಮನೆಯನ್ನು ಬಾಡಿಗೆಗೆ ಪಡೆದು ತಾವು ಏಕೆ ಶಾಲೆ ತೆರೆಯಬಾರದೆಂದು ಯೋಚಿಸಿದರು. ಸ್ನೇಹಿತರ ಪ್ರೋತ್ಸಾಹದೊಂದಿಗೆ ೧೯೭೮ರಲ್ಲಿ "ಶ್ರೀವಾಣಿ ವಿದ್ಯಾಸಂಸ್ಥೆ" ಪ್ರಾರಂಭವಾಯಿತು.

ಪ್ರಾರಂಭಿಸಿದ ವರ್ಷದಿಂದಲೇ ಸರ್ಕಾರದ ಸಹಾಯ ದೊರೆಯುವುದೆಂದು ಭಾವಿಸಿದ್ದರು. ಮ.ಕೃ. ಆದರೆ ಸರ್ಕಾರದ ನಿಯಮದ ಪ್ರಕಾರ ಮೂರುವರ್ಷ ಶಾಲೆ ನಡೆಸಿದರೆ ಮಾತ್ರ ಸರ್ಕಾರ ಸಹಾಯ ಮಾಡುತ್ತಿತ್ತು, ಆಯಾಗಳಿಗೆ ಶಿಕ್ಷಕರಿಗೆ ಸಂಬಳ ಕೊಡುವುದು ಕಷ್ಟವಾಯಿತು ಆಗ ಬೇರೆ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಮಗಳಿಗೆ T.C.H. ತರಬೇತಿಗೆ ಕಳುಹಿಸಿದರು. ಕಡಿಮೆ ಸಂಬಳ ಪಡೆಯಲು ಒಪ್ಪಿದ, ಟ್ರೈನಿಂಗ್ ಪಡೆದ ಶಿವರುದ್ರಪ್ಪ ಎಂಬ ಶಿಕ್ಷಕರು ಹಾಗೂ ಸ್ನೇಹಿತರ ಇಬ್ಬರು ಹೆಣ್ಣು ಮಕ್ಕಳನ್ನು ನರ್ಸರಿ ತರಗತಿಗೆ ಶಿಕ್ಷಕರಾಗಿ ನೇಮಿಸಿದರು, ಇವರ ನಡೆ ರೀತಿ ನೀತಿ ಧ್ಯೇಯಗಳನ್ನು ಕಂಡ ಶಿವರುದ್ರಪ್ಪನವರು ಸರ್ಕಾರಿ ಕೆಲಸ ಸಿಕ್ಕಿದಾಗಲೂ ತಾವು ಶಾಲೆ ಸರ್ಕಾರ ಅನುದಾನ ಸಿಗುವವರೆಗೂ ಕಾಯುವುದಾಗಿ ತಿಳಿಸಿದರು. ಆದರೆ ಮ.ಕೃ. ಅವರೇ ತಿಳಿಯ ಹೇಳಿ ಸರ್ಕಾರಿ ಕೆಲಸಕ್ಕೆ ಹೋಗಲು ಕಳುಹಿಸಿದರು.

ಮೂರು ವರ್ಷದ ನಂತರ ಶಾಲೆಯನ್ನು ಬೇರೆ ಕಟ್ಟಡಕ್ಕೆ ವರ್ಗಾಯಿಸಿದರು. ನರ್ಸರಿ ಜೊತೆಗೆ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ಆದರೆ ಟ್ರೈನಿಂಗ್

ಟೀಚರ್ಸ್‌ಗಾಗಿ ಪರದಾಡಬೇಕಾಯಿತು ಹತ್ತಿರದಲ್ಲೆ ಸ್ನೇಹಿತರ ಮಗಳು T.C.H. ಮಾಡಿದ್ದಳು. ಅವಳನ್ನು ಕೆಲಸಕ್ಕೆ ಸೇರಿಸಿಕೊಂಡರು. ನಂತರ ಶಿಕ್ಷಕರ ಆಯ್ಕೆ ಕಷ್ಟದ ಕೆಲಸವಾಯಿತು, ಒಬ್ಬರ ಆಯ್ಕೆಗೆ ೨೦–೩೦ ಅರ್ಜಿಗಳು ಬಂದಿದ್ದವು. ಅವಶ್ಯಕತೆ ಇಲ್ಲದಿದ್ದರೂ ಕೆಲಸಕ್ಕೆ ಕಡಿಮೆ ಸಂಬಳಕ್ಕೆ ಬರಲು ತಯಾರಿದ್ದರು ಆಗ ಮ.ಕೃ. ಹತ್ತಿರದಲ್ಲಿ ಮನೆ ಇರಬೇಕು. ಕೆಲಸದ ಅವಶ್ಯಕತೆ ಇರಬೇಕು ಕೆಲಸದಲ್ಲಿ ಶ್ರದ್ಧೆ, ಆಸಕ್ತಿ ಇರಬೇಕು ಎಂಬ ನಿಯಮಗಳನ್ನು ಮಾಡಿ ಶಿಕ್ಷಕಿಯರನ್ನು ಆರಿಸಿದರು. ಹಾಗೆ ಆರಿಸಿ ಬಂದಂಥ ಶಿಕ್ಷಕಿಯರು ಅವರ ಧ್ಯೇಯಗಳನ್ನು ತಿಳಿದು ಶಾಲೆಯ ಮಕ್ಕಳಿಗಾಗಿ ನಿಷ್ಠೆಯಿಂದ ಕೆಲಸ ಮಾಡಿದರು. ಸರ್ಕಾರದಿಂದ ಅನುದಾನವೂ ಸಿಕ್ಕಿತು. ನಂತರ ಚೆಕ್ ಮೂಲಕ ಸಂಬಳ ಪಡೆದರು ಶಿಕ್ಷಕಿಯರು. ಸರ್ವತೋಮುಖ ಬೆಳವಣಿಗೆಗೆ ಅವಶ್ಯಕವಾದ ಶಿಕ್ಷಣ ಕೊಡುವುದು ಈ ಶಾಲೆಯ ಗುರಿಯಾಗಿತ್ತು. ಮೂರನೆ ಮಗಳೇ ಇಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ೩೦ ವರ್ಷಗಳ ಕಾಲ ಶಾಲೆಯನ್ನು ಉತ್ತಮ ಶಾಲೆಯಾಗಿ ಸರ್ಕಾರದಿಂದಲೂ ಪ್ರಶಂಶಿಸಲ್ಪಡುವಂತೆ ನಡೆಸಿಕೊಂಡು ಬಂದರು.

ಕನ್ನಡ ಶಾಲೆಗಳಿಗೆ ಮಕ್ಕಳು ಬರುವುದು ಕಡಿಮೆಯಾಗಿ ನಲವತ್ತು ವರ್ಷ ನಡೆಸಿದ ಶಾಲೆಯನ್ನು ಮುಚ್ಚಬೇಕಾಯಿತು. ಶಿಕ್ಷಕಿಯರು ಬೇರೆ ಶಾಲೆಗಳಿಗೆ ವರ್ಗವಾದರು ಕೆಲವರು ನಿವೃತ್ತಿಯನ್ನು ಪಡೆದರು.

ಪೋಷಕರು ಇಂಗ್ಲೀಷ್ ಮೀಡಿಯಂ ಶಾಲೆ ನಡೆಸಲು ಕೇಳಿದರು ಆದರೆ ಕಟ್ಟಾ ಕನ್ನಡ ಅಭಿಮಾನಿ ಹಾಗೂ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೆ ಆಗಬೇಕೆಂಬ ಧ್ಯೇಯವಿದ್ದ ಮ.ಕೃ. ಇಂಗ್ಲೀಷ್ ಮಾಧ್ಯಮ ಮಾಡಲು ಒಪ್ಪಲಿಲ್ಲ.

೧೯೮೦–೮೧ ರ ಇಸವಿಯಲ್ಲಿ ಶ್ರೀಮಾನ್ ಹೆಚ್.ನರಸಿಂಹಯ್ಯ ಅಧ್ಯಕ್ಷರು ಪಿ.ವಿ. ಗೋಪಿನಾಥದಾಸರು ಕಾರ್ಯದರ್ಶಿ ಹಾಗೂ ಮ.ಕೃ. ಖಜಾಂಚಿಯಾಗಿದ್ದ "ಕನ್ನಡ ಪಕ್ಷ" ಹುಟ್ಟಿಕೊಂಡಿತು. ಈ ಪಕ್ಷವನ್ನು ಇತರ ಸ್ನೇಹಿತರ ಬೆಂಬಲದಿಂದ ಕಟ್ಟಿ ಬೆಳಸಿದರು. ಕನ್ನಡ ಪರ ಹೋರಾಡಲು, ಕನ್ನಡ ಶಾಲೆಗಳಲ್ಲಿ ಇದ್ದ ಕುಂದು ಕೊರತೆಗಳನ್ನು ನಿವಾರಿಸಲು ಸಮಾಜ ಹಾಗೂ ಸರ್ಕಾರ ಕೈಗೊಳ್ಳಬೇಕಾದ ಕಾರ್ಯಕ್ರಮದ ಬಗ್ಗೆ ಉಪನ್ಯಾಸಗಳನ್ನು ನೀಡಿ ಜನಜಾಗೃತಿಗೊಳಿಸುತ್ತಿದ್ದರು. ಮ.ಕೃ. ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ಬಗ್ಗೆ ಪ್ರತಿಭಟಿಸಲು ಇತರ ಕನ್ನಡ ಸಂಘಗಳ ಸದಸ್ಯರ ಜೊತೆಯಲ್ಲಿ ದೆಹಲಿಗೆ ಹೋಗಿದ್ದರು ಮ.ಕೃ. ರಾಜಮಹಲ್ ವಿಲಾಸ್ ಬಡಾವಣೆಗೆ ಬಂದ ನಂತರ ಪಕ್ಷದಿಂದ ಹೊರಬಂದರು. ಕೆಂಪೇಗೌಡನಗರ (ಹಿಂದೆ ಗುಟ್ಟಹಳ್ಳಿ)ದಲ್ಲಿದ್ದ ಮಕ್ಕಳ ಆಟದ ಮೈದಾನದಲ್ಲಿ ಕಾಂಪ್ಲೆಕ್ಸ್ ಕಟ್ಟುವುದನ್ನು ವಿರೋಧಿಸುತ್ತಿದ್ದ ಉದಯಬಾನು ಕಲಾ ಸಂಘದ ಜೊತೆ ಸೇರಿ ಹೋರಾಡಿದರು,

ಫಲವಾಗಿ ಈಗ ಅದು ಉದಯಬಾನು ಮಕ್ಕಳ ಆಟದ ಮೈದಾನವಾಗಿ ಉಳಿದುಕೊಂಡಿದೆ.

ಮ.ಕೃ. ಅವರ ಕಾಲೇಜು ದಿನಗಳಲ್ಲಿ ಒಮ್ಮೆ ಒಂದು ಕಾರ್ಯಕ್ರಮದಲ್ಲಿ ಮ.ಕೃ. ಅವರು ಗಣಪತಿ ಸ್ತುತಿಯನ್ನು ಹಾಡಿದರು. ಅಧ್ಯಕ್ಷರಾಗಿ ಬಂದಿದ್ದ ಶ್ರೀ ಮಾಸ್ತಿಯವರು ಆ ಹಾಡಿನ ಬಗ್ಗೆ ವಿಚಾರಿಸಿದರು. ತಾನೇ ತಮ್ಮ ಹಳ್ಳಿಯಲ್ಲಿ ಸಂಗ್ರಹಿಸಿರುವುದಾಗಿ ಹೇಳಿ ತಮ್ಮ ಸಂಗ್ರಹದ ಕೆಲವು ಹಾಡುಗಳನ್ನು ತೋರಿಸಿದರು. ಅದನ್ನು ಕಂಡ ಶ್ರೀ ಮಾಸ್ತಿಯವರು ತಮ್ಮ ಮನೆಯಲ್ಲಿ ಹಾಡಬೇಕೆಂದು ದಿನವನ್ನು ನಿಶ್ಚಯಿಸಿ ಆಹ್ವಾನಿಸಿದರು. ಮ.ಕೃ. ಉತ್ಸಾಹದಿಂದ ಅವರ ಮನೆಗೆ ಹೋದಾಗ ದಂಗಾಗಿ ನಿಂತರು ಅಲ್ಲಿ ಶ್ರೀ ಮಾಸ್ತಿಯವರು ಅನೇಕ ವಿದ್ವಾಂಸರನ್ನು, ಸ್ನೇಹಿತರನ್ನು ಕರೆದು ಒಂದು ಚಿಕ್ಕ ಸಭೆಯನ್ನಾಗಿ ಏರ್ಪಡಿಸಿದ್ದರು. ಮ.ಕೃ. ಅವರಿಗೆ ಧೈರ್ಯವಾಗಿ ಹಾಡಲು ಹೇಳಿದರು. ಅವರ ಅಪೇಕ್ಷೆಯಂತೆ ಹಾಡಿ, ಹಾಡಿಗೆ ವಿವರಣೆ ಕೊಟ್ಟರು. ಮ.ಕೃ. ಅವರ ಸಂಗ್ರಹ ಕಾರ್ಯ ವಿವರಣೆಯನ್ನು ಕೇಳಿದ ಹಿರಿಯರು ತುಂಬು ಹೃದಯದಿಂದ ಆಶೀರ್ವದಿಸಿದರು. ಮ.ಕೃ. ಅವರಿಗೆ ಈ ಕಾರ್ಯಕ್ರಮ ವಿದ್ವಾಂಸರ ಮುಂದೆ ಕೊಟ್ಟ ಮೊದಲ ಕಾರ್ಯಕ್ರಮವಾಗಿತ್ತು.

ಜನಪದ ಸಾಹಿತ್ಯ ಸಂಗ್ರಹಕಾರ್ಯಕ್ಕೆ ಮನಸ್ಸು ಗಟ್ಟಿಯಾಯಿತು. ಈ ರೀತಿ ಹೀಗೆ ಮಾಸ್ತಿಯವರು ಕಿರಿಯರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಕಥೆಗಾರ ಕೃಷ್ಣಮೂರ್ತಿಯವರು ೭–೮ ವರ್ಷದಲ್ಲೆ ಪುರಾಣಕಥೆ ಪ್ರಹ್ಲಾದ, ನಚಿಕೇತ, ಮಾರ್ಕಂಡೇಯ, ಸಾಮಾಜಿಕ ಕಥೆಗಳನ್ನು (ಅಜ್ಜಿಕಥೆ), ಪ್ರಾಣಿಪಕ್ಷಿಗಳ ಕಥೆ ಇವುಗಳನ್ನು ತಮ್ಮ ತಂದೆಯವರಿಂದ ಕೇಳಿದ್ದರು. ನಂತರ ತಮಗೆ ತಿಳಿದ ಕಥೆಗಳನ್ನು ಗೆಳೆಯರಿಗೂ ಹೇಳುತ್ತಿದ್ದರು, ಹಾಸನಕ್ಕೆ ಮಾವನ ಮನೆಗೆ ಹೋದಾಗ ಅಲ್ಲಿ ಲಲಿತಮ್ಮನವರ ತಂಗಿ, ಗೆಳತಿಯರಿಗೆ ದುರ್ಗೇಶ ನಂದಿನಿ, ರಾಮವರ್ಮ ಲೀಲಾವತಿ (ರೋಮಿಯೋ ಜೂಲಿಯಟ್ ಕಥೆಯನ್ನು ಕನ್ನಡಕ್ಕೆ ಭಾಷಾಂತರಿಸಿ) ಕುಮುದಿನಿ ಮುಂತಾದ ಕಥೆಗಳನ್ನು ಹೇಳುತ್ತಿದ್ದರು. ಕೆಲವು ವೇಳೆ ದೊಡ್ಡವರು ಬಂದು ಸೇರುತ್ತಿದ್ದರು.

ಮ.ಕೃ. ಅನೇಕ ಕಥೆಗಳನ್ನು ಬರೆಯುವ ಮುಂಚೆ ತನ್ನ ಸ್ನೇಹಿತರಿಗೆ, ನೆಂಟರಿಗೆ ಚಿಕ್ಕದಾಗಿ ಹೇಳಿ ಅವರು ಮೆಚ್ಚಿದ ಮೇಲೆ ಕಥೆ ಬರಹದ ರೂಪಕ್ಕೆ ಬರುತ್ತಿತ್ತು.

ಕನ್ನಡ ಸಾಹಿತ್ಯ ಪರಿಷತ್‌ನ ಸಭಾಂಗಣದಲ್ಲಿ ಕಥೆಗಾರರ ಸಮ್ಮೇಳನ ಏರ್ಪಾಡಾಗಿತ್ತು. ಎಲ್ಲಾ ಹಿರಿಯ ಕಿರಿಯ ಸಾಹಿತಿಗಳು ಆಗಮಿಸಿದ್ದರು. ಬಹಳಷ್ಟು ಜನ ಕಥೆಗಾರರೂ ಸೇರಿದ್ದರು. ಕಥೆ ಓದುವವರ ಪಟ್ಟಿಯಲ್ಲಿ ಮ.ಕೃ. ಅವರ ಹೆಸರು ಇತ್ತು. ಶ್ರೀಮಾನ್

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಒಬ್ಬೊಬ್ಬರಾಗಿ ಸ್ವರಚಿತ ಕಥೆಗಳನ್ನು ಓದಲು ಪ್ರಾರಂಭಿಸಿದರು. ಮ.ಕೃ. ತಮ್ಮ ಹೆಸರು ಕೊನೆಯಲ್ಲಿ ಬರಲಿ ಎಂದು ಜಪಿಸುತ್ತಿದ್ದರು. ತುಂಬಾ ವೇಳೆಯಾದರೆ ಕಾರ್ಯಕ್ರಮ ಮೊಟಕಾಗಿ ತಮ್ಮ ಸರದಿ ಬರುವುದಿಲ್ಲವೆಂಬ ನಂಬಿಕೆ. ಆದರೆ ಆದದ್ದೆ ಬೇರೆ ಮ.ಕೃ. ವೇದಿಕೆಗೆ ಹೋಗಬೇಕಾಯಿತು. ಈಗಲೇ ಬಹಳ ಹೊತ್ತಾಗಿರುವುದಾಗಿಯೂ ಕಥೆಯ ಸಾರಾಂಶವನ್ನು ಹೇಳುವುದಾಗಿ ಹೇಳಿ "ದೇವಿ" ಕಥೆಯನ್ನು ಹೇಳಿದರು. ಅಧ್ಯಕ್ಷರಾದ ಶ್ರೀ ಮಾಸ್ತಿಯವರು ಕಥೆಯನ್ನು ಕೊಡಲು ಕೇಳಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಹೇಳಿದರು. ಕರಡುಪ್ರತಿ ಎಂದೂ ನೀಟಾಗಿ ಬರೆದು ತಂದು ಕೊಡುವೆ ಎಂದು ಹೇಳಿದರೂ ಕೇಳದೇ ಒತ್ತಾಯಿಸಿದರು ಮಾಸ್ತಿ. ವಿಧಿ ಇಲ್ಲದೇ ಕಾಗದ ಸುರುಳಿಯನ್ನು ಕೊಟ್ಟರು ಮ.ಕೃ. ಅಲ್ಲೇನಿದೆ ಖಾಲಿಹಾಳೆ ಅಧ್ಯಕ್ಷ ಭಾಷಣ ಮಾಡುವಾಗ ಮಾಸ್ತಿಯವರು ಕಥೆ ಬರೆಯುವುದಷ್ಟೆ ಕಲೆಯಲ್ಲ ಕಥೆ ಹೇಳುವುದೂ ಒಂದು ಕಲೆ, ಕೃಷ್ಣಮೂರ್ತಿ ಕಥೆಯನ್ನು ಬರೆಯದೆಯೇ ಸೊಗಸಾಗಿ ಕಥೆ ಹೇಳಿದ್ದಾನೆ ಎಂದು ಪ್ರಶಂಸಿದರು. ಪ್ರೇಕ್ಷಕರೆಲ್ಲಾ ಚಪ್ಪಾಳೆಯೊಡನೆ ಈ ಮಾತನ್ನು ಒಪ್ಪಿಕೊಂಡರು.

ಮ.ಕೃ ಅನೇಕ ಮಕ್ಕಳ ಸಮಾವೇಶ, ಹಿರಿಯ, ಕಿರಿಯ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆಗಳಿಗೆ ಮುಖ್ಯ ಅತಿಥಿಗಳಾಗಿ ಹೋಗುತ್ತಿದ್ದರು. ಅಲ್ಲಿಯ ಮಕ್ಕಳಿಗೆ ಸರಿಹೊಂದುವಂತಹ ಜಾನಪದ ಕಥೆಗಳನ್ನು ಹೇಳಿ ಮಕ್ಕಳಿಗೆ ಜನಪದ ಕಥೆಗಳಲ್ಲಿ ಆಸಕ್ತಿ ಹುಟ್ಟುವಂತೆ ಮಾಡುತ್ತಿದ್ದರು. ತಮ್ಮ ಸರಳವಾದ ಭಾಷೆ ಅದ್ಭುತ ವರ್ಣನೆಗಳಿಂದ ಕೇಳುಗರನ್ನು ಅಯಸ್ಕಾಂತದಂತೆ ಆಕರ್ಷಿಸುವ ಶಕ್ತಿ ಅವರ ಮಾತಿನಲ್ಲಿರುತ್ತಿತ್ತು. ಹಲವು ಶಾಲೆಗಳಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಕಥೆ ಹೇಳುವ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದರು.

ಬೆಂಗಳೂರಿನ ಒಂದು ಪ್ರತಿಷ್ಠಿತ ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ ಕಥೆ ಹೇಳುವ ಕಾರ್ಯಕ್ರಮಕ್ಕೆ ಹೋಗಿದ್ದರು ಮತಿಘಟ್ಟ ಕೃಷ್ಣಮೂರ್ತಿ 'ನೊಣ ಹೆಸರು ಕೇಳಿದ್ದು' ಕಥೆಯನ್ನು ಹೇಳಿ 'ಯಾರು ಈ ಕಥೆಯನ್ನೇ ಹೇಳುವಿರಿ'? ಎಂದು ಕೇಳಿದಾಗ ಸಭೆಯಲ್ಲಿದ್ದ ೨೦೦ಕ್ಕೂ ಹೆಚ್ಚು ಮಕ್ಕಳು ಕೈ ಎತ್ತಿದ್ದನ್ನು ಕಂಡು ಬೆರಗಾದರು. ಮತಿಘಟ್ಟ ಕೃಷ್ಣಮೂರ್ತಿ ಒಬ್ಬ ಹುಡುಗನ ಹತ್ತಿರ ಹೇಳಿಸಿ ಮಕ್ಕಳ ಗ್ರಹಣ ಶಕ್ತಿಯನ್ನು, ಆಸಕ್ತಿಯನ್ನು ಹಾಗೂ ಅಭಿವ್ಯಕ್ತಿಯ ಶಕ್ತಿಯನ್ನು ಕಂಡು ಸಂತೋಷಪಟ್ಟರು ಮತಿಘಟ್ಟ ಕೃಷ್ಣಮೂರ್ತಿ.

ಜನಪದ ಹಾಡುಗಳ ಸಂಗ್ರಹಕ್ಕೆ ಹೊರಟ ಮತಿಘಟ್ಟ ಕೃಷ್ಣಮೂರ್ತಿ ಹಳ್ಳಿಗರು, ಕಲಾವಿದರು ಹೇಳುತ್ತಿದ್ದ ಕಥೆಗಳನ್ನು ಸಂಗ್ರಹಿಸತೊಡಗಿದರು. ಹಾಗಾಗಿ ಇವರು ಸಂಗ್ರಹಿಸಿರುವ ಕಥೆಗಳು ಒಂದು ಪ್ರದೇಶದ, ಒಂದು ಜನಾಂಗದ ಕಥೆಗಳಲ್ಲ. ಹಾಸನ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಧಾರವಾಡ, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ

ವೈವಿಧ್ಯಪೂರ್ಣವಾದ ಸುಮಾರು ೨೦೦(ಇನ್ನೂರು) ಕಥೆಗಳನ್ನು ಸಂಗ್ರಹಿಸಿದ್ದಾರೆ. ಇದರೊಡನೆ ಕಥನ ಗೀತೆಗಳ ಸಂಗ್ರಹವೂ ಇದೆ. (ಲಕ್ಕಣ್ಣ – ಈರಣ್ಣ ಇತ್ಯಾದಿ)

ಮತಿಘಟ್ಟ ಕೃಷ್ಣಮೂರ್ತಿಯವರು ಕಥೆಗಳನ್ನು ಸಂಗ್ರಹಿಸುವ ಬಗ್ಗೆ "ಜನಪದ ಗೀತೆಗಳನ್ನು ಸಂಗ್ರಹಿಸುವುದಕ್ಕಿಂತಲೂ ಜನಪದ ಕಥೆಗಳನ್ನು ಸಂಗ್ರಹಿಸುವುದು ಕಷ್ಟದ ಕಾರ್ಯ... ಕಥೆಗಳ ವಿಚಾರ ಹಾಗಲ್ಲ ಹೇಳುವವರ ಮನೋಧರ್ಮ ಹಾಗೂ ಮಾತುಗಾರಿಕೆ, ಗದ್ಯರೂಪದ ಕಥೆಗಳಲ್ಲಿ ಇನ್ನೂ ಹೆಚ್ಚಿನ ವೈವಿಧ್ಯತೆ, ಪಾಠಾಂತರಗಳು ಕಂಡುಬರುತ್ತದೆ. ಒಂದೇ ಮೂಲದ ಕಥೆ ಕಾಲಕ್ರಮದಲ್ಲಿ ಹಲವಾರು ರೂಪಾಂತರ ಹೊಂದುವುದು ಅಪರೂಪದ ಸಂಗತಿಯೇನಲ್ಲ." ಎಂದು ಹೇಳಿಕೊಂಡಿದ್ದಾರೆ.

ಶಕುನದಹಕ್ಕಿ ಮತ್ತು ಇತರ ಕಥೆಗಳು ಅತ್ತೆ ಮನೆ ಸೊಸೆ (ಹಾಸನಾಂಬ ದೇವಸ್ಥಾನದ್ದು) ಅಪರೂಪದ ಅತ್ತೆ (ದೆವ್ವದ ಕಥೆ) ದೇವಿ, ನಾಗಿ ಮುಂತಾದ ಕಥೆಗಳು ಕನ್ನಡಪ್ರಭ, ಪ್ರಜಾಮತ, ತಾಯಿನಾಡು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹಲವು ಕಥೆಗಳನ್ನು ಸಂಕಲನ ರೂಪದಲ್ಲಿ ತಮ್ಮ ಗುರುಮೂರ್ತಿ ಪ್ರಕಾಶನದ ಮೂಲಕ ಪ್ರಕಟಿಸಿದ್ದಾರೆ.

'ಕಂಚಿ' ಬೆಂಗಳೂರು ರೇಡಿಯೋ ಕಾರ್ಯಕ್ರಮದಲ್ಲಿ ನಾಟಕ ರೂಪದಲ್ಲಿ ಪ್ರಸಾರವಾಗಿದೆ. ಮುಗ್ಧ ಮನಸ್ಸಿನ (ಸ್ವಭಾವದ) ಹೆಣ್ಣು ಗ್ರಾಮೀಣ ಪರಿಸರದ ಆರ್ಥಿಕ ಅಸಮಾನತೆ, ನೈತಿಕ ಅವನತಿ ಮತ್ತು ಸಾಮಾಜಿಕ ಲೋಪ ದೋಷಗಳ ಕಾರಣದಿಂದ ದುಷ್ಟಶಕ್ತಿಗಳ ಕೈಗೆ ಸಿಲುಕಿ ನರಳಿ – ನರಳಿ ದುರಂತಕ್ಕೆ ಈಡಾಗುವ ಕಥೆ "ಕಂಚಿ, ಹಳ್ಳಿಯಲ್ಲಿಯೂ ಮಾನವ ಸಹಜವಾದ ಪ್ರೀತಿ – ಪ್ರೇಮ – ವಿರಹ ಭಾವಗಳನ್ನು – ರಾಗಗಳನ್ನು ಕಾಣಬಹುದು ಎಂಬುದು ದೇವಿ, ನಾಗಿ, ಕಥೆಗಳಲ್ಲಿ ಚಿತ್ರಿತವಾಗಿದೆ.

ಜಾಣಕತ್ತೆ, ನೊಣ ಹೆಸರು ಕೇಳಿದ್ದು, ಚಂದ್ರಕಂತೆ ಮಕ್ಕಳ ಕಥೆಗಳು ತನ್ನ ಹೆಸರನ್ನು ಮರೆತ ನೊಣ ಪರಿಸರದ ವಸ್ತುಗಳಾದ ಮರ, ಗಿಣಿ ನೀರು ತಿಗರಿಗಳಿಗೆ ತನ್ನ ಹೆಸರೇನೆಂದು ಕೇಳುತ್ತಾ ಗಂಟೆಯ ಶಬ್ಧದಿಂದ ತನ್ನ ಹೆಸರನ್ನು ತಿಳಿಯುವುದು. ನೊಣ ಹೆಸರು ಕೇಳಿದ್ದು, ತನ್ನ ಬುದ್ಧಿವಂತಿಕೆಯಿಂದ ಹುಲಿಯನ್ನು ಸೋಲಿಸಿದ ಕತೆ, ಜಾಣಕತ್ತೆ, ಕಾರಣಾಂತರದಿಂದ ಅಣ್ಣನನ್ನೇ ಮದುವೆಯಾಗಬೇಕಾಗಿ ಬಂದ ತಂಗಿ ಚಂದ್ರನ ಸಹಾಯದಿಂದ ಚಂದ್ರಲೋಕಕ್ಕೆ ಹೋಗಿ ಬಂದ ಕಥೆ ಚಂದ್ರಕಾಂತೆ, ಚಂದ್ರನನ್ನೇ ಮದುವೆಯಾದ ಕಥೆ ರಾಜಕುಮಾರಿಯ ಕಥೆ ತೆಲುಗು ಮೂಲದ ಜನಪದ ಕಥೆ.

ಕನ್ನಡ ಜನಪದ ಮಕ್ಕಳ ಕಥೆಗಳು. ಈ ಪುಸ್ತಕದಲ್ಲಿ ೨೦ ಕಥೆಗಳಿವೆ. ಮೂರು ವರ್ಷದ ಮಕ್ಕಳಿಂದ ೧೪ ವರ್ಷದ ಮಕ್ಕಳಿಗೆ ಹೇಳುವ ಸಚಿತ್ರ ಕಥೆಗಳ ಸಂಗ್ರಹ.

ಶಿವಮೊಗ್ಗ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನ ಅಧ್ಯಕ್ಷರಿಂದ ಬಿಡುಗಡೆ ಮಾಡಲಾಯಿತು. ಮಕ್ಕಳಿಗೆ ತುಂಬಾ ಇಷ್ಟವಾದ ಪುಸ್ತಕ. ಒಂದು ವರ್ಷದ ಒಳಗೆ ೫೦೦ಕ್ಕೂ ಹೆಚ್ಚು ಪುಸ್ತಕ ಮಾರಾಟವಾಗಿದೆ. ಇನ್ನು ೨೦ ಕಥೆಗಳು ಪ್ರಕಟಣೆಗೆ ಸಿದ್ಧವಾಗಿದೆ. ಮತಿಘಟ್ಟ ಕೃಷ್ಣಮೂರ್ತಿ ಅವರೇ ಸಿದ್ಧ ಮಾಡಿ ಇಟ್ಟಿದ್ದಾರೆ.

ಮತಿಘಟ್ಟ ಕೃಷ್ಣಮೂರ್ತಿ ಅವರು ಕಥೆ ಹೇಳುವ ಹಾಗೂ ಕೇಳುಗರ ಬಗ್ಗೆ "ಏಳೆಂಟು ದಶಕಗಳ ಹಿಂದೆ ಪ್ರತಿಮನೆಯಲ್ಲೂ ಹಿರಿಯರು ಮಕ್ಕಳಿಗೆ ಕಥೆ ಹೇಳುತ್ತಿದ್ದರು. ಈಗ ಆ ಸಂಪ್ರದಾಯ ಸಂಪೂರ್ಣವಾಗಿ ಮರೆಯಾಗಿದೆ...... ಕಥೆಯನ್ನು ಓದಿದ ಹಿರಿಯರು ಅವುಗಳನ್ನು ತಮ್ಮ ಮಕ್ಕಳಿಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.... ಈಗಿನ ಮಕ್ಕಳು ಕಥೆಗಳನ್ನು ಕೇಳಿ ಸಂತೋಷಪಡುತ್ತಾರೆಂದು ನನ್ನ ಅನುಭವಕ್ಕೆ ಬಂದಿದೆ.... ಹಿರಿಯರು ಈ ಮನವಿಗೆ ಓಗೊಡುವರೆಂದು ನಂಬಿದ್ದೇನೆ" ಎಂದು ಹೇಳಿಕೊಂಡಿದ್ದಾರೆ (ಕನ್ನಡ ಜನಪದ ಮಕ್ಕಳ ಕಥೆಗಳು).

ಮರುಗಿ, ಸರ್ವೋದಯ ಕಳಸಾಪುರದ ಹುಡುಗರು ಪುಟ್ಟತಂಗಿ, ಬಸವಣ್ಣನ ಬಾಲ್ಯ ಅಡಾವುಡಿ – ಮತಿಘಟ್ಟ ಕೃಷ್ಣಮೂರ್ತಿಬರೆದಿರುವ ಪ್ರಮುಖ ಕಾದಂಬರಿಗಳು.

"ಕಾಣದ ಕೈ" ಎಂದು ಚಿಕ್ಕದಾಗಿ ಬರೆದ ಕಥೆಯನ್ನು ವಿಸ್ತರಿಸಿ ಬರೆದ ಕಾದಂಬರಿ ಮರುಗಿ. ಈ ಕಾದಂಬರಿಯ ನಾಯಕಿ, ಮರುಗಿ ಎಂಬ ಹೆಣ್ಣು ಮಗಳು ತಂದೆ – ತಾಯಿಯನ್ನ ಕಳೆದುಕೊಂಡು ಅಜ್ಜಿಯ ಮನೆಗೆ ಬರುತ್ತಾಳೆ. ಅವಳಿಗೆ ಮೂವರು ಮಾವಂದಿರು. ಕೊನೆಯ ಮಾವ ಚಿಕ್ಕ ಮರುಗಿಗಿಂತ ಸ್ವಲ್ಪ ದೊಡ್ಡವನು. ಬಾಲ್ಯದ ಗೆಳೆಯ ಮನೆಯಲ್ಲಿ ಎಲ್ಲರೂ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಮರುಗಿಯನ್ನು ಮದುವೆ ಮಾಡಿಕೊಳ್ಳಲು ಬೇಕಾದ ಹಣಕ್ಕಾಗಿ ಚಿಕ್ಕ ಘಟ್ಟದ ಕೆಳಗೆ ಕೆಲಸಕ್ಕೆ ಹೋಗುತ್ತಾನೆ. ಮರುಗಿಯ ಅಜ್ಜಿ ದೊಡ್ಡ ಮಾವ ನಂಜನಿಗೆ ಮದುವೆಯ ವಯಸ್ಸು ಮೀರಿದ್ದರಿಂದ ಹಾಗೂ ಹೆಚ್ಚು ತೆರಕೊಟ್ಟು ಹೆಣ್ಣು ತರಲು ಸಾಧ್ಯವಿಲ್ಲದ್ದರಿಂದ ಮರುಗಿಯನ್ನು ಕೊಟ್ಟು ಮದುವೆ ಮಾಡುತ್ತಾಳೆ. ಚಿಕ್ಕ ಮದುವೆಯ ರಾತ್ರಿ ಊರಿಗೆ ಬಂದು ವಿಷಯ ತಿಳಿದು ತಾನು ತಂದಿದ್ದ ಸೀರೆ – ಒಡವೆಗಳನ್ನು ಚಪ್ಪರದ ಒಳಗೆ ಇಟ್ಟು ದೇಶಾಂತರ ಹೋಗುತ್ತಾನೆ. ಖಾಯಿಲೆಯಿಂದ ಅಜ್ಜಿ – ಗಂಡ ಸಾವನ್ನಪ್ಪುತ್ತಾರೆ. ಮರುಗಿ ಎರಡನೇ ಮಾವ ಜವರನ ಸಹಾಯದಿಂದ ಹೊಲದಲ್ಲಿ ದುಡಿಯುತ್ತಾಳೆ. ಜವರ ತನ್ನನ್ನು ಮದುವೆ (ಕೂಡಿಕೆ) ಯಾಗಲು ಮುಂದೆ ಬಂದಾಗ ಅವನಿಗೆ ಚಿಕ್ಕನನ್ನು ಕರೆತಂದರೆ ಮಾತ್ರ ಒಲಿಯುವುದಾಗಿ ಹೇಳಿ ಚಿಕ್ಕನನ್ನು ಹುಡುಕಿಸಲು ಕಳುಹಿಸುತ್ತಾಳೆ. ಮರುಗಿ ಸಾಯುವ ಸ್ಥಿತಿಯಲ್ಲಿದ್ದ ಚಿಕ್ಕ ಮನೆಯ ಮುಂದೆ ಬಂದು ಮರಣ ಹೊಂದುತ್ತಾನೆ. ಅದನ್ನು ಕಂಡು ಮರುಗಿಯೂ ಸಾಯುತ್ತಾಳೆ. ಇವರಿಬ್ಬರ ಪ್ರೀತಿಯನ್ನು ಕಂಡ ಊರ ಜನ ಅಕ್ಕ – ಪಕ್ಕ ಹೊಲದಲ್ಲಿ ಹೂಳುತ್ತಾರೆ (ಸಮಾಧಿ ಮಾಡುತ್ತಾರೆ).

ಗ್ರಾಮೀಣ ಬದುಕಿನ ಕಟುವಾಸ್ತವದ ಹಿನ್ನೆಲೆಯಲ್ಲಿ ದುರಂತ ನಾಯಕಿಯ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ ಮ.ಕೃ. ಅವರು.

ಅಡಾವುಡಿ :– ಟಿಪ್ಪುಸುಲ್ತಾನ್ ಕಾಲದಲ್ಲಿದ್ದ ಜನಜೀವನ, ಅವನ ವಿರುದ್ಧ ಹಾಗೂ ಪರವಾಗಿದ್ದ ಪಾಳೇಗಾರರ ವಿವರ ಇವುಗಳನ್ನೊಳಗೊಂಡ ಕೃತಿ. ಕಥೆಯ ಕೇಂದ್ರ ಬಿಂದು ಮತಿಘಟ್ಟ ಕೃಷ್ಣಮೂರ್ತಿ ಪೂರ್ವಿಕರು. ಅವರ ಜೀವನದ ಆಗು – ಹೋಗುಗಳೊಡನೆ ಅಂದಿನ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಜೀವನವನ್ನು ವಿಸ್ತಾರವಾಗಿ ತಿಳಿಸುವ ಕಾದಂಬರಿ.

ಪುಟ್ಟತಂಗಿ :– ಒಬ್ಬಳು ಬಾಲವಿಧವೆಯ ಜೀವನದಸುತ್ತ ಹೆಣೆದ ಕಾದಂಬರಿ.

ಬಸವಣ್ಣನ ಬಾಲ್ಯ :– ಜನಪದ ಕಥೆಯೊಂದರ ಸುತ್ತ ಅಂದಿನ ಸಾಮಾಜಿಕ ಜೀವನವನ್ನು ತಿಳಿಸುವ ಕಾದಂಬರಿ.

ಅಡಾವುಡಿ ಬಸವಣ್ಣವ ಬಾಲ್ಯ, ಪುಟ್ಟತಂಗಿ (ಅಪ್ರಕಟಿತ ಕಾಂದಬರಿ).

ಕಳಸಾಪುರದ ಹುಡುಗರು :– ಮತಿಘಟ್ಟ ಕೃಷ್ಣಮೂರ್ತಿಯವರು ಚಿಕ್ಕಮಗಳೂರಿನ ಹೈಸ್ಕೂಲ್ ಓದಿದ್ದು ಆಗ ಬಸ್ಸಿನ ಸೌಲಭ್ಯವೂ ಇರಲಿಲ್ಲ. ಹಾಗಾಗಿ ಚಿಕ್ಕಮಗಳೂರಿನಿಂದ ಮತಿಘಟ್ಟಕ್ಕೆ ಬರಬೇಕಾದರೆ ಕಳಸಾಪುರದ ಮೇಲೆ ನಡೆದು ಬರಬೇಕಾಗಿತ್ತು. ಚೆನ್ನಮ್ಮನವರ ತೌರುಮನೆಯಲ್ಲಿ ಒಂದು ದಿನವಿದ್ದು ನಂತರ ಊರಿಗೆ ಹೊರಡುತ್ತಿದ್ದರು. ಮತಿಘಟ್ಟ ಕೃಷ್ಣಮೂರ್ತಿ ಹಳ್ಳಿಯ ಜೀವನ, ಹಳ್ಳಿ ಮಕ್ಕಳ ಭಾವನೆಗಳ ಬಗ್ಗೆ ಅವರಿಗೆ ಸ್ಪಷ್ಟ ಅರಿವಿತ್ತು. ದೊಡ್ಡವರಾದ ಮೇಲೆ ಹಳ್ಳಿಯ ಮಕ್ಕಳ ಅಭಿವೃದ್ಧಿಗಾಗಿ ಮಕ್ಕಳಿಗಾಗಿಯೇ ಮಕ್ಕಳನ್ನೇ ಕೇಂದ್ರವಾಗಿಟ್ಟುಕೊಂಡು ಕಾದಂಬರಿ ಬರೆಯಲು ತೀರ್ಮಾನಿಸಿದರು. ಈ ಕಾದಂಬರಿ ಬರೆಯುವ ಮೊದಲು ಅನೇಕ ಸ್ನೇಹಿತರಿಗೆ, ಮಕ್ಕಳಿಗೆ ಕಥೆ ಹೇಳಿ ನಂತರ ಬರೆದದ್ದು.

೧೯೫೨–೫೩ ಅವಧಿಯಲ್ಲಿ ಪಠ್ಯಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರು ಶ್ರೀ ಕೆ.ವಿ. ಪುಟ್ಟಪ್ಪನವರಾಗಿದ್ದರು. ಕೊನೆಯ ಸುತ್ತಿಗೆ ಕಳಸಾಪುರದ ಹುಡುಗರು ಸೇರಿ ೫(ಐದು) ಪುಸ್ತಕಗಳಿದ್ದವು. ಶ್ರೀ ಪುಟ್ಟಪ್ಪನವರು ಕಳಸಾಪುರದ ಹುಡುಗರು ಪುಸ್ತಕವನ್ನು ಆರಿಸಿ, ಉಳಿದ ಒಂದು ಪುಸ್ತಕವನ್ನು ಆರಿಸುವಂತೆ ಸಮಿತಿ ಸದಸ್ಯರಿಗೆ ತಿಳಿಸಿದ್ದರು. ಅಷ್ಟು ಪ್ರಭಾವ ಬೀರಿದ ಮಕ್ಕಳ ಪ್ರಥಮ ಕಾದಂಬರಿ ಇದಾಗಿತ್ತು. ಹೀಗೆ ೧೯೫೨ ರಲ್ಲಿ ៤ನೇ ತರಗತಿಗೆ ನಾನ್‌ಡೀಟೇಲ್ ಆಗಿ ಆಯ್ಕೆಯಾಗಿ ಎಲ್ಲರಿಗೂ ಚಿರಪರಿಚಿತವಾಯಿತು.

ಈ ಕಾದಂಬರಿಯಲ್ಲಿ ಒಂದು ಶತಮಾನದ ಹಳೆಯ ಮೈಸೂರು ಪ್ರಾಂತದ ಹಳ್ಳಿಗಳ ಜೀವನದ ಚಿತ್ರವಿದೆ. ಕಳಸಾಪುರವನ್ನು ನಿಮಿತ್ತವಾಗಿಟ್ಟುಕೊಂಡು ಹಳ್ಳಿಗಳ ಏಳು – ಬೀಳುಗಳನ್ನು ಚಿತ್ರಿಸಲಾಗಿದೆ. ಆ ಊರಿನ ಹುಡುಗರಲ್ಲಿ ಧೈರ್ಯ –

ಸಾಹಸ, ಮಕ್ಕಳಿಗೆ ಸಹಜವಾದ ತುಂಟತನದ ಚಿತ್ರಣವಿದ್ದು ಹಿರಿಯರ ಮಾರ್ಗದರ್ಶನವಿಲ್ಲದ ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ದೊರೆತಾಗ ಮಕ್ಕಳು ಪ್ರಗತಿ ಸಾಧಿಸಿದ ಬಗ್ಗೆ ಮನಮುಟ್ಟುವಂತೆ ವಿವರಿಸಿದ್ದಾರೆ.

ಶ್ರೀ ಕಟ್ಟೆ ರಾಮಚಂದ್ರ ಅವರು ಈ ಕಾದಂಬರಿಯನ್ನು ನಾಟಕರೂಪಕ್ಕೆ ತಂದು, ನಿರ್ದೇಶಿಸಿ, ಬಾಲಭವನದಲ್ಲಿ ನಾಟಕವನ್ನು ಏರ್ಪಡಿಸಿದ್ದರು. ಟಿಕೇಟ್ ಇಟ್ಟಿದ್ದರೂ ಸತತ ೨೧ ಪ್ರದರ್ಶನಗಳನ್ನು ಕಂಡ ನಾಟಕ ಇದಾಗಿತ್ತು. ಅದು ಹೌಸ್‌ಫುಲ್ ಆಗಿ.ಇದು ಸಹ ಅಂದಿಗೆ ಒಂದು ದಾಖಲೆಯೇ ಆಗಿತ್ತು.

ಮತಿಘಟ್ಟ ಕೃಷ್ಣಮೂರ್ತಿ ಅವರ ಎರಡನೇ ಮಗಳು ಶ್ರೀಮತಿ ಉಷಾ ನಾರಾಯಣಸ್ವಾಮಿ ಬನವಾಸಿ ಅವರ ಎರಡನೇ ಮಗ ಶ್ರೀ ಪ್ರಕೃತಿ ಎಸ್ ಬನವಾಸಿ ಹಾಗೂ ಸೊಸೆ ಯೋಗಿತಮಧು ಬನವಾಸಿ ಈ ಪುಸ್ತಕವನ್ನು ಇಂಗ್ಲೀಷಿಗೆ ಭಾಷಾಂತರಿಸಿ ಪ್ರಕಟಿಸಿ ಅಜ್ಜ ಮತಿಘಟ್ಟ ಕೃಷ್ಣಮೂರ್ತಿಯವರ ೯೩ನೇ ಹುಟ್ಟುಹಬ್ಬಕ್ಕೆ ಉಡುಗೊರೆಯಾಗಿತ್ತರು.

ಆಗಿನ ರಾಜ್ಯಪಾಲರಾಗಿದ್ದ ಶ್ರೀ ಚತುರ್ವೇದಿಯವರು ಪುಸ್ತಕವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಭಾಷಣಮಾಡುತ್ತಾ "ಈ ಪುಸ್ತಕ ಓದಿದಾಗ ನನ್ನ ಬಾಲ್ಯದ ತುಂಟತನಗಳು ನೆನಪಾಗುತ್ತದೆ ಎಂದು ಹೇಳಿ ಅವರ ಬಾಲ್ಯದ ಅನುಭವಗಳನ್ನು ಹೇಳಿದರು ಹಾಗೂ ಕಳಸಾಪುರ ಎಲ್ಲಿದೆ"? ಎಂದು ಕೇಳಿದ್ದರು.

ಈ ಪುಸ್ತಕ ೯ ಮುದ್ರಣಗಳನ್ನು ಕಂಡ ಹೆಗ್ಗಳಿಕೆಗೆ ಪಾತ್ರವಾಗಿದೆ.

**ನಾಟಕಕಾರ**

ಮತಿಘಟ್ಟ ಕೃಷ್ಣಮೂರ್ತಿಯವರು 'ಗಂಡನಪೂಜೆ', ಹೊಂಬಾಳೆ, 'ಹೊಸಹಳ್ಳಿ' ಭರತಪ್ಪನ ಸೊಂಟಕ್ಕೆ ಗಂಟೆ ನಾಟಕಗಳನ್ನು ಹಾಗೂ ರೇಡಿಯೋ ರಂಗನಾಟಕಗಳನ್ನು ರಚಿಸಿದ್ದಾರೆ. ಜಾನಪದ ಕಥನಗೀತೆಗಳನ್ನು ನೃತ್ಯರೂಪಕ್ಕೆ ಅಳವಡಿಸಿ ನಿರ್ದೇಶನವನ್ನು ಮಾಡಿದ್ದಾರೆ. 'ಹೆಣ್ಣು ಮನೆಗೆ ಕಣ್ಣು' ಎಂಬ ಸಾಮಾಜಿಕ ನೃತ್ಯ ರೂಪಕವನ್ನು ಜನಪದ ಧಾಟಿಯಲ್ಲಿ ರಚಿಸಿದ್ದಾರೆ.

೧೯೫೭ನೇ ಇಸವಿಯಲ್ಲಿ ೨ ವರ್ಷ ಹಾಸನದಲ್ಲಿ ಮನೆ ಮಾಡಿದ್ದರು ಕೃಷ್ಣಮೂರ್ತಿ ಆಗ ಶ್ರೀಯುತ ಬಿ.ಎಂ.ಶ್ರೀ ಅವರ ಸಹೋದರಿ ಶ್ರೀಮತಿ ನಂಜಮ್ಮನವರು ಮಹಿಳಾ ಸಮಾಜದ ಅಧ್ಯಕ್ಷರಾಗಿದ್ದರು. ಹಾಸನದಲ್ಲಿ ಒಂದು ನಾಟಕ ಸ್ಪರ್ಧೆ ಏರ್ಪಡಿಸಿದ್ದರು. ಆಗ ಶ್ರೀಮತಿ ನಂಜಮ್ಮನವರು ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಮಹಿಳಾ ಸಮಾಜದ ವತಿಯಿಂದ ಸ್ಪರ್ಧೆಗೆ ಒಂದು ನಾಟಕವನ್ನು ಬರೆದುಕೊಡಬೇಕೆಂದೂ, ಹೆಣ್ಣು ಮಕ್ಕಳಿಂದಲೇ ಆಡಿಸಬೇಕೆಂದೂ ಕೇಳಿಕೊಂಡರು.

ಸ್ಪರ್ಧೆಗೆ ಕೇವಲ ಮೂರು ದಿನವಿದೆ. ಪಾತ್ರವಹಿಸಲು ದೊಡ್ಡ ಮಗಳ ಸ್ನೇಹಿತರು, ಅಕ್ಕ ಪಕ್ಕದ ಮನೆಯಲ್ಲಿದ್ದ ಇಬ್ಬರು ಹೆಣ್ಣು ಮಕ್ಕಳು ಒಪ್ಪಿಕೊಂಡರು. ಆದರೆ ನಾಟಕ ಬರೆಯಲು ಅಭ್ಯಾಸ ಮಾಡಲು ಕಾಲಾವಕಾಶ ಬಹಳ ಕಡಿಮೆ. ಮತಿಘಟ್ಟ ಕೃಷ್ಣಮೂರ್ತಿ ಇದನ್ನು ಸವಾಲಾಗಿ ಸ್ವೀಕರಿಸಿದರು. ಹಗಲು ರಾತ್ರಿ ಕುಳಿತು ನಾಟಕ ಬರೆದರು. ಬರೆದ ಕರಡು ಪ್ರತಿಯನ್ನು ಹಿಡಿದು ಪಾತ್ರಗಳ ಮಾತನ್ನು ಅಭ್ಯಾಸ ಮಾಡಿದರು ಉಳಿದವರು. ನಾಟಕದ ದಿನ ಎಲ್ಲರಿಗೂ ಉತ್ಸಾಹವೋ ಉತ್ಸಾಹ. ಬೇರೆಯವರು ಬಣ್ಣ ಹಚ್ಚಿದ್ದನ್ನು ಕಂಡಿದ್ದರೇ ವಿನಃ ತಾವು ಬಣ್ಣ ಹಚ್ಚಿದ್ದು ಇದೇ ಮೊದಲು. ಸಂಜೆ ಆಯಿತು ಎಲ್ಲರೂ ಮೇಕಪ್ ಮಾಡಿಕೊಳ್ಳಲು ಸಾಲಾಗಿ ನಿಂತರು, ಮೇಕಪ್ ಮ್ಯಾನ್ ಶ್ರೀ ಸುಬ್ಬಣ್ಣ ತುಂಬಾ ಪ್ರಸಿದ್ಧರಾದವರು ಅವರು ಪಟ್ಟಣದಿಂದ ಬಂದ ಇಬ್ಬರು ಪಾತ್ರಧಾರಿಗಳನ್ನು ಬಿಟ್ಟು ಉಳಿದವರಿಗೆ ತೆಳು ಕಪ್ಪು ಬಣ್ಣ ಬಳಿದರು. ಎಲ್ಲರೂ ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ದೂರು ಹೇಳಿದರು. ಸುಬ್ಬಣ್ಣನವರು ಸಹಜವಾಗಿರಬೇಕೆಂದು ಹೇಳಿ ಬದಲಿಸಲಿಲ್ಲ. ವಿಧಿ ಇಲ್ಲದೆ ಪಾತ್ರಧಾರಿಗಳು ರಂಗದ ಮೇಲೆ ಅಭಿನಯಿಸಿದರು. ಸ್ಪರ್ಧೆಯಲ್ಲಿ ಮೊದಲನೇ ಬಹುಮಾನ ಪಡೆದ ನಾಟಕ ಅದಾಗಿತ್ತು. ಅವೇ "ಮಂಗಳವೀಡು" ನಂತರ ವಿಸ್ತರಿಸಿ ಬರೆದು ಹೊಸಹಳ್ಳಿ ಎಂದು ಹೆಸರಿಟ್ಟರು ಮತಿಘಟ್ಟ ಕೃಷ್ಣಮೂರ್ತಿ.

ಗಾಂಧಿತತ್ವವನ್ನು ಅನುಸರಿಸಿ, ಹಳ್ಳಿಯ ಉದ್ಧಾರಕ್ಕಾಗಿ ಹಳ್ಳಿಗೆ ಪಟ್ಟಣದಿಂದ ಬಂದ ವಿದ್ಯಾವಂತ ದಂಪತಿಗಳು "ತಗ್ಲೆ ಹಳ್ಳಿ"ಯನ್ನು ಆಯ್ದುಕೊಂಡು ಅಲ್ಲಿಯ ಜನರಿಗೆ ಸಾಕ್ಷರತೆ, ಮಹಿಳಾ ಶಿಕ್ಷಣ, ವಯಸ್ಕರ ಶಿಕ್ಷಣ, ನೈರ್ಮಲ್ಯ, ಸ್ವಯಂ ಆಡಳಿತ, ಸಹಕಾರಬಾಳ್ವೆ ಇವುಗಳ ಬಗ್ಗೆ ತಿಳುವಳಿಕೆಕೊಟ್ಟು, ಆ ಕಾರ್ಯಕ್ಕೆ ಬಂದ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಹೊಸಹಳ್ಳಿಯನ್ನಾಗಿ ಮಾಡುವ ಕಥೆ. ಕಥೆಗೆ ಹೊಂದುವ ಹಾಡುಗಳು – ಗ್ರಾಮ್ಯ ಭಾಷೆ ನಾಟಕಕ್ಕೆ ಕಳೆ ತಂದಿತ್ತು.

ಈ ನಾಟಕ ಬೆಂಗಳೂರಿನಲ್ಲಿಯೂ ಹಲವು ಪ್ರದರ್ಶನಗಳನ್ನು ಕಂಡಿತು. ಕೇಂದ್ರ ಸರ್ಕಾರದಿಂದ ಬಹುಮಾನವೂ ಬಂದಿತು. ಸಿನಿಮಾ ಮಾಡುವ ಉದ್ದೇಶದಿಂದ ಕೆಲವರು ಬಂದಿದ್ದರು. ಬಂಗಾರದ ಮನುಷ್ಯ, ಮಣ್ಣಿನ ಮಗ, ಮಣ್ಣಿನ ಮಗಳು, ಇದೇ ವಸ್ತುವನ್ನು ಹೊಂದಿದ್ದು ನಿರ್ಮಾಣದ ಹಂತದಲ್ಲಿದೆ ಎಂದು ತಿಳಿದು ಮಾತು ಅಷ್ಟಕ್ಕೆ ನಿಂತಿತು.

ಕಲ್ಯಾಣಿ ಮತ್ತು ಇತರ ನಾಟಕಗಳು :– ಮತಿಘಟ್ಟ ಕೃಷ್ಣಮೂರ್ತಿಯವರು ಅನೇಕ ರೇಡಿಯೋ ನಾಟಕಗಳನ್ನು ರಚಿಸಿ ಪ್ರಸ್ತುತ ಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಕಲ್ಯಾಣಿ ಇದರಲ್ಲಿ ಮೂರು ನಾಟಕಗಳಿವೆ. ಬೆಳವಡಿ ಮಲ್ಲಮ್ಮ, ಚಾಂದಬೀಬಿ ಎಂಬ

ನಾಟಕಗಳು ರಾಷ್ಟ್ರಪ್ರೇಮವನ್ನು ಎತ್ತಿ ಹಿಡಿದರೆ, ಕಲ್ಯಾಣಿ ಸಳನ ಹುಟ್ಟನ್ನು ತಿಳಿಸುವ ಐತಿಹ್ಯ ನಾಟಕವಾಗಿದೆ.

ಹೊಯ್ಸಳರ ಮೂಲ ಪುರುಷ ಸಳನ ಹುಟ್ಟನ್ನು ಕುರಿತ ನಾಟಕ ಕಲ್ಯಾಣಿ ಹಳೇಬೀಡಿಗೆ ಸಂಬಂಧಪಟ್ಟದ್ದು ಅಲ್ಲಿಯ ಒಂದು ಕೊಳದಲ್ಲಿ 'ಯಾರು ಬಿದ್ದರೂ ಮುಳುಗುವುದಿಲ್ಲ' ಎಂಬ ಪ್ರತೀತಿ ಇದೆ. ಕಾರಣ ಹಿಂದೆ ಒಬ್ಬರಾಜ ದೇವಕನ್ಯೆಯನ್ನು ಮದುವೆಯಾದ. ಮಗುವಾದ ತಕ್ಷಣ ದೇವಕನ್ಯೆ ದೇವಲೋಕಕ್ಕೆ ಹೊರಡುತ್ತಾಳೆ. ನಿರಾಶೆಗೊಂಡ ರಾಜ ಹತ್ತಿರದಲ್ಲಿದ್ದ ಕಲ್ಯಾಣಿಗೆ ಮಗುವನ್ನು ಎಸೆಯುತ್ತಾನೆ. ಅದನ್ನು ಕಂಡ ಆ ದೇವಕನ್ಯೆ ಮಗುವನ್ನು ಉಳಿಸಲು 'ಈ ಕಲ್ಯಾಣಿಯಲ್ಲಿ ಯಾರು ಮುಳುಗದಿರಲಿ' ಎಂದು ವರವನ್ನು ಕೊಡುತ್ತಾಳೆ. ಆ ಮಗುವೇ ಮುಂದೇ ಹೊಯ್ಸಳರ ವಂಶಕ್ಕೆ ಮೂಲ ಪುರುಷನಾದ ಸಳ. 'ಜೇನುಗೂಡು' ಎಂಬ ನಾಲ್ಕು ಮಕ್ಕಳ ನಾಟಕ ಹಸ್ತಪ್ರತಿಯಲ್ಲಿದೆ.

**ಭರತಪ್ಪನ ಸೊಂಟಕ್ಕೆ ಗಂಟೆ:-**

ಶ್ರೀ ರಾಮ ಕಾಡಿಗೆ ಹೋದ ಸನ್ನಿವೇಶ ಭರತ ಶ್ರೀರಾಮನನ್ನು ಕರೆತರಲು ಕಾಡಿಗೆ ಹೋಗುತ್ತಾನೆ. ರಾಮನ ಪಾದುಕೆಗಳನ್ನು ತಂದು ಪ್ರತಿನಿಧಿಯಾಗಿ ರಾಜ್ಯಭಾರಮಾಡಲು ಆರಂಭಿಸುತ್ತಾನೆ. ಇದು ಸರ್ವವಿಧಿತವಾದುದ್ದು. ಪಾದುಕೆ ಕೊಡುವಾಗ ರಾಮ 'ಜನಾಭಿಪ್ರಾಯದಂತೆ ರಾಜ್ಯವಾಳು' ಎಂದು ಹೇಳುತ್ತಾನೆ. ಅದನ್ನು ಅನುಸರಿಸಿ ರಾಜ್ಯವಾಳುತ್ತಾನೆ ಭರತ. ಆದರೆ ಅತೀ ಆಸೆಯ ಅಧಿಕಾರಿಗಳು ಭರತನ ಒಳ್ಳೆಯತನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ ಬಳಸಿಕೊಳ್ಳುತ್ತಾರೆ. ಭರತನಿಗೆ ಗೌರವ ಕೊಡದೆ ತಮ್ಮ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಾರೆ. ರಾಜ್ಯದಲ್ಲಿ ಚಿನ್ನದ ಗೂಟ ಮಾಡಿಸಿದ ಜನರೇ ಹೆಚ್ಚಾಗಿರುತ್ತಾರೆ. ಭರತನ ಬರುವಿಕೆಯನ್ನು ತಿಳಿಯಲು ಅವನ ಸೊಂಟಕ್ಕೆ ಗಂಟೆ ಕಟ್ಟುತ್ತಾರೆ.

ರಾಮ ಹಿಂತಿರುಗಿ ಬಂದು ಭರತನ ಮುಗ್ಧತೆಯನ್ನು ಅಧಿಕಾರಿಗಳ ಆಡಳಿತವನ್ನು ಕಂಡು ಉಪಾಯದಿಂದ ಪರಿಸ್ಥಿತಿಯನ್ನು ಸುಧಾರಿಸುತ್ತಾನೆ. ಸಭೆ ಸೇರಿಸಿ ಲಂಕೆಯಿಂದ ನಿಕುಂಬಳ ಎಂಬ ಬೀಜ ತಂದಿರುವುದಾಗಿ ಎಲ್ಲರಿಗೂ ಹಂಚಿ ತಾನು ಅರಮನೆಯಲ್ಲಿ ಬೀಜ ಹಾಕುವುದಾಗಿ ಕಾಯಿಬಿಡದವರು ಅರಮನೆಯಲ್ಲಿ ಬಿಟ್ಟ ಕಾಯಿ ತೂಕದ ಚಿನ್ನ ಕೊಡಬೇಕೆಂದು ಇಷ್ಟುದಿನ ಕೊಡದ ತೆರಿಗೆಗೆ ಸರಿತೂಗಿಸುವುದಾಗಿ ಹೇಳುತ್ತಾನೆ. ಎಲ್ಲರೂ ಇಷ್ಟೆ ತಾನೆ ಎಂದು ತಾತ್ಸರದಿಂದ ಒಪ್ಪಿ ಬೀಜ ಬಿತ್ತುತ್ತಾರೆ. ನಿಷ್ಠಾವಂತರ ಮನೆಯಲ್ಲಿ ಕಾಯಿಬಿಟ್ಟು ದುಷ್ಟರ ಮೋಸಗಾರರ ಮನೆಯಲ್ಲಿ ಕಾಯಿ ಬಿಡುವುದಿಲ್ಲ ತಮ್ಮ ಮನೆಯಲ್ಲಿದ್ದ ಚಿನ್ನವನ್ನೆಲ್ಲಾ ಹಾಕಿದರೂ ಅರಮನೆ ಕಾಯಿಗೆ ಸಮನಾಗಿರುವುದಿಲ್ಲ. ಅವರು ತಮ್ಮ ಹೆಂಡತಿಯ ತಾಳಿಯನ್ನು ಹಾಕಿದಾಗ ಸಮನಾಗುತ್ತದೆ. ಈ ರೀತಿ ಮತ್ತೆ ಖಾಲಿಯಾದ ಭಂಡಾರ ತುಂಬುತ್ತದೆ. ಜನರಿಗೆ ಬುದ್ಧಿ ಬರುತ್ತದೆ.

ತೆಲುಗು ಜಾನಪದ ಕಥೆಯ ಒಂದು ಎಳೆಯಿಂದ ಸ್ಫೂರ್ತಿ ಪಡೆದು ಬರೆದ ನಾಟಕ. ರಾಜಕೀಯ ವಿಡಂಬನೆಯಿಂದ ಕೂಡಿದ ನಾಟಕ. ಒಳ್ಳೆಯ ತನವಿದ್ದೂ, ವ್ಯವಹಾರ ಜ್ಞಾನ, ಆಡಳಿತ ಜ್ಞಾನ ಮತ್ತು ದಕ್ಷತೆ ಇಲ್ಲದಿದ್ದರೆ, ದೇಶ ದುಷ್ಟರ ಕೈಗೆ ಸಿಕ್ಕಿ ನಾಶವಾಗುವ ಬಗೆಯನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಕಲಾಗಂಗೋತ್ರಿಯವರು ಆಗ ಯಶಸ್ವಿಯಾಗಿ ರಂಗದ ಮೇಲೆ ಅಭಿನಯಿಸಿದ್ದರು. ಈಗಲೂ ಆಂಧ್ರಪ್ರದೇಶದ ಕೆಲವು ಪಂಗಡದ ಒಕ್ಕಲಿಗರು. ತಾಳಿ ಕಿತ್ತಕಾಯಿ ಎಂದು ಬೂದಗುಂಬಳವನ್ನು ಉಪಯೋಗಿಸುವುದಿಲ್ಲವೆಂದು ಅನುಭವದಿಂದ ತಿಳಿದು ಬಂದಿದೆ. (ಮ.ಕೃ. ಹೇಳಿದ್ದು)

ಹೊನಬಿಲ್ಲು – ಚನಬಿಲ್ಲ – ಸಕ್ಕರಾಯ ಪಟ್ಟಣದ ಐತಿಹ್ಯ. ಅತಿವೃಷ್ಟಿಯಾದಾಗ ತಗ್ಗುಪ್ರದೇಶದಲ್ಲಿದ ಪಟ್ಟಣ ಮುಳುಗುವ ಹಂತದಲ್ಲಿದ್ದಾಗ, ಕೆರೆ ಕಾಯುತ್ತಿದ್ದ ಸಹೋದರರು, ಗಂಗೆಗೆ ರಾಜನಿಗೆ ತಿಳಿಸಿ, ಜನರನ್ನು ಬೇರೆಡೆ ಹೋಗಲು ಏರ್ಪಾಡುಮಾಡಿ ಬರುವುದಾಗಿ, ಅಲ್ಲಿಯವರೆವಿಗೂ ಮುಂದಕ್ಕೆ ಬರಬಾರದೆಂದು ತಿಳಿಸಿ, ಊರಿಗೆ ಬರುತ್ತಾರೆ. ಮತ್ತೆ ಹಿಂದಕ್ಕೆ ಹೋದರೆ ನಗರ ಮುಳುಗಡೆಯಾಗುವುದು ಖಂಡಿತವೆಂದು ತಿಳಿದು ತಮ್ಮ ಪ್ರಾಣವನ್ನು ಅರ್ಪಿಸಿದ ಸಹೋದರರ ಕಥೆ,

ಸರ್ಜಪ್ಪನಾಯಕ:– ತಂದೆಯ ಶತ್ರುಗಳ ಸೆರೆಯಲ್ಲಿದ್ದಾಗ, ಉಪಾಯದಿಂದ, ಶೌರ್ಯದಿಂದ ಹೋರಾಡಿ ಬಿಡಿಸಿ ತಂದ ತರೀಕೆರೆ ಪಾಳೆಗಾರ ಸಾರ್ಜಪ್ಪನಾಯಕನ ಕಥೆ.

ಕರೆಗೆಹಾರ:– ಕಟ್ಟಿಸಿದ ಕೆರೆಗೆ ನೀರು ಬರದಿದ್ದಾಗ ಊರಗೌಡನ ಕಿರಿಯ ಸೊಸೆ ಕೆರೆಗೆ ಬಲಿಯಾಗುವ ಜನಪದ ಕಥೆ.

ಈ ಮೂರು ನೃತ್ಯರೂಪಕಗಳನ್ನು ರೇಡಿಯೋ ರಂಗ ಕಾರ್ಯಕ್ರಮಕ್ಕಾಗಿ ರಚಿಸಿದ ನಾಟಕಗಳು.

ಹೆಣ್ಣುಮನೆಗೆ ಕಣ್ಣು :– ಮಹಿಳೆಯನ್ನೆ ಕೇಂದ್ರವಾಗಿಟ್ಟುಕೊಂಡು ಬರೆದ ನೃತ್ಯರೂಪಕ.

ಈ ಎಲ್ಲಾ ರೂಪಕಗಳು ಸ್ಪರ್ಧೆಯಾಗಿ ರಚಿಸಲ್ಪಟ್ಟು ಪ್ರದರ್ಶಿಸಿ ಪ್ರಥಮ ಬಹುಮಾನವನ್ನು ಪಡೆದ ನಾಟಕಗಳಾಗಿವೆ. ರಚನೆ ಹಾಗೂ ನಿರ್ದೇಶನ ಮತಿಘಟ್ಟ ಕೃಷ್ಣಮೂರ್ತಿಯವರದ್ದು.

ಕರ್ನಾಟಕ ಸಂಸ್ಕೃತಿ ಇಲಾಖೆ ಸಹಯೋಗದಿಂದ ಹಾಸನ ಜಿಲ್ಲೆಯ ಬೇರೆ–ಬೇರೆ ಊರುಗಳಲ್ಲಿ ಮ.ಕೃ. ಅವರ ತಂಡದವರಿಂದ ಪ್ರದರ್ಶಿತವಾಗಿದೆ.

ಹೊಂಬಾಳೆ: ಹಳ್ಳಿಯ ಪ್ರೇಮಿಗಳನ್ನು ಕುರಿತ ನಾಟಕ.

ಗಂಡನಪೂಜೆ: ಬಡತನದಲ್ಲಿರುವ ಒಂದು ಬ್ರಾಹ್ಮಣ ಕುಟುಂಬ ಹಬ್ಬ ಮಾಡಲಾರದೆ ತಳಮಳಿಸುವ ಸಂಪ್ರದಾಯಬದ್ಧವಾದ ನಾಟಕ. ಹಬ್ಬ ಎಂದರೆ ಆಡಂಬರದ ಆಚರಣೆಯಲ್ಲ ಭಕ್ತಿ ಪ್ರಧಾನವಾದುದೆಂದು ತಿಳಿಸುವ ವಿಷಯ ಕೇಂದ್ರವಾದದ್ದು.

ಜನಪದ ಸಾಹಿತ್ಯ ಸಂಗ್ರಾಹಕ : – ಕೃಷ್ಣಮೂರ್ತಿಯವರು ಅತ್ಯಂತ ಮಹತ್ವದ ಸಾಧನೆ ಇರುವುದು ಜಾನಪದ ಕ್ಷೇತ್ರದಲ್ಲಿ. ಕಳೆದ ಎಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜಾನಪದ (ಸಾಹಿತ್ಯವನ್ನು) ಗೀತೆಗಳನ್ನು ಲಾವಣಿಗಳನ್ನು ಕಥೆಗಳನ್ನು ಸಂಗ್ರಹಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಾದ್ಯಂತ ಸಂಚರಿಸಿ ಸಂಗ್ರಹಿಸಿರುವ ಸಾಮಾಗ್ರಿಗಳನ್ನು ಗಮನಿಸಿದಾಗ ಅವರ ಜನಪದ ನಿಲುವು ಹೊಂದಿರುವುದು ಕಾಣಬರುತ್ತದೆ. ಸಾಮಾನ್ಯರಲ್ಲಿ ಸಾಮಾನ್ಯರಾದ ಜನಪದರೊಡನೆ ಬೆರೆತು ಕಲೆತು ಅವರಲ್ಲಿರುವ ಜಾನಪದ ಸಂಪತ್ತನ್ನು ನಶಿಸದಂತೆ ಹಿಡಿದಿಟ್ಟಿರುವುದು ಮ.ಕೃ. ಅವರ ಸಂಸ್ಕೃತಿಯ ಕಾಳಜಿಯನ್ನು ತೋರಿಸುತ್ತದೆ. ಈ ಕಾರಣದಿಂದ ಜಾನಪದ ವಿದ್ವಾಂಸರಲ್ಲಿ ಮ.ಕೃ ಅವರಿಗೆ ಮೊದಲನೆ ಸ್ಥಾನ ದೊರೆಯುತ್ತದೆ.

ಪ್ರಕಟವಾಗಿರುವ ಜನಪದ ಸಾಹಿತ್ಯ ಕೃತಿಗಳೆಂದರೆ, ನಾಡಪದಗಳು ನಮ್ಮ ಹಳ್ಳಿಯ ಹಾಡುಗಳು, ಏಳುಕೊಳ್ಳದ ಎಲ್ಲಮ್ಮ ಮತ್ತು ಕನ್ನಡ ಸಾಹಿತ್ಯ ಭಂಡಾರ ಸಂಪುಟ.

೧. ಗೀತೆಗಳು (ಸಂಪುಟ–೧ ೧೦೦೦ ಪುಟ ಮೀರಿದ್ದು)
೨. ಗೃಹಿಣಿಗೀತೆಗಳು–(ಸಂಪುಟ–೨ ೧೦೦೦ ಪುಟ ಮೀರಿದ್ದು)
೩. ಹೊನ್ನ ಹೊತ್ತಿಗೆ
೪. ಹಾಸನ ಜಿಲ್ಲೆ ಕೋಲಾಟದ ಪದಗಳು
೫. ಕಿರುಲಾವಣಿಗಳು

ಮ.ಕೃ ಅವರು ಸಂಗ್ರಹಿಸಿದ್ದ ಕೆಲವು ಜನಪದಗೀತೆಗಳು ಅವರ ಕಾಲೇಜು ದಿನಗಳಲ್ಲಿಯೇ ಪ್ರಬುದ್ಧ ಕರ್ನಾಟಕ, ಜೀವನ, ವಿಶ್ವಕರ್ನಾಟಕ ಪತ್ರಿಕೆಗಳಲ್ಲಿ ಅಚ್ಚಾಗಿದ್ದವು.

ನಾಡಪದಗಳು ೧೯೪೦–೧೯೪೧ರಲ್ಲಿ ಕೃಷ್ಣಮೂರ್ತಿಯವರು ಸಂಗ್ರಹಿಸಿದ್ದ ಕೆಲವು ಜನಪದಗೀತೆಗಳು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿತ್ತು. ಆಗಿನ ಮಹಾರಾಜರಾದ ಶ್ರೀಜಯಚಾಮರಾಜರು ಅದನ್ನು ಓದಿ ಸಂತೋಷಪಟ್ಟು ಹಾಸನದ ಜಿಲ್ಲಾಧಿಕಾರಿಗಳಿಗೆ ಹೇಳಿದರು. ಜೈಲಿನಿಂದ ಬಿಡುಗಡೆಯಾಗಿ ಬಂದ ಕೃಷ್ಣಮೂರ್ತಿಗಳು ತಾವು ಹಾಗೂ ಅಣ್ಣ ಮುತ್ತುರಾಮಸ್ವಾಮಿಗಳು ಸಂಗ್ರಹಿಸಿದ ಹಾಡುಗಳನ್ನು ಒಟ್ಟುಗೂಡಿಸಿ ಇಂಡಿಯನ್ ಇಂಕ್‌ನಲ್ಲಿ ಬರೆದರು. ದೊಡ್ಡ ಅಣ್ಣ ಎಲ್.ಗುಂಡಪ್ಪನವರು ಗೀತೆಗಳಿಗೆ ಸಂಬಂಧ ಪಟ್ಟ ಪೀಠಿಕೆಗಳನ್ನು ಬರೆದರು. ಆಚಾರ್ಯ ಬಿ.ಎಂ. ಶ್ರೀ ಅವರಿಂದ ಮುನ್ನುಡಿ ಬರೆಸಿದರು. ಮ.ಕೃ. ಅವರು ಅದನ್ನು ಮಹಾರಾಜರಿಗೆ ತೋರಿಸಿದರು. ಇದನ್ನು ಓದಿ ಮಹಾರಾಜರು (ಐನೂರು ರೂಪಾಯಿ) ೫೦೦ರೂ.ಗಳನ್ನು ಬಹುಮಾನವನ್ನಾಗಿ ಕೊಟ್ಟರು. ನಾಲ್ಕು ಆಣೆಗೆ ಒಂದು ತೊಲ ಬೆಳ್ಳಿ ಬರುತ್ತಿದ್ದ ಕಾಲ) ಆ ಬಹುಮಾನವನ್ನು

"ನಾಡಪದ"ಗಳ ಪ್ರಕಟಣೆಗಾಗಿ ಕೊಟ್ಟರು. ಮ.ಕೃ. ನಂತರ ೧೯೭೪ರಲ್ಲಿ ಪ್ರಕಟಿಸಿದರು. ಮುನ್ನುಡಿಯಲ್ಲಿ "ಇದುವರೆವಿಗೂ ನಾನು ನೋಡಿರುವ ಸಂಗ್ರಹಗಳಲೆಲ್ಲಾ ಈಗಿನ ಸಂಗ್ರಹವೇ ಸರ್ವೋತ್ತಮವಾದದ್ದು ಮತ್ತು ಅತ್ಯಂತ ಸ್ವಾರಸ್ಯವಾದದ್ದು. ಇದು ಸಂಗ್ರಹವಾಗಿ ಬಂದಿರುವುದು ಪ್ರಸಿದ್ಧ ಹೊಯ್ಸಳ ರಾಜಧಾನಿ ದೋರಸಮುದ್ರ (ಹಳೆಯಬೀಡು) ಪ್ರಾಂತ್ಯದಿಂದ. ಇದರಲ್ಲಿ ಕೆಲವು ಚಾರಿತ್ರಿಕ ಲಾವಣಿ (ಲಕ್ಕಣ್ಣ ಈರಣ್ಣ, ಶ್ರೀರಂಗಪಟ್ಟಣದ ಪಥನ ಕುರಿತದ್ದು) ಗಳೂ ಅನೇಕ ಹೆಂಗಸರ ಹಾಡುಗಳು ಎದೆ ಕರಗಿಸುವ ಕರುಣ ಕಥೆಗಳೂ ಧಾರ್ಮಿಕ ಭಾವಗೀತೆಗಳೂ ಇವೆ. ಈ ಹಾಡುಗಳ ಸಂಗ್ರಹಕಾರರನ್ನು, ಸಂಪಾದಕರನ್ನೂ ಅವರ ಬಹು ಸೊಗಸಾದ ಈ ಕಾರ್ಯಕ್ಕಾಗಿ ಅಭಿನಂದಿಸುತ್ತೇನೆ" ಎನ್ನುತ್ತಾರೆ. ಬಿ.ಎಂ.ಶ್ರೀ ಅವರು.

ಗೀತೆಗಳು

೧. ಕೋಲಾಟದ ಪದಗಳು
೨. ಬೀಸುವ ಪದಗಳು
೩. ಸೋಬಾನೆ ಪದಗಳು
೪. ನಾಲ್ಕು ಹಬ್ಬಗಳು
೫. ಕಥನ ಗೀತೆಗಳು ಎಂಬ ಐದು ಪ್ರಮುಖ ವಿಭಾಗಗಳಿವೆ.
೧. ಪ್ರಾರ್ಥನಾ ಗೀತೆಗಳು
೨. ಪ್ರೇಮ ಗೀತೆಗಳು
೩. ಚಾರಿತ್ರಿಕ ಗೀತೆಗಳು
೪. ಕ್ಷಾಮ-ಸೋಬಾನೆ ಪದಗಳು

ಗೀತೆಗಳು : ಸಂಕೀರ್ಣಗಳೆಂಬ ಉಪವಿಭಾಗಗಳಿವೆ. ಸೋಬಾನೆ ಪದಗಳಲ್ಲಿ ಎರಡು ವಿಭಾಗಗಳಿವೆ. ನಾಲ್ಕು ಹಬ್ಬಗಳು ವಿಭಾಗದಲ್ಲಿ ಬಲೀಂದ್ರನಪೂಜೆ. ಕೊಂತ್ಸಮ್ಮನಪೂಜೆ. ತಿಂಗಳು ಮಾವನ ಪೂಜೆ ಬಸವನ ಅಷ್ಟಮಿ ಮಿಶ್ರಗೀತೆಗಳು ಎಂಬ ವಿಭಾಗಗಳಿವೆ. ಕಥನ ಗೀತೆಗಳಲ್ಲಿ ಪುರಾಣ ವ್ರತಕಥೆಗಳು ರಾಮಯಾಣದ ಕಥೆಗಳು, ಕೃಷ್ಣನ ಬಾಲಲೀಲೆ, ಶಿವಕಥೆಗಳು ಸಾಮಾಜಿಕ ಕಥೆಗಳು ಚಾರಿತ್ರಿಕ ಕಥೆಗಳು ಎಂಬ ಉಪವಿಭಾಗಗಳಿವೆ. ಪ್ರತಿಯೊಂದು ವಿಭಾಗಕ್ಕೂ ವಿವರವಾದ ವಿದ್ವತ್ ಪೂರ್ಣವಾದ, ಉಪಯುಕ್ತವಾದ ಪ್ರಸ್ತಾವನೆಯನ್ನು ಬರೆಯಲಾಗಿದೆ. ಒಟ್ಟಾರೆ ನಾನೂರ ಎಂಟು ಜನಪದ ಗೀತೆಗಳನ್ನು ಇಲ್ಲಿ ಕಾಣಬಹುದಾಗಿದೆ. ಬೆಟಗೇರಿ ಕೃಷ್ಣಶರ್ಮ ಅವರು ಮಹತ್ವದ ಮುನ್ನುಡಿಯನ್ನು ಬರೆದಿದ್ದಾರೆ. ೧೦೦ ಪುಟದ ಈ ಸಂಪುಟ ಗೀತೆಗಳನ್ನು ಶ್ರೀ ಮಾಸ್ತಿ ಅವರಿಗೆ ಅರ್ಪಿಸಿರುವುದು ಅರ್ಥಪೂರ್ಣವಾಗಿದೆ. ಈ

ಕೃತಿಗೆ ಉಪಯುಕ್ತವಾದ ಅರ್ಥಕೋಶವನ್ನು ನೀಡಲಾಗಿದೆ. ಹಾಗೂ ಈ ಕೃತಿಯ ಗೀತೆಗಳಲ್ಲಿ ಬಳಕೆಯಾಗಿರುವ ಪಲ್ಲವಿಗಳನ್ನು ವ್ಯವಸ್ಥಿತವಾಗಿ ಪಟ್ಟಿಮಾಡಲಾಗಿದೆ. ಸೊಗಸಾಗಿ ಸಂಪಾದಿಸಿ, ಪ್ರಕಟಿಸಲಾಗಿದೆ, ಕೊನೆಯಲ್ಲಿ ಜನಪದ ಸಾಹಿತ್ಯ ಮತ್ತು ನಾನು ಎಂಬ ಶೀರ್ಷಿಕೆಯಲ್ಲಿ ಮ.ಕೃ. ಅವರು ಸುಮಾರು ಅರವತ್ತು ವರ್ಷಗಳ ಕಾಲಾವಧಿಯಲ್ಲಿ ತಾವು ಮಾಡಿದ ಸಂಗ್ರಹದ ಅನುಭವವನ್ನು ಸ್ವಾರಸ್ಯಕರವಾಗಿ ದಾಖಲು ಮಾಡಿದ್ದಾರೆ.

ಜನಪದ ಛಂದಸ್ಸನ್ನು ಕುರಿತು ದ್ವಿಪದಿ, ಏಳು, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ, ಅಷ್ಟಪದಿ, ರಗಳೆ, ಸಾಂಗತ್ಯ ಧವಳ ಲಾವಣಿ ಮತ್ತು ದುಂದುಮೆ ಹಾಗೂ ಅಪರೂಪದ ಛಂದಸ್ಸು, ಎಂಬವುಗಳನ್ನು ವಿವರಣೆಯ ಮೂಲಕ ತಿಳಿಸಿದ್ದಾರೆ. ತ್ರಿಪದಿಯ ಹಿರಿಮೆಯನ್ನು ಹೇಳುತ್ತ ತ್ರಿಪದಿ ಛಂದೋರೂಪಗಳಲ್ಲದೆ ಮೂರು ಪಾದಗಳನ್ನುಳ್ಳ ಬೇರೆ ರೀತಿಯ ಪದಗಳು ಜನಪದ ಸಾಹಿತ್ಯದಲ್ಲಿವೆ. ಗ್ರಾಮೀಣರು ಹಾಡುವ ಧಾಟಿಯನ್ನು ಅನುಸರಿಸಿ ಸಂಪಾದಕರು (ಮ.ಕೃ) ಅವುಗಳನ್ನು ಸೊಲ್ಲು, ತಿನಿಸೊಲ್ಲು ಸವಿ ಸೊಲ್ಲು ಎಂಬ ಹೆಸರುಗಳನ್ನು ಸೂಚಿಸಿರುವುದಲ್ಲದೇ ರುಗ್ಣತ್ರಿಪದಿ ಮತ್ತು ಪ್ರಬುದ್ಧ ತ್ರಿಪದಿಗಳೆಂದು ವಿಭಾಗಿಸಿದ್ದಾರೆ. ಇವು ಕೃಷ್ಣಮೂರ್ತಿಯವರ ಸಂಶೋಧನೆಯ ಫಲವಾಗಿದ್ದು ಮುಂದಿನವರಿಗೆ ಮಾರ್ಗದರ್ಶಕವಾಗಿದೆ. ಕೃತಿಯ ಮೊದಲ ಭಾಗದಲ್ಲಿ ಕೋಲಾಟದ ಪದಗಳಿದ್ದು ಚಾಮುಂಡಿ ಬೇಲೂರು ಚನ್ನಯ್ಯ ಮುಂತಾದ ಗೀತೆಗಳಿವೆ.

ಚಾರಿತ್ರಿಕ ಗೀತೆಗಳಲ್ಲಿ ಚಿತ್ರದುರ್ಗದ ಮದಕರಿನಾಯಕನಿಗೆ ಸಂಬಂಧಿಸಿದ ಎಂಟು ಗೀತೆಗಳಿವೆ. ಟಿಪ್ಪುಸುಲ್ತಾನ ಬ್ರಿಟೀಷ್‌ರ ಆಕ್ರಮಣದಿಂದ ತನ್ನ ದೌಲತ್ನ್ನೇ ಕಳೆದುಕೊಳ್ಳುವ ಗೀತೆ ಪ್ರಮುಖವಾಗಿದೆ. ಸ್ವಾಮಿ ಹುಸೇನ್ ಹಾಡುಗಳಲ್ಲದೆ ಬರಗಾಲದ ಹಾಡುಗಳು ಇವೆ.

ಸಂಕೀರ್ಣ ಹಾಡುಗಳಲ್ಲಿ ಕುಣಿಗಲ್ ಕೆರೆ, ಜವರಾಯ ಮುಂತಾದ ವಸ್ತು ವೈವಿಧ್ಯತೆಯ ಹಾಡುಗಳಿವೆ. ಎರಡನೇ ವಿಭಾಗದಲ್ಲಿ ಬೀಸುವ ಪದಗಳಿವೆ. "ಬೀಸುವ ಕಲ್ಲು ಒಂದು ಮಹಾಯುಗದ ಸಂಕೇತ. ಆರ್ಷೇಯ ಸಮಾಜದಲ್ಲಿ ಬೀಸುವ ಕಲ್ಲಿನ ಉದಯ ಈ ಶತಮಾನದ ಅಣುಸ್ಫೋಟದಕ್ಕಿಂತಲೂ ಹೆಚ್ಚಿನ ಕ್ರಾಂತಿಯನ್ನುಂಟು ಮಾಡಿರಬಹುದು". ಎಂಬುದು ಅರ್ಥಪೂರ್ಣವಾದದ್ದು.

**ಸಂಪುಟ ೨: ಗೃಹಿಣಿಗೀತೆಗಳು** ಕನ್ನಡ ಸಾಹಿತ್ಯ ಭಂಡಾರದಿಂದ ಹೊರಬಂದ ಸಂಪ್ರದಾಯ ಹಾಡುಗಳ ಸಂಗ್ರಹ. ಇದು ಸಹ ೧೧೭೬ ಪುಟಗಳ ೫೦೦೫ ಗೀತೆಗಳನ್ನು ಒಳಗೊಂಡ ಕೃತಿ. ಅರೆವಿದ್ಯಾವಂತ ಬ್ರಾಹ್ಮಣ ಹೆಣ್ಣುಮಕ್ಕಳು ಮತ್ತು ಮಧ್ಯಮ ವರ್ಗದವರ ಹಾಡುಗಳು ಇಲ್ಲಿ ಹೆಚ್ಚಾಗಿದೆ. ಇದರಲ್ಲಿ ಹತ್ತು ವಿಭಾಗಗಳಿದ್ದು ಪ್ರತಿಯೊಂದನ್ನು ನೆಲೆ

ಎಂದು ಹೆಸರಿಸಲಾಗಿದೆ. ಕ್ರಮವಾಗಿ ಉದಯರಾಗ, ಮನೆವಾಳ್ವೆ, ಸ್ತೋತ್ರ ಮಹಾತ್ಮೆ ಪೂಜೆ ವ್ರತ ಕಥೆಗಳು ಪೌರಣಿಕ ಕಥೆ ಗೃಹಿಣೀಧರ್ಮ, ಚೌಲ, ಮುಂಜಿ, ಮದುವೆ, ಒಸಗೆ, ಜೋಗುಳ, ಆಧ್ಯಾತ್ಮ, ಮಂಗಳ ಎಂದು ವಿಭಾಗಿಸಲಾಗಿದೆ. ಹಾಡನ್ನು ಹಾಡಿದ ಮೂರು ತಲೆಮಾರಿನ ಹಾಡುಗಾರ್ತಿಯರ ವಿವರಗಳು, ಅಂದಿನ ಸಾಂಸ್ಕೃತಿಕ ವಿವರಗಳು ಹಿಂದೂ ಧರ್ಮದ ಪ್ರಮುಖವಾದ ಪರಿಕಲ್ಪನೆಯ ವಿಚಾರವನ್ನು ಈ ಕೃತಿ ಒಳಗೊಂಡಿದೆ. ಸಂಪ್ರದಾಯದ ಅಧ್ಯಯನ ದೃಷ್ಟಿಯಿಂದ ಮಹತ್ವದ ಕೃತಿಯಾಗಿದೆ. ಒಂದೊಂದು ನೆಲೆಗೂ ಪ್ರಸ್ತಾವನೆ ಬರೆದು ಅರ್ಥಕೋಶ ಕೊಟ್ಟಿರುವುದು ಈ ಪುಸ್ತಕದ ಉಪಯುತ್ತೆಯನ್ನು ಹೆಚ್ಚಿಸಿದೆ.

ಹೊನ್ನ ಹೊತ್ತಿಗೆ ಮೊದಲ ಸಂಪುಟ ಗೀತೆಗಳು. ಈಗ ಲಭ್ಯವಿಲ್ಲದ ಕಾರಣ ಹಾಗೂ ಮತ್ತೆ ಪ್ರಕಟಿಸಲು ಅಸಾಧ್ಯವಾದ್ದರಿಂದ ೧೯೯೧ರಲ್ಲಿ ಹೊನ್ನ ಹೊತ್ತಿಗೆ ಪ್ರಕಟವಾಯಿತು. ಇದರಲ್ಲಿ ಕ್ಯಾಸೆಟ್‌ನಲ್ಲಿ ಜನಪ್ರಿಯವಾಗಿದ್ದ, ಮ.ಕೃ. ಅವರ ಅನೇಕ ಜನಪ್ರಿಯ ಜನಪದಗೀತೆಗಳು ಇದರಲ್ಲಿದೆ. ಮತಿಘಟ್ಟ ಕೃಷ್ಣಮೂರ್ತಿಯವರ ಮೂರು ಬಿಡಿಲೇಖನಗಳು ಪ್ರಕಟವಾಗಿದೆ. ಮೊದಲನೆಯದು ೧೯[illegible]೭ರಲ್ಲಿ ತರೀಕೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ "ತರೀಕೆರೆ ಪಾಳೇಗಾರರು" ಇದು "ಹೊನ್ನಬಿತ್ತೇವು ಹೊಲಕೆಲ್ಲ" ಎಂಬ ಕೃತಿಯಲ್ಲಿ ಪ್ರಕಟವಾಗಿದೆ. ತರೀಕೆರೆ ನಿರ್ಮಾಣ ಪಾಳೇಗಾರ ವಂಶಾವಳಿ ಆಗ ಇದ್ದ ಅಂತಃಕಲಹ ಮುಂತಾದವುಗಳ ಜೊತೆಗೆ ತರೀಕೆರೆ ಪಾಳೇಗಾರರ ವಂಶಜರು ಬ್ರಿಟೀಷರೊಡನೆ ಹೋರಾಡಿದ ವಿಚಾರವೂ ಇದೆ.

ಇವರ ಮತ್ತೊಂದು ಲೇಖನ ೧೯೮೩ರಲ್ಲಿ ಪ್ರಕಟವಾದ "ಮಲೆನಾಡ ಜಾನಪದ' ಕೃತಿಯಲ್ಲಿ ಪ್ರಕಟವಾಗಿದೆ. ಇದರಲ್ಲಿ ಮಲೆನಾಡು ಹಾಗೂ ಬಯಲು ಸೀಮೆಯ ಜನಪದ ಸಾಹಿತ್ಯದ ಬಗ್ಗೆ ತುಲನಾತ್ಮಕವಾಗಿ ಚಿಂತಿಸಿದ್ದಾರೆ. ಹಾಗೂ ಜಾನಪದ ವಿದ್ವಾಂಸರಿಗೆ ಕೆಲವು ಸಲಹೆಗಳನ್ನು ನೀಡಿರುವುದು ಮುಖ್ಯ ವಿಚಾರವಾಗಿದೆ.

"ಕರ್ನಾಟಕ ಪರಂಪರೆ ಸಂಪುಟ ೨" ಸರ್ಕಾರದಿಂದ ಪ್ರಕಟವಾದ ಬೃಹತ್ ಕೃತಿ. ೧೯೭೪ರಲ್ಲಿ ಪ್ರಕಟವಾದುದು. ಈ ಗ್ರಂಥದಲ್ಲಿ ಮ.ಕೃ. ಅವರು "ಕರ್ನಾಟಕದ ಜನಪದ ಗೀತೆಗಳು" ಎಂಬ ಲೇಖನವನ್ನು ಬರೆದಿದ್ದಾರೆ. ಸಮಗ್ರ ಕರ್ನಾಟಕದ ಜನಪದ ಸಂಗ್ರಾಹಕರು ಹಾಗೂ ವಿವಿಧ ಭಾಷೆಯ ಗೀತೆಗಳನ್ನು (ತುಳು ಇತ್ಯಾದಿ) ಹೊಂದಿರುವ ವೈವಿಧ್ಯ ಪೂರ್ಣವಾದ ವಿಚಾರಗಳನ್ನು ಹೊಂದಿರುವ, ವಿಶಿಷ್ಟವಾದ ಲೇಖನ ಇದಾಗಿದೆ. ಕನ್ನಡದಲ್ಲಿ ಬರೆದ ಲೇಖನ, ಇಂಗ್ಲಿಷ್‌ಗೂ ಮ.ಕೃ ಅವರೇ ಭಾಷಾಂತರ ಮಾಡಿರುವುದು (ಭಾಷಾಂತರಿಸಿರುವುದು) ಅವರ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿದೆ.

## ಮಾಧ್ಯಮದಲ್ಲಿ ಜನಪದ ಹಾಡು – ಪ್ರಸಾರ

ಬೆಂಗಳೂರಿನಲ್ಲಿ ಆಕಾಶವಾಣಿ ಆರಂಭವಾಗುವ ಮೊದಲು ಕನ್ನಡ ಕಾರ್ಯಕ್ರಮಗಳು ಮದ್ರಾಸ್ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದವು. ಮೂರು ತಿಂಗಳಿಗೊಮ್ಮೆ ಜನಪದ ಸಾಹಿತ್ಯದ ಕಾರ್ಯಕ್ರಮ ನಡೆಯುತ್ತಿತ್ತು. ಆಗ ಮ.ಕೃ ಅವರು ಜನಪದ ಗೀತೆಗಳನ್ನು ಸೂಕ್ತ ವಿವರಣೆಗಳೊಡನೆ ನೇರ ಪ್ರಸಾರ ಮೂಲಕ ಪ್ರಸಾರಮಾಡುತ್ತಿದ್ದರು. ಆಗ ಪ್ರಸಿದ್ಧ ಹಾಡುಗಾರರಾದ ಶ್ರೀ ಕಾಳಿಂಗರಾವ್, ಶ್ರೀಮತಿ ಮೋಹನ್ ಕುಮಾರಿ, ಸೋಹನ್ ಕುಮಾರಿ, ಜಯವಂತಿದೇವಿ ಮೊದಲಾದ ಹಾಡುಗಾರರ ಪರಿಚಯವಾಯಿತು. ಇವರುಗಳಿಗೆ ಜಾನಪದ ಗೀತೆಗಳನ್ನು ಅಭ್ಯಾಸ ಮಾಡಿಸಿ ಅವುಗಳ ಮೂಲಧಾಟಿಯನ್ನು ಹೇಳಿಕೊಟ್ಟು ರೇಡಿಯೋದಲ್ಲಿ ಈ ಗೀತೆಗಳು ಪ್ರಪ್ರಥಮವಾಗಿ ಪ್ರಸಾರವಾಗಲು ಕಾರಣರಾದವರು ಮ.ಕೃ. ಅವರು ಇದರಿಂದಾಗಿಯೇ ಬಾರಯ್ಯ ಬೆಳದಿಂಗಳೇ, ಚಾಮುಂಡಿ, ಮುಡಲ್ ಕುಣಿಗಲ್ ಕೆರೆ, ಅದುಬೆಟ್ಟ ಇದುಬೆಟ್ಟವೂ ಮುಂತಾದ ಅನೇಕ ಜನಪದಗೀತೆಗಳು ಜನಪ್ರಿಯವಾದವು. ಬಿ.ಕೆ. ಸುಮಿತ್ರ ಅವರು ಹಾಡಿರುವ ಕ್ಯಾಸೆಟ್‌ಗಳಲ್ಲಿ ಹಾಡಿರುವ ಜನಪದ ಗೀತೆಗಳಿಗೆ ಸಾಹಿತ್ಯ ಹಾಗೂ ಧಾಟಿಗಳನ್ನು ಒದಗಿಸಿಕೊಟ್ಟು ಮಾರ್ಗದರ್ಶನ ಮಾಡಿದವರು ಮ.ಕೃ ನಂತರ ಝೇಂಕಾರ ಮತ್ತು ಉಯ್ಯಾಲೆ ಎಂಬ ಕ್ಯಾಸೆಟ್ (ಧ್ವನಿಸುರಳಿ) ತಾವೇ ಸ್ವತಂತ್ರವಾಗಿ ಹೊರತಂದರು.

ಕನ್ನಡ ಜಾನಪದ ಅಧ್ಯಯನದಲ್ಲಿ ಮಹತ್ತರ ಪಾತ್ರವಹಿಸಿದ್ದ ಕರ್ನಾಟಕ ಜಾನಪದ ಪರಿಷತ್ತಿನ ಸದಸ್ಯರಲ್ಲಿ ಇವರು ಒಬ್ಬರು. ಇವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಪ್ರಾರಂಭದ ಸದಸ್ಯರಾಗಿದ್ದರು. ಮ.ಕೃ ಅವರಿಗೆ ಸಾಹಿತಿಗಳಾಗಿ ಸೇವೆಸಲ್ಲಿಸಿದ್ದಕ್ಕೆ ಕರ್ನಾಟಕ ಸರ್ಕಾರ ೫೦೦ರೂ ಮಾಸಾಶನ ನೀಡುತ್ತಿತ್ತು.

**ಏಳುಕೊಳ್ಳದ ಎಲ್ಲಮ್ಮ:-** ಈ ಕೃತಿ ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿರುವ ಎಲ್ಲಮ್ಮನ ಕ್ಷೇತ್ರವನ್ನು ಕುರಿತು ಬರೆದ ಗ್ರಂಥ. ಇದು ಪ್ರವಾಸಿಗರ ಮತ್ತು ಭಕ್ತರ ಉಪಯೋಗಕ್ಕಾಗಿ ಬರೆದ ಕೃತಿಯಾಗಿದೆ. ಇದರಲ್ಲಿ ಸವದತ್ತಿಯ ಇತಿಹಾಸ ಎಲ್ಲಮ್ಮ ಕೊಳ್ಳದ ವರ್ಣನೆ, ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳು ಎಲ್ಲಮ್ಮನ ಮಹಿಮೆಯನ್ನು ಕುರಿತು ಹಾಡಿರುವ ಹಾಡುಗಳು ಕಥೆಗಳು ಅಡಕವಾಗಿವೆ. ಶ್ರೀಯುತ ಬೇಂದ್ರೆಯವರ ಮುನ್ನುಡಿಯನ್ನು ಹೊಂದಿರುವ ಈ ಕೃತಿ ಉಪಯುಕ್ತವಾದ ಕೈಪಿಡಿಯಾಗಿದೆ.

ಮತಿಘಟ್ಟ ಕೃಷ್ಣಮೂರ್ತಿಯವರು ಗೀತೆಗಳು ಸಂಪುಟ ೧ರಲ್ಲಿ "ಬಿನ್ನಹ" ಭಾಗದಲ್ಲಿ "ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟಣೆ ಹಾಗೂ ಸಂಪಾದನೆಯ ಕಾರ್ಯವೀಗ ಹಿಂದೆಂದಿಗಿಂತಲೂ ಹೆಚ್ಚು ವ್ಯಾಪಕವಾಗಿ ತೀವ್ರಗತಿಯಿಂದ ನಡೆಯಬೇಕಾದುದು ಅಗತ್ಯವೆನಿಸಿದೆ. ತಲೆತಲಾಂತರದಿಂದ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ

ಹರಿದು ಬೆಳೆದು ಬಂದ ನಮ್ಮೀ ಸಾಹಿತ್ಯವಾಹಿನಿಯು ಈ ಶತಮಾನದ ಆರಂಭದಲ್ಲೇ ಆಧುನೀಕತೆಯ ಮರಳುಗಾಡನ್ನ ಪ್ರವೇಶಿಸಿ, ತನ್ನ ಮೈಸಿರಿಯನ್ನು ಕಳೆದುಕೊಂಡು ಬಡವಾಗಿ ಕಂದಿ, ಕುಂದಿ ಭವಿಷ್ಯದಲ್ಲೆ ಸಂಪೂರ್ಣವಾಗಿ ಇಂಗಿಹೋಗುವ ಅಪಾಯಕ್ಕೆ ಪಕ್ಕಾಗಿದೆ". ಎಂಬುದಾಗಿ ಹೇಳಿರುವುದರಲ್ಲಿ ಹೆಚ್ಚು ಹೆಚ್ಚು ಜನಪದ ಸಾಹಿತ್ಯ ಸಂಗ್ರಹ ಆಗಬೇಕೆಂಬ ತೀವ್ರತರ ತುಡಿತವನ್ನು ಕಾಣಬಹುದು. "ಸಂಗ್ರಹಕಾರರು ಪಾಠಾಂತರಗಳು ದೊರಕದೆ ತಾವೇ ತಮ್ಮ ಮನಸ್ಸಿಗೆ ಸರಿಹೊಂದುವಂತೆ ಹಾಡುಗಳನ್ನು ತಿದ್ದುವುದು ತರವಲ್ಲ.... ವ್ಯಾಕರಣದೋಷಗಳಿದ್ದರೆ, ಅಪಾರ್ಥಕ್ಕೆಡೆಕೊಡುವ ಭಾಗಗಳಿದ್ದರೆ, ವಿಪರೀತ ಅಸ್ಪಷ್ಟತೆ ಇದ್ದರೆ ಅಂಥ ಹಾಡುಗಳನ್ನು ಪಾಠಾಂತರ ದೊರೆಯುವವರೆವಿಗೆ ಪ್ರಕಟಿಸದೇ ಇಟ್ಟುಕೊಳ್ಳಬಹುದು. ಪ್ರಾಸಾಕ್ಷರಗಳಿರಬೇಕೆಂದು ತ್ರಿಪದಿಗಳನ್ನೆಲ್ಲಾ ಹಿಗ್ಗಾಮಗ್ಗಾ ಜಗ್ಗಾಡಿಸಿ ತಿದ್ದುವುದು ಸರ್ವಥಾ ಸಲ್ಲದು ಎಂದು ಮನಸ್ಸಿಗೆ ಬಂದಂತೆ ತಿದ್ದುವವರಿಗೆ ಎಚ್ಚರಿಸಿದ್ದಾರೆ.

ಧಾರವಾಡಕ್ಕೆ ಹೋದಾಗಲೆಲ್ಲಾ ಶ್ರೀಯುತ ಬೆಟಗೇರಿ ಕೃಷ್ಣಶರ್ಮರ ಮನೆಗೆ ಹೋಗಿ ಅಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಮ.ಕೃ ಅವರೊಡನೆ ಸಾಹಿತ್ಯದ ಬಗ್ಗೆ ಚರ್ಚಿಸಿ ಬಹಳಷ್ಟು ತಿಳಿದುಕೊಂಡಿದ್ದರು. ತಾವು ಸಂಗ್ರಹಿಸಿದ್ದ ಹಾಡುಗಳನ್ನು ತೋರಿಸಿ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಬೆಟಗೇರಿ ಅವರಿಂದ ಮಾರ್ಗದರ್ಶನವನ್ನು ಪಡೆಯುತ್ತಿದ್ದರು. ಹಾಗೆ ಶ್ರೀಯುತ ಬೇಂದ್ರೆಯವರ ಮನೆಗೆ ಭೇಟಿಕೊಟ್ಟು ಜನಪದ ಹಾಡುಗಳ ಬಗ್ಗೆ ಅವರೊಡನೆ ಚರ್ಚಿಸುತ್ತಿದ್ದರು. ಏಳುಕೊಳ್ಳದ ಎಲ್ಲಮ್ಮ ಬೇಂದ್ರೆಯವರ ಮುನ್ನುಡಿಯೊಡನೆ ಪ್ರಕಟವಾಗಿರುವ ಪುಸ್ತಕವಾಗಿದೆ.

ಗುಟ್ಟಹಳ್ಳಿಯಲ್ಲಿ ಒಮ್ಮೆ ಗಣಪತಿ ಉತ್ಸವದ ಕಾರ್ಯಕ್ರಮಕ್ಕೆ ಬಂದ ಕಾಳಿಂಗರಾಯರು ಜನಪದ ಗೀತೆಯನ್ನು ಹಾಡುವ ಮೊದಲು ಈ ಹಾಡು ಮ.ಕೃ. ಅವರ ಸಂಗ್ರಹದೆಂದೂ., ಅವರು ತಮ್ಮ ಗುರುಗಳೆಂದೂ, ಹೇಳಿ ಹಾಡಿದರು. ಕಾರ್ಯಕ್ರಮ ಮುಗಿದ ಮೇಲೆ ಕಾರ್ಯಕರ್ತರು ಕೃಷ್ಣಮೂರ್ತಿಗಳು ಪಕ್ಕದ ರಸ್ತೆಯಲ್ಲೇ ಇರುವರೆಂದು ತಿಳಿಸಿದಾಗ ರಾತ್ರಿ ೧೦ ಗಂಟೆಯಲ್ಲಿ ಕೃಷ್ಣಮೂರ್ತಿಗಳನ್ನು ಕಾಣಲು ಹೊರಟೇಬಿಟ್ಟರು. ಕಾಳಿಂಗರಾಯರು ಮನೆಯಲ್ಲಿ ಮತ್ತೆ ಹಾಡಿನ ಕಾರ್ಯಕ್ರಮ ನಡೆದು ಗುರುಗಳಿಗೆ ವಂದಿಸಿ ತೆರಳಿದ್ದರು ಕಾಳಿಂಗರಾಯರು.

ಮತಿಘಟ್ಟ ಕೃಷ್ಣಮೂರ್ತಿಯವರು ಸ್ನೇಹಜೀವಿ. ಅವರಿಗೆ ದೊಡ್ಡ ವಿದ್ವಾಂಸರು ಮಾತ್ರವಲ್ಲದೆ, ತಮ್ಮ ಮಕ್ಕಳ ಸ್ನೇಹಿತರನ್ನು ಅವರ ಸ್ನೇಹಿತರಂತೆ ಕಾಣುತ್ತಿದ್ದರು. ಅಕ್ಕ-ಪಕ್ಕದ ಮನೆಯವರೊಡನೆ, ಬಂಧುಗಳೊಡನೆ ಆತ್ಮೀಯವಾಗಿ ಮಾತನಾಡುತ್ತಿದ್ದರು. ಅವರನ್ನು ಜನಪದಗೀತೆ ಕಥೆ, ಚರ್ಚೆಗೆ ಆಹ್ವಾನಿಸುತ್ತಿದ್ದರು. ಇವರು ಎಲ್ಲೇ ಇರಲಿ ಅಲ್ಲೊಂದು ಗುಂಪು ಸೇರುತ್ತಿತ್ತು. ಪ್ರತಿದಿನ ಇವರ ಮನೆಯಲ್ಲಿ ರಾಜಕೀಯ ಸಾಹಿತ್ಯ,

ಇತಿಹಾಸ, ಸಾಮಾಜಿಕ ವಿಷಯಗಳು ಚರ್ಚೆ ನಡೆಯುತ್ತಿತ್ತು. ಒಮ್ಮೆ ಮ.ಕೃ ಅವರೊಡನೆ ಮಾತನಾಡಿದರೆ ಸಾಕು ಬಹಳ ಆತ್ಮೀಯರಾಗುತ್ತಿದ್ದರು. ಒಮ್ಮೊಮ್ಮೆ ಇವರ ಮನೆಯಲ್ಲಿ (ಗುಟ್ಟುಹಳ್ಳಿಯ ಮನೆ) ಸರ್ವಧರ್ಮ ಸಭೆ ಸೇರಿದಂತೆ ಇರುತ್ತಿತ್ತು. ಲಿಂಗಾಯತ, ಕ್ರಿಶ್ಚಿಯನ್, ಒಕ್ಕಲಿಗ, ಜೈನ, ಹೀಗೆ ಎಲ್ಲಾ ಧರ್ಮದ ಸ್ನೇಹಿತರೂ ಸೇರಿ ಅವರವರ ಧರ್ಮದ ಬಗ್ಗೆ, ಮಹತ್ವದ ಬಗ್ಗೆ ಮಾತನಾಡುತ್ತಿದ್ದರು, ಮತ್ತೊಂದು ಧರ್ಮದ ತತ್ವಗಳ ಬಗ್ಗೆ ಚರ್ಚಿಸುತ್ತಿದ್ದರು. ಮನೆಯ ಹಾಗೂ ಇತರ ಹೆಣ್ಣುಮಕ್ಕಳು ಭಾಗವಹಿಸುತ್ತಿದ್ದರು. ಇಲ್ಲಿ (ಚರ್ಚೆಯಲ್ಲಿ) ಹಿರಿದು ಕಿರಿದು ಎಂಬ ಭೇಧವಿರುತ್ತಿರಲಿಲ್ಲ ಎಲ್ಲರೂ ಮುಕ್ತವಾಗಿ (ಚರ್ಚೆಯಲ್ಲಿ ಪಾಲ್ಗೊಳ್ಳಬಹುದಾಗಿತ್ತು. ಚರ್ಚೆ ಯಾವತ್ತೂ ಒಂದು ತೀರ್ಮಾನಕ್ಕೆ ಬರುತ್ತಲೂ ಇರಲಿಲ್ಲ. ಹಬ್ಬ ಹುಣ್ಣಿಮೆಗಳಲ್ಲಿ ಸ್ನೇಹಿತರು ಬಂದು ಮ.ಕೃ. ಅವರಿಗೆ ಶುಭಾಶಯ ಹೇಳುತ್ತಿದ್ದರು. ಕ್ರಿಸ್‌ಮಸ್ ಹಬ್ಬದಲ್ಲಿ ಎದುರು ಮನೆಯಲ್ಲಿದ್ದ ಕ್ರಿಶ್ಚಿಯನ್ ಅವರ ಮನೆಗೆ ಮಧ್ಯರಾತ್ರಿ ಹಾಡಲು ಬರುತ್ತಿದ್ದರು ಆಗ ಮ.ಕೃ ಅವರ ಮನೆಯವರು ತಮ್ಮ ಮನೆಯ ಮುಂದೆ ರಂಗವಲ್ಲಿ ಹಾಕಿ, ಸಿಹಿಯೊಡನೆ ಅವರನ್ನು ಸ್ವಾಗತಿಸುತ್ತಿದ್ದರು. ಹಾಡುಗಾರರು ಸಹ ನಿಂತು ಏಸುವನ್ನು ಹೊಗಳುವ ಹಾಡನ್ನ ಹೇಳಿ ಕ್ರಿಶ್ಚಿಯನ್ ಅವರ ಮನೆಗೆ ಹೋಗುತ್ತಿದ್ದರು.

ವಿಶ್ವಾಮಿತ್ರ ಗೋತ್ರದವರಾದ ಮ.ಕೃ. ಅವರಿಗೆ ಬಹಳಷ್ಟು ಹಠದ ಸ್ವಭಾವವೂ ಇತ್ತು. ಈ ಸ್ವಭಾವವೇ ಜನಪದ ಸಾಹಿತ್ಯ ಸಂಗ್ರಹಕ್ಕೆ ಕಾರಣವಾಗಿರಲು ಬಹುದು. ಹಾಗೆಯೇ ಅವರಿಗೆ ಸಿಗಬಹುದಾಗಿದ್ದ ಕೆಲವು ಸೌಲಭ್ಯ–ಅವಕಾಶಗಳನ್ನು ಕಳೆದುಕೊಳ್ಳ ಬೇಕಾಯಿತು.

## ಪತ್ರಕರ್ತ ಕೃಷ್ಣಮೂರ್ತಿ

ಪತ್ರಿಕೆಗಳಲ್ಲಿ ಪ್ರಕಟವಾದ ಸಾಮಾಜಿಕ, ಧಾರ್ಮಿಕ, ಕನ್ನಡ ಪರ ವಿರೋಧ ವಿಷಯಗಳ – ವ್ಯಕ್ತಿಗಳ ಬಗ್ಗೆ ಓದಿ ಪರ ಹಾಗೂ ವಿರೋಧಗಳ ಬಗ್ಗೆ ಲೇಖನಗಳಿಂದ ಖಂಡಿಸಿ ಪತ್ರಿಕೆಗಳ ಮೂಲಕನೇ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಆದರೆ ಆ ವ್ಯಕ್ತಿಗಳ ಬಗ್ಗೆ ಗೌರವ ಭಾವನೆ ಇದ್ದೆ ಇರುತ್ತಿತ್ತು. (ಆ ವ್ಯಕ್ತಿಯನ್ನು ಗೌರವಿಸುತ್ತಿದ್ದರು) ಶ್ರೀಮತಿ ಇಂದಿರಾಗಾಂಧಿ, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಹನುಮಂತಯ್ಯ ಮುಂತಾದವರಿಗೆ ಅವರ ಆಡಳಿತದ ಬಗ್ಗೆ ತಮ್ಮ ಅನಿಸಿಕೆಗಳನ್ನು ಸ್ಪಷ್ಟವಾಗಿ ಕಾಗದದ ಮೂಲಕ ತಿಳಿಸುತ್ತಿದ್ದರು. ಅವರುಗಳು ಸಹ ಅಷ್ಟೇ ಆತ್ಮೀಯತೆಯಿಂದ ಉತ್ತರಗಳನ್ನು ಬರೆಯುತ್ತಿದ್ದರು (ಮೂರುಪಾತ್ರಗಳು ಎಂದು ಪ್ರಕಟಿಸಿದ್ದಾರೆ. ಮ.ಕೃ.

ಹಬ್ಬ ಹುಣ್ಣಿಮೆ, ಮದುವೆ–ಮುಂಜಿ–ಇತ್ಯಾದಿ ಕಾರ್ಯಕ್ರಮಕ್ಕೆ ಬಂಧುಗಳಿಂದ ಸ್ನೇಹಿತರಿಂದ ಕರೆಯೋಲೆ ಬಂದರೆ, ಎಷ್ಟೇ ದೂರವಿದ್ದರೂ ಹೋಗುತ್ತಿದ್ದರು ಮ.ಕೃ

ಹಾಸನದ ಕಡೆ ಹೋಗುವ ಸಂದರ್ಭ ಬಂದಾಗಲೆಲ್ಲಾ ಮತಿಘಟ್ಟ (ಮುತ್ತುರಾಮಸ್ವಾಮಿಗಳ ಮನೆಗೆ) ಕಳಸಾಪುರ, ಬೆಳವಾಡಿ, ಜಾವಗಲ್‌ನಲ್ಲಿರುವ ನೆಂಟರ ಮನೆಗೆ ಹೋಗುವುದು ಸಾಮಾನ್ಯವಾಗಿತ್ತು. ತಮಗೆ ರಾಜ್ಯ ಪ್ರಶಸ್ತಿ ಬಂದ ಸಂದರ್ಭದಲ್ಲಿ ೨೦೦೨ರಲ್ಲಿ ಅನಾರೋಗ್ಯದಿಂದ ಮಲಗಿದ್ದ ಅಣ್ಣ ಮುತ್ತುರಾಮಸ್ವಾಮಿಯವರೊಡನೆ ಪ್ರಶಸ್ತಿ ಬಂದ ಸಂತಸವನ್ನು ಹಂಚಿಕೊಳ್ಳಲು, ಮೈಸೂರಿಗೆ ಕಾರು ಮಾಡಿಕೊಂಡು ಹೋಗಿಬಂದಿದ್ದರು. ಮುತ್ತುರಾಮಸ್ವಾಮಿಯವರು ೭೩ನೇ ವಯಸ್ಸಿನಲ್ಲಿ ಮರಣ ಹೊಂದಿದರು. ಇದನ್ನು ತಿಳಿದ ಮ. ಕೃ ತಮ್ಮ ೭೨ನೇ ಇಳಿವಯಸ್ಸಿನಲ್ಲಿ ಮೈಸೂರಿಗೆ ಹೊರಟು ಎಲ್ಲಾ ಕಾರ್ಯದಲ್ಲಿ ಭಾಗವಹಿಸಿದ್ದರು. ಆದರೆ ಆಗಾಗ್ಗೆ ಲಿಂಗಣ್ಣಯ್ಯನೂ ೭೮ ವರ್ಷಕ್ಕೆ ಹೋದ ಮುತ್ತುನೂ ೭೮ ವರ್ಷಕ್ಕೆ ಹೋದ ನಾನು ಹೆಚ್ಚು ದಿನ ಇರುವುದಿಲ್ಲ ಎನ್ನುತ್ತಿದ್ದರು. ಮಕ್ಕಳು – ಸ್ನೇಹಿತರು ನೀವು ಆರೋಗ್ಯವಾಗಿ ಗಟ್ಟಿ ಮುಟ್ಟಾಗಿದ್ದೀರಿ ನೂರು ವರ್ಷ ಖಂಡಿತ ಬದುಕುತ್ತೀರಿ ಎಂದಾಗ ಇರಬಹುದು ಎನ್ನುತ್ತಿದ್ದರು.

ಪ್ರತಿದಿನ ಮನೆಯಲ್ಲಿ ಬಂಧುಗಳು, ಅತಿಥಿ ಅಭ್ಯಾಗತರು, ಜನಪದ ಎಂ.ಎ. ವಿದ್ಯಾರ್ಥಿಗಳು ಐ.ಪಿ.ಎಸ್ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳು ಇವರಲ್ಲಿ ಯಾರಾದರೂ ಒಬ್ಬರು ಇದ್ದೇ ಇರುತ್ತಿದ್ದರು. ಅವರು ಬೇಡ ಬೇಡವೆಂದರೂ ಊಟ ಉಪಚಾರ ನಡೆಯುತ್ತಿತ್ತು. ಬಂದವರು ಬಹಳ ಆತ್ಮೀಯರಾಗಿದ್ದರೆ ಕೆಲವು ವೇಳೆ ಪಗಡೆ ಆಟವನ್ನು ಆಡುತ್ತಿದ್ದರು. ಪಗಡೆ ಆಟ ಕೂಡ, ಮ. ಕೃ. ಅವರಿಗೆ ಬಹಳ ಇಷ್ಟವಾದ ಆಟವಾಗಿತ್ತು. ಹಾಗೆ ಇಸ್ಪೀಟ್ ಆಟ ಕೂಡ, ಅಳಿಯ – ಮಕ್ಕಳೊಂದಿಗೆ ಮಾತ್ರ ಆಡುತ್ತಿದ್ದರು. ಇವರಿಗೆ ಕ್ರಿಕೇಟ್ ಸಹ ಬಹಳ ಪ್ರಿಯವಾದ ಆಟವಾಗಿತ್ತು. ಗುಟ್ಟಹಳ್ಳಿಯಲ್ಲಿದ್ದಾಗ (೧೯೬೫–೬೬ರಲ್ಲಿ) ರೇಡಿಯೋದಲ್ಲಿ ಕ್ರಿಕೆಟ್ ಪ್ರಸಾರವಾಗುತ್ತಿದ್ದ ಕಾಲದಲ್ಲಿ ಕಾಮೆಂಟ್ರಿ ಕೇಳಲು ಎದುರು ಮನೆಗೆ ಹೋಗಿ ಕುಳಿತು ಬಿಡುತ್ತಿದ್ದರು ಅಲ್ಲಿಯೇ ಊಟ ತಿಂಡಿ ಆಗುತ್ತಿತ್ತು. ಇವರ ಆಸಕ್ತಿಯನ್ನು ಕಂಡು ದೊಡ್ಡ ಮಗಳು ಉಮಾ ಹಣ ಉಳಿಸಿ ಮನೆಗೆ ಒಂದು ಟ್ರಾನ್‌ಸಿಸ್ಟರ್ ತರಬೇಕಾಯಿತು. ಟಿ.ವಿ. ಬಂದ ನಂತರ ಕ್ರಿಕೆಟ್ ಪ್ರಸಾರದ ದಿನಗಳಲ್ಲಿ ಟಿ.ವಿ. ಮುಂದೆ ಕುಳಿತು ಬಿಡುತ್ತಿದ್ದರು. ಭಾರತ ಸೋಲುವ ಸ್ಥಿತಿಗೆ ಬಂದರೆ ಮಾತ್ರ ಟಿ.ವಿ. ಆಫ್ ಆಗುತ್ತಿತ್ತು.

ಶ್ರೀಯುತ ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ವಿತರಣೆಯ ಸಮಾರಂಭ ಬೆಂಗಳೂರಿನಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಹೋದ ಮ.ಕೃ. ಅವರು ಬೇಂದ್ರೆಯವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದರು. ಮ.ಕೃ. ಅವರ ತಾಯಿ ಚೆನ್ನಮ್ಮ ಕೊನೆಗಾಲದಲ್ಲಿ ಮ.ಕೃ. ಮನೆಯಲ್ಲಿರಲು ಬಂದಿದ್ದರು. ಅವರನ್ನು ಕಂಡು ಬೇಂದ್ರೆ ಕೈ ಜೋಡಿಸಿ

ನಮಸ್ಕರಿಸಿದರು. ಮಕ್ಕಳಿಗೆಲ್ಲಾ ಸಂತೋಷವೋ ಸಂತೋಷ. ಬೇಂದ್ರೆಯವರಿಗೆ ನಮಸ್ಕರಿಸಿ, ಮಾತನಾಡುತ್ತಾ, ಒಂದು ಕವನವನ್ನು ಹಾಡಬೇಕೆಂದು ಕೇಳಿಕೊಂಡರು. ಶ್ರೀಯುತ ಬೇಂದ್ರೆಯವರು 'ಕುಣಿಯೋಣ ಬಾರಾ' ಕವನವನ್ನು ಅಭಿನಯದ ಮೂಲಕ ಹಾಡಿ ಎಲ್ಲರೊಡನೆ ಸಂತಸಪಟ್ಟ ಘಟನೆ ಮ.ಕೃ ಅವರ ಮನೆಯವರಿಗೆ ಮರೆಯಲಾಗದ ಘಟನೆಯಾಗಿದೆ.

**ಸಾಮಾಜಿಕ ಕಳಕಳಿ**

ಕೆಂಪೇಗೌಡ ನಗರದಲ್ಲಿದ್ದ (ಹಿಂದಿನ ಗವಿಪುರಂ ಗುಟ್ಟಹಳ್ಳಿ) ಮಕ್ಕಳ ಆಟದ ಮೈದಾನದಲ್ಲಿ ಕಾಂಪ್ಲೆಕ್ಸ್ ಕಟ್ಟಲು ಒಪ್ಪಿಗೆ ಕೊಟ್ಟಿದ್ದರು ನಗರಸಭೆಯವರು. ಅದನ್ನು ವಿರೋಧಿಸಿ ಉದಯಬಾನು ಸಂಘದ ಮೂಲಕ ಹೋರಾಡಿದರು ಮ.ಕೃ. ಅದರ ಫಲವಾಗಿ ಮಕ್ಕಳ ಆಟದ ಮೈದಾನ ಉಳಿದು ಈಗ ಉದಯಭಾನು ಆಟದ ಮೈದಾನವಾಗಿ ಈಗಲೂ ಕೆಂಪೇಗೌಡ ನಗರದಲ್ಲಿದೆ.

೧೯೮೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಉಳಿವಿಗಾಗಿ, ಅದನ್ನು ಶುದ್ಧೀಕರಿಸಬೇಕಾಗಿ ವಿನಂತಿಸಿ, ಕರಪತ್ರಗಳು – ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುವುದು ಮುಂತಾದವುಗಳ ಮೂಲಕ ಹೋರಾಡಿ, ಶ್ಯಾಮಸುಂದರ ಆಯೋಗ ಪರಿಷತ್ತಿಗೆ ಬರಲು ಕಾರಣರಾದರು ಮ.ಕೃ.

**ಹವ್ಯಾಸ**

ಮ.ಕೃ. ಅವರಿಗೆ ಪುಸ್ತಕಗಳನ್ನು ಓದುವುದು, ಅದರಲ್ಲಿರುವ ವಿಚಾರಗಳನ್ನು ಟಿಪ್ಪಣಿ ಮಾಡುವುದು. ಚಿಕ್ಕಂದಿನಿಂದಲೂ ಬಂದ ರೂಢಿ(ಹವ್ಯಾಸ) ದೊಡ್ಡ ಮಗಳು ಉಮಾಳ ಮುಸ್ಲಿಂ ಸ್ನೇಹಿತೆಯೊಬ್ಬರು, ಮೆಕ್ಕಾಗೆ ಹೋಗಿ ಬಂದ ಸಂದರ್ಭದಲ್ಲಿ ಮ.ಕೃ. ಅವರಿಗೆ 'ಕುರಾನ್'ನ ಎರಡು ಬೃಹತ್ ಸಂಪುಟಗಳನ್ನು ಕೊಟ್ಟಿದ್ದರು. ಅದರಲ್ಲಿ ಕನ್ನಡದ ಭಾಷಾಂತರ ಹಾಗೂ ಕನ್ನಡದಲ್ಲಿ ವಿವರಣೆ ಕೊಟ್ಟಿದ್ದರು. ಅವುಗಳನ್ನು ಓದಿ, ಮನೆಗೆ ಬಂದವರೊಡನೆ, ಮುಸ್ಲಿಂ ಬಾಂಧವರೊಡನೆ ಚರ್ಚಿಸಿ, 'ಕುರಾನ್' ಸಾರಾಂಶವನ್ನು ೨೩ ಸೋಪಾನಗಳು ಎಂಬ ಪ್ರಬಂಧವನ್ನು ಬರೆದರು.

ಮುಸ್ಲಿಂಯೇತರರ ದೃಷ್ಟಿಯಲ್ಲಿ 'ಕುರಾನ್' ಎಂಬ ವಿಷಯವಾಗಿ ಮುಸ್ಲಿಂ ಸಂಘಟನೆಯೊಂದು ಸ್ಪರ್ಧೆ ಇಟ್ಟಿತ್ತು, ಮಕ್ಕಳ ಬಲವಂತಕ್ಕೆ ಸ್ಪರ್ಧೆಗೆ ಕಳುಹಿಸಿದ್ದರು ಮ.ಕೃ, ಆ ಲೇಖನಕ್ಕೆ ಮೂರನೇ ಬಹುಮಾನ ಬಂದಿತ್ತು.

ಮತಿಘಟ್ಟ ಕೃಷ್ಣಮೂರ್ತಿ ಅವರು ಗವಿಪುರಂ ಗುಟ್ಟಹಳ್ಳಿಯಲ್ಲಿದ್ದಾಗ ಅವರ ಮಕ್ಕಳು ಹತ್ತಿರದಲ್ಲೇ ಇದ್ದ ರಾಮಕೃಷ್ಣ ಆಶ್ರಮಕ್ಕೆ ಪ್ರತಿದಿನ ಹೋಗುತ್ತಿದ್ದರು. ಆಶ್ರಮದಲ್ಲಿ ಭಜನೆಗಳನ್ನು ಹಾಗೂ ಹಾಡುಗಳನ್ನು ಹೇಳಿಕೊಡುತ್ತಿದ್ದ ಹಾಗೂ ಹಾಡುತ್ತಿದ್ದ ಸ್ವಾಮೀಜಿ

ಶ್ರೀ ಪುರುಷೋತ್ತಮಾನಂದಜೀ ಅವರು, ಮತಿಘಟ್ಟ ಕೃಷ್ಣಮೂರ್ತಿ ಅವರ ಮಕ್ಕಳೊಡನೆ ಬಹಳ ಆತ್ಮೀಯವಾಗಿ ಮಾತನಾಡುತ್ತಿದ್ದರು. ಅವರುಗಳಿಗೆ ನಿಮ್ಮ ಮನೆಯಲ್ಲಿ ಒಮ್ಮೆ ಭಜನೆ ಮಾಡಬೇಕು ಎಂದು ಆಗಾಗ್ಗೆ ಹೇಳುತ್ತಿದ್ದರು. ಚಿಕ್ಕ ಮನೆ ಎಂದು ಮುಂದೂಡಿದ್ದ ಮತಿಘಟ್ಟ ಕೃಷ್ಣಮೂರ್ತಿ ಅವರು ರಾಜಮಹಲ್ ಬಡಾವಣೆಗೆ ಬಂದ ನಂತರ ಒಮ್ಮೆ ಭಜನೆ ಕಾರ್ಯಕ್ರಮ ಇಡಿಸಲು ನಿರ್ಧರಿಸಿದರು.

ಸಾಧಾರಣವಾಗಿ ಸ್ವಾಮೀಜಿಯವರ ಭಜನೆ ಕಾರ್ಯಕ್ರಮ ಇಟ್ಟಾಗ ಆ ಮನೆಯವರು ಸ್ವಾಮೀಜಿಗೆ ಪೂರ್ಣ ಕುಂಭ ಸ್ವಾಗತ, ಪಾದಪೂಜೆ ಮಾಡುತ್ತಿದ್ದರು. ಪಾದಪೂಜೆಯ ನಂತರ ತಮ್ಮ ಕೈಲಾದಷ್ಟು ಹಣವನ್ನು ಆಶ್ರಮಕ್ಕಾಗಿ ಸ್ವಾಮೀಜಿಗೆ ಕೊಡುತ್ತಿದ್ದರು. ಇದು ಸಂಪ್ರದಾಯವಾಗಿ ಬೆಳೆದು ಬಂದಿತ್ತು. ಮತಿಘಟ್ಟ ಕೃಷ್ಣಮೂರ್ತಿ ಅವರ ಮಕ್ಕಳು ಕಣ್ಣಾರೆ ಕಂಡಿದ್ದರು. ಅದೇ ರೀತಿ ಸ್ವಾಮೀಜಿ ಮನೆಗೆ ಬಂದಾಗ ನಡೆಯಬೇಕೆಂದು ಕೆಲವು ಮಕ್ಕಳು ಹೇಳಿದರು. ಆದರೆ ಮತಿಘಟ್ಟ ಕೃಷ್ಣಮೂರ್ತಿ ಸ್ವಾಮೀಜಿಯವರ ಸ್ನೇಹಿತರಾಗಿ ಬರಬೇಕೆಂದೂ ವ್ಯಕ್ತಿಪೂಜೆ (ಪಾದಪೂಜೆ) ತಮಗೆ ಇಷ್ಟವಿಲ್ಲವೆಂದೂ ಖಂಡಿತವಾಗಿ ಹೇಳಿದರು. ಮತಿಘಟ್ಟ ಕೃಷ್ಣಮೂರ್ತಿ ಅವರ ಇಷ್ಟದಂತೆ ಸ್ವಾಮೀಜಿಯವರನ್ನು ಸ್ವಾಗತಿಸಿದಾಗ ಹೆಚ್ಚಾಗಿ ಸಂತೋಷಪಟ್ಟಿದ್ದರು. ಸ್ವಾಮೀಜಿ, ಮತಿಘಟ್ಟ ಕೃಷ್ಣಮೂರ್ತಿ ಅವರ ಧ್ಯೇಯ – ಧೋರಣೆಗಳನ್ನು ಮೆಚ್ಚಿದರು. ಮನೆಯ ಅಕ್ಕ – ಪಕ್ಕದವರನ್ನು ಸ್ನೇಹಿತರನ್ನೂ ಆಹ್ವಾನಿಸಿದರು. ಮತಿಘಟ್ಟ ಕೃಷ್ಣಮೂರ್ತಿ ಮನೆಯವರು ಅಂದು ಸ್ವಾಮೀಜಿಯವರ ಶಿಷ್ಯರೂ ನೆಂಟರೂ ಸೇರಿ ೧೫೦ ಜನರಾಗಿದ್ದರು. ಎಲ್ಲರಿಗೂ ಒಬ್ಬಟ್ಟಿನ ಊಟದ ಸಮಾರಾಧನೆ ಆಯಿತು. ಅದಕ್ಕಿಂತಲೂ ಹೆಚ್ಚಾಗಿ ಭಕ್ತಿಗೀತೆಗಳ ರಸದೌತಣವಾಗಿತ್ತು. ಸ್ವಾಮೀಜಿಯವರು ತಮ್ಮ ಶಿಷ್ಯರೊಂದಿಗೆ ಎರಡು ಗಂಟೆಗಳ ಕಾಲ ಹಾಡಿ ಸಹೃದಯರಾದ, ಮತಿಘಟ್ಟ ಕೃಷ್ಣಮೂರ್ತಿ ಅವರ ಮನೆಗೆ ಮತ್ತೊಮ್ಮೆ ಬರುವ ಆಶಯವನ್ನು ವ್ಯಕ್ತಪಡಿಸಿದರು. ಆ ಸುಯೋಗ ಮತ್ತೆ ಬರಲೇ ಇಲ್ಲ.

ಮಕ್ಕಳು ಶಾಲೆಗೆ ಹೋಗಿ ಮನೆಗೆ ಬಂದರೆ ಬ್ರಾಹ್ಮಣ ವರ್ಗದಲ್ಲಿ ಆ ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದ ಕಾಲವದು. ಅಂತಹ ಕಾಲದಲ್ಲಿ ಬ್ರಾಹ್ಮಣರಾಗಿ ಹೀಗೆ ಎಲ್ಲ ಜಾತಿ ವರ್ಗಗಳ ಮನೆಗಳಿಗೆ ಹೋಗುವುದು, ಅಲ್ಲಿ ಊಟ ಮಾಡುವುದು, ಉಳಿದುಕೊಳ್ಳುವುದು, ಮಡಿವಂತ ಬ್ರಾಹ್ಮಣರಿಗೆ ಬಂಧುಗಳಿಗೆ ಇರುಸು – ಮುರುಸಾಯಿತು. ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಆಚಾರ ಬಿಟ್ಟವರೆಂದು ದೂರಿದರು. ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ಹೇಳಿದರೂ ಕೂಡ. ಜನಪದ ಹಾಡು ಇದ್ದುದೇ ಒಕ್ಕಲಿಗರ, ಹರಿಜನರ ಮನೆಗಳಲ್ಲಿ, ಹಾಗಾಗಿ ಹಾಡಿನ ಸಂಗ್ರಹಕ್ಕಾಗಿ

ಯಾವ ನಿಂದನೆಯನ್ನು ಸಹಿಸಲು ಸಿದ್ಧರಿದ್ದರು. ಮತಿಘಟ್ಟ ಕೃಷ್ಣಮೂರ್ತಿ ಮಡಿವಂತರ ಆಪಾದನೆಗಳಿಗೆ ಕಿವಿ ಕೊಡದೆ ಅಂತಹವರನ್ನು ಎದುರಿಸುತ್ತ ತಾವು ಸಂಗ್ರಹಿಸಿದ ಹಾಡುಗಳನ್ನು ಅವರಿಗೆ ಹಾಡಿ ತೋರಿಸಿ, ವಿದ್ಯೆಯಲ್ಲಿ ಮೇಲು ಕೀಳಿಲ್ಲ ಎಂದು ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಇವರ ವಾದಕ್ಕೆ ಎಲ್ಲರೂ ತಲೆಬಾಗಲೇ ಬೇಕಾಗುತ್ತಿತ್ತು.

ಮತಿಘಟ್ಟ ಹಾಗೂ ಸುತ್ತಮುತ್ತಲ ಗ್ರಾಮದವರು ಮಲ್ಲೇಶ ದೇವರ ದೇವಸ್ಥಾನದ ಜೀರ್ಣೋದ್ಧಾರದ ನಂತರ ಕಳಸ ಸ್ಥಾಪನೆ, ಕಾರ್ಯಕ್ರಮ ಇಟ್ಟುಕೊಂಡಿದ್ದರು. ಮೂರು ದಿನದ ಕಾರ್ಯಕ್ರಮದಲ್ಲಿ ಸಿಡಿ ಆಡುವುದು, ಕೊಂಡ ಹಾಯುವುದು, ಕಳಸ ಸ್ಥಾಪನೆ – ತೆಪ್ಪೋತ್ಸವ, ಬಯಲಾಟ – ಇತ್ಯಾದಿ ಕಾರ್ಯಕ್ರಮಗಳು ಏರ್ಪಟ್ಟಿದ್ದವು. ಈ ಸಂದರ್ಭದಲ್ಲಿ ತಮ್ಮ ಊರಿನ ಹಿರಿಯ ಹಾಗೂ ಪ್ರಸಿದ್ಧ ಸಾಹಿತಿ ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ಸನ್ಮಾನದ ಕಾರ್ಯಕ್ರಮವೂ ಇತ್ತು.

'ಹಿತ್ತಲಗಿಡಮದ್ದಲ್ಲ' ಎಂಬ ನುಡಿಯನ್ನು ಸುಳ್ಳುಮಾಡಿ ಸ್ವಗ್ರಾಮದಲ್ಲಿ ಸನ್ಮಾನಿಸಲು ಕರೆದಾಗ ಮತಿಘಟ್ಟ ಕೃಷ್ಣಮೂರ್ತಿಯವರಿಗೆ ಸ್ವರ್ಗಕ್ಕೆ ಮೂರೇ ಗೇಣು. ಮುತ್ತುರಾಮಸ್ವಾಮಿಯವರ ಮಗ ಶಿವಸ್ವಾಮಿಯ ಮನೆಯಲ್ಲಿ ತಂಗಿದರು. ಹಳ್ಳಿಯಲ್ಲಿ ಈಗಲೂ ಧರ್ಮ ಜಾತಿ ಇವುಗಳ ಕಟ್ಟುಪಾಡುಗಳಿವೆ. ಮತಿಘಟ್ಟ ಕೃಷ್ಣಮೂರ್ತಿಯವರನ್ನು ಕಾಣಲು ಬಂದವರು ಹಲವರು. ಅವರಲ್ಲಿ ಎಲ್ಲಾ ವರ್ಗದ ಜನರೂ ಇದ್ದರು. ಬಂದ ಜನರನ್ನು ಪಡಸಾಲೆ ಒಳಗೆ ಬರಲು ಹೇಳುತ್ತಿದ್ದರು. ಅವರು ಬರಲು ಹಿಂದು ಮುಂದು ನೋಡಿದಾಗ ಬಲವಂತವಾಗಿ ಕರೆದು ಛೇರ್ ಮೇಲೆ ಕುಳಿತುಕೊಳ್ಳಲು ಹೇಳುತ್ತಿದ್ದರು. ಅಭಿಮಾನದಿಂದ ಅವರ ತಂದೆ – ತಾಯಿ ಬಗ್ಗೆ ಕೇಳಿ ಎಲ್ಲವನ್ನು ವಿಚಾರಿಸುತ್ತಿದ್ದರು. ತಮ್ಮ ಹಾಗೂ ಅವರ ಸ್ನೇಹದ ಬಗ್ಗೆ ವಿವರಿಸುತ್ತಿದ್ದರು. ಸ್ನೇಹಿತರ ಕೈ ಕುಲುಕಿ ಬಾಲ್ಯದ ನೆನಪಿಗೆ ಜಾರುತ್ತಿದ್ದರು ಮತಿಘಟ್ಟ ಕೃಷ್ಣಮೂರ್ತಿ. ಕೊಂಡ ಹಾಯುವುದು, ಕಳಸ ಸ್ಥಾಪನೆ, ಊರ ಊಟ, ಸಿಡಿ ಇತ್ಯಾದಿ ಎಲ್ಲಾ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿತು. ಮಧ್ಯಾಹ್ನದ ಹೊತ್ತಿಗೆ ಅಲ್ಲಲ್ಲಿ ಗುಸುಗುಸು – ಪಿಸುಪಿಸು ಶುರುವಾಯಿತು.

ಹರಿಜನ ಬಾಲಕನೊಬ್ಬ ದೇವಸ್ಥಾನದ ಒಳಗೆ ಹೋದ ಎಂದು ಹತ್ತಾರು ಹಳ್ಳಿಯ ಮುಖಂಡರು ಕೋಪದಿಂದ ಕುದಿದರು. ಈ ವಿಷಯ ತಿಳಿದ ಮತಿಘಟ್ಟ ಕೃಷ್ಣಮೂರ್ತಿ ಹರಿಜನ ಕೇರಿಗೆ ಹೋಗಿ ನೋಡಿ ಸಮಾಧಾನ ಪಡಿಸಲು ಹೊರಟರು. ಮನೆಯವರು ಅವರನ್ನು ತಡೆದು ಎಲ್ಲರನ್ನು ಅಲ್ಲಿಗೇ ಕರೆಸುವುದಾಗಿ ಹೇಳಿ, ಮುಖಂಡರನ್ನು ಕರೆಸಿದರು. ಮತಿಘಟ್ಟ ಕೃಷ್ಣಮೂರ್ತಿ ಹೇಳಿದ್ದು ಇಷ್ಟೇ "ಆ ಹುಡುಗ ದೇವಸ್ಥಾನಕ್ಕೆ

ಹೋದದ್ದು ಅಪರಾಧವಲ್ಲ, ದೇವರ ಮುಂದೆ ಎಲ್ಲರೂ ಸಮಾನರು. ನೀವು ಒಗ್ಗಟ್ಟಾಗಿ ಸಮಾಧಾನವಾಗಿಲ್ಲದಿದ್ದರೆ, ನನಗೆ ಸನ್ಮಾನವೇ ಬೇಡ." ಈ ಮಾತನ್ನು ಕೇಳಿದ ಎಲ್ಲಾ ಮುಖಂಡರು ಸುಮ್ಮನಾದರು. ಸಂಜೆ – ಕಹಳೆ – ಕೊಂಬು ಸಮೇತ ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಮನೆಯವರನ್ನು ಕರೆದುಕೊಂಡು ಹೋದರು. ವೇದಿಕೆಯ ಮೇಲೆ ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಕರೆತಂದು ಸನ್ಮಾನ ಮಾಡಿದರು. ಭಾಷಣ ಮಾಡುತ್ತ ಮತಿಘಟ್ಟ ಕೃಷ್ಣಮೂರ್ತಿ ನನಗೆ ಸಂದ ಎಲ್ಲಾ ಸನ್ಮಾನ ಹಾಗೂ ಗೌರವಕ್ಕಿಂತ ಈ ಸನ್ಮಾನ ಹುಟ್ಟೂರಿನ ನಮ್ಮವರು ಮಾಡಿದ ಸನ್ಮಾನ ಬಹಳಷ್ಟು ದೊಡ್ಡದು. 'ಎಲ್ಲಕ್ಕಿಂತ ಮಿಗಿಲಾದ ಸನ್ಮಾನ' ಎಂದು ಹೇಳಿದರು. ನಂತರ ಬೆಳಗಿನವರೆಗೂ ಪೌರಾಣಿಕ ಕಥೆಯುಳ್ಳ ಬಯಲಾಟ ನಡೆದು ಸಂತಸದಿಂದ ಮುಕ್ತಾಯವಾಯಿತು.

ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ 'ಸಾಹಿತಿ ಸುದಿನ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಸಾಹಿತಿಗಳ ಹುಟ್ಟು ಹಬ್ಬದಂದು ಅವರನ್ನು ಕರೆದು ಸನ್ಮಾನಿಸಿ ಅವರ ಸಾಧನೆಗಳನ್ನು ಕೊಂಡಾಡುವುದು. ಅವರ ಪುಸ್ತಕಗಳ, ಲೇಖನಗಳ ಬಗ್ಗೆ ಇತರರಿಗೆ ತಿಳಿಸುವುದು. ಸಾಹಿತ್ಯ ಸಂವಾದ ಕಾರ್ಯಕ್ರಮಗಳನ್ನು ಒಳಗೊಂಡ ಕಾರ್ಯಕ್ರಮ. ಮತಿಘಟ್ಟ ಕೃಷ್ಣಮೂರ್ತಿ ಅವರ ೯೦ನೇ ಹುಟ್ಟುಹಬ್ಬದ ಪ್ರಯುಕ್ತ ೧೨.೦೭.೨೦೦೨ರಂದು ಮತಿಘಟ್ಟ ಕೃಷ್ಣಮೂರ್ತಿ ಅವರ ಸಾಧನೆಗಳ ಬಗ್ಗೆ ಭಾಷಣಗಳನ್ನು ಏರ್ಪಡಿಸಿ ಆಹ್ವಾನಿಸಿದರು. ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ಜನರೊಡನೆ ಬೆರೆಯುವುದು, ಮಾತನಾಡುವುದು ಬಹಳ ಇಷ್ಟವಾದ ವಿಷಯವಾಗಿತ್ತು. ಅಂದು ಬಹಳ ಉತ್ಸಾಹದಿಂದ ಬಂದಿದ್ದರು ಮತಿಘಟ್ಟ ಕೃಷ್ಣಮೂರ್ತಿ. ದಿನಪತ್ರಿಕೆಯಿಂದ ವಿಷಯ ತಿಳಿದ ಬಂಧು – ಬಾಂಧವರು, ಮತಿಘಟ್ಟ ಕೃಷ್ಣಮೂರ್ತಿ ಅವರ ಸ್ನೇಹಿತರು, ಗಾಯಕರು, ಮತಿಘಟ್ಟ ಕೃಷ್ಣಮೂರ್ತಿ ಅವರ ಮಕ್ಕಳ ಸ್ನೇಹಿತರು ಹಾಗೂ ಅಭಿಮಾನಿಗಳು ಬಂದಿದ್ದರು. ಪರಿಷತ್ ತುಂಬಿ ಹೊರಗೆಲ್ಲಾ ಜನ ನಿಂತಿದ್ದರು. 'ಸಾಹಿತಿ ಸುದಿನ' ಕಾರ್ಯಕ್ರಮದಲ್ಲಿ ಇಂಥ ದೃಶ್ಯ ಕಂಡದ್ದು ಇದೇ ಮೊದಲೆಂದೂ, ಇದು ನಿಮ್ಮ ಮನೆಯ ಕಾರ್ಯಕ್ರಮದಂತೆ ಆಗಿದೆ ಎಂದೂ ಕಾರ್ಯಕರ್ತರೆಲ್ಲಾ ಸಂತೋಷ ಪಟ್ಟರು. ಹೂವಿನ ಹಾರ, ಹೂಗುಚ್ಛ – ಸಿಹಿಯೊಂದಿಗೆ ಅಭಿನಂದನೆಗಳ ಸುರಿಮಳೆಯೇ ಆಯಿತು. ಮಗುವಿನಂತೆ ಸಂತಸ ಪಟ್ಟಿದ್ದರು ಮತಿಘಟ್ಟ ಕೃಷ್ಣಮೂರ್ತಿ. ಮುಂದೆ ಅವರ ಹುಟ್ಟುಹಬ್ಬವನ್ನು ವಿಶಿಷ್ಟವಾಗಿ ಆಚರಿಸಿಕೊಂಡು ಬಂದರು ಮತಿಘಟ್ಟ ಕೃಷ್ಣಮೂರ್ತಿಯವರ ಮನೆಯವರು.

ಮತಿಘಟ್ಟ ಕೃಷ್ಣಮೂರ್ತಿ ಅವರು ತಮ್ಮ ಜನಪದ ಸಾಹಿತ್ಯ ಸಂಗ್ರಹ ಕಾರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಮನೆಗೆ ಆಗಾಗ್ಗೆ ಲಲಿತಮ್ಮನವರ ತಂಗಿ

ಶ್ರೀಮತಿ ಸೀತಮ್ಮ ಬಂದು ೩-೪ ತಿಂಗಳು ಇರುತ್ತಿದ್ದರು. ನೆಂಟರಾದ ಶ್ರೀಮತಿ ಭಾಗೀರಥಮ್ಮ ಬರುತ್ತಿದ್ದರು ಹಾಗೂ ತಮ್ಮ ಡಾಕ್ಟರ್ ಓದಲು ಬೆಂಗಳೂರಿಗೆ ಬಂದು ರೂಮ್ ಮಾಡಿಕೊಂಡಿದ್ದ. ಊಟಕ್ಕೆ ಮತಿಘಟ್ಟ ಕೃಷ್ಣಮೂರ್ತಿ ಅವರ ಮನೆಗೆ ಬರುತ್ತಿದ್ದ. ತಂದೆ ಮನೆಯಲ್ಲಿ ಇಲ್ಲದಿದ್ದಾಗ ದೊಡ್ಡ ಮಗಳು ಉಮ ೫-೬ ವರ್ಷದವಳು ಹತ್ತಿರದಲ್ಲೇ ಇದ್ದ ದಿನಸಿ ಅಂಗಡಿಯಿಂದ ಸಾಮಾನು ತರುತ್ತಿದ್ದಳು. ಮತಿಘಟ್ಟ ಕೃಷ್ಣಮೂರ್ತಿ ಸಂಗ್ರಹಕ್ಕೆ ಹೊರಟಾಗ ಲಲಿತಮ್ಮನ ದೊಡ್ಡಪ್ಪ ಶಂಕರಯ್ಯನವರ ಮಕ್ಕಳು ಒಬ್ಬರಲ್ಲಾ ಒಬ್ಬರು ರಾತ್ರಿ ಬಂದು ಮಲಗಿಕೊಳ್ಳುತ್ತಿದ್ದರು.

೧೯೫೮ರಲ್ಲಿ ಹಾಸನದಿಂದ ಬೆಂಗಳೂರಿಗೆ ಬಂದು ಗುಟ್ಟಹಳ್ಳಿಯಲ್ಲಿ ಮನೆ ಮಾಡಿದಾಗ, ಉಮ ಎಸ್.ಎಸ್.ಎಲ್.ಸಿ ಓದುತ್ತಿದ್ದಳು. ಎಸ್.ಎಸ್.ಎಲ್.ಸಿ. ಮುಗಿಸಿ ಕಾಲೇಜಿಗೆ ಸೇರಿದ ಅವಳು ಮನೆಯ ಪರಿಸ್ಥಿತಿ ಗಮನಿಸಿ ಓದುವುದನ್ನು ಬಿಟ್ಟು ತಾನು ಪ್ರಾಥಮಿಕ ಶಾಲೆ ಓದಿದ ಶ್ರೀ ಸರಸ್ವತಿ ವಿದ್ಯಾ ಮಂದಿರದಲ್ಲಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದಳು.

ಗೃಹವಿಜ್ಞಾನ ಪಧವೀದರೆಯಾದ ಅವಳು ಬೆಂಗಳೂರು ಹಾಲಿನ ಡೈರಿಯಲ್ಲಿ ಸೇರಿದಳು. ಎರಡು ವರ್ಷ ಅಲ್ಲಿ ಕೆಲಸ ಮಾಡಿ ಏಜೀಸ್ ಆಫೀಸಿಗೆ ಸೇರಿದಳು. ಆಫೀಸ್‌ನ ಸೊಸೈಟಿಯಿಂದ ಸೈಟು ಕೊಂಡು ಮನೆ ಕಟ್ಟಿ ತಂದೆ ತಾಯಿ ತಮ್ಮನನ್ನು ಮನೆಗೆ ಕರೆತಂದಳು. ಗುಟ್ಟಹಳ್ಳಿಯಲ್ಲಿ ಇದ್ದಾಗ ತನ್ನ ಕಡೆಗಾಲವನ್ನು ಮರಿಯ ಮನೆಯಲ್ಲಿ ಇರಬೇಕೆಂದು ಆಸೆಪಟ್ಟ ಚೆನ್ನಮ್ಮನವರನ್ನು ಮತಿಘಟ್ಟದಿಂದ ಕರೆತಂದಳು.

ಒಂದು ವರ್ಷದವರೆಗೆ ಬದುಕಿದ್ದರು ಚನ್ನಮ್ಮ, ಮರಣದ ಒಂದು ತಿಂಗಳ ಮುಂಚೆ ವಿ.ಎಲ್. ಗುಂಡಪ್ಪನವರ ಮನೆಗೆ ಹೋಗಿ ಒಂದು ತಿಂಗಳು ಇದ್ದರು ಚನ್ನಮ್ಮ. ಮತಿಘಟ್ಟ ಕೃಷ್ಣಮೂರ್ತಿ ಅವರ ಸಂಗ್ರಹಕ್ಕೆ ಪ್ರಕಟಣೆಗೆ ಹಣ ಒದಗಿಸಿದಳು. ಉಮ ಅಲ್ಲಿಯೇ ಮಹಡಿ ಮನೆಯಲ್ಲಿದ್ದಾಗ ತನ್ನ ಏಳು ಜನ ತಂಗಿಯರ ಮದುವೆ ಜವಾಬ್ದಾರಿಯನ್ನು ವಹಿಸಿಕೊಂಡು, ಅಚ್ಚುಕಟ್ಟಾಗಿ ಮದುವೆ ಮಾಡಿದಳು. ಕಡೆಗಾಲದವರೆವಿಗೂ ಮತಿಘಟ್ಟ ಕೃಷ್ಣಮೂರ್ತಿ ದಂಪತಿಗಳ ಕಷ್ಟ ಸುಖದಲ್ಲಿ ಭಾಗಿಯಾಗಿ ಅವರು ನೆಮ್ಮದಿಯಿಂದ ಇರುವಂತೆ ನೋಡಿಕೊಂಡಳು. ತಂಗಿಯರು, ಭಾವಂದಿರು (ಹಾಗೂ ಅವರ ಅತ್ತೆ ಮಾವ) ಲಲಿತಮ್ಮ ಹಾಗೂ ಮತಿಘಟ್ಟ ಕೃಷ್ಣಮೂರ್ತಿಗಳ ಬಂಧುಗಳನ್ನು ಆದರದಿಂದ ಕಂಡಳು ಉಮಾದೇವಿ. ಈಗಲೂ ಸಹ ಹೆಣ್ಣು ಮಕ್ಕಳು ಭಾವಂದಿರನ್ನು ಹಬ್ಬ ಹರಿದಿನಗಳಲ್ಲಿ ಮನೆಗೆ ಕರೆದು ಆದರಿಸುತ್ತಾಳೆ. ಅವರ ಕಷ್ಟ ಸುಖದಲ್ಲಿ ಭಾಗಿಯಾಗಿ ಮನೆಯ ಹಿರಿಯಳಂತೆ ನೋಡಿಕೊಳ್ಳುತ್ತಿದ್ದಾಳೆ ಉಮಾ. ತನ್ನ ಕುಟುಂಬಕ್ಕಾಗಿ ಉಮಾ ಮಾಡಿದ ತ್ಯಾಗ ದೊಡ್ಡದು.

ಮತಿಘಟ್ಟ ಕೃಷ್ಣಮೂರ್ತಿ ಅವರ ಜನಪದ ಸಾಹಿತ್ಯ ಸೇವೆ ಮಾಡಲು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಬೆಂಬಲವಾಗಿ ನಿಂತವಳು ಎಂ.ಕೆ. ಉಮಾದೇವಿ. ಎರಡನೆ ಮಗಳು ಉಷಾ ಬನವಾಸಿ ಹಾಗೂ ಮತಿಘಟ್ಟ ಕೃಷ್ಣಮೂರ್ತಿ ಅವರ ಕೆಲವು ಮಕ್ಕಳು. ಅವರ ಸ್ನೇಹಿತರು ಪ್ರವಾಸಕ್ಕೆ ಹೊರಟ ಬೆಳಗ್ಗೆ ಬೆಂಕಿಯ ಅಪಘಾತದಿಂದ ಮಕ್ಕಳು ಪೃಥ್ವಿ – ಪ್ರಕೃತಿ ಹಾಗೂ ಗಂಡನನ್ನು ಅಗಲಿದಳು ಉಷಾ. ಮಗಳ ಮರಣದಿಂದ ಹೆಚ್ಚು ನೊಂದವರು ಮತಿಘಟ್ಟ ಕೃಷ್ಣಮೂರ್ತಿ ದಂಪತಿಗಳು.

ಅವರ ಹಿಂದೆಯೇ ೨–೩ ವರ್ಷದ ಅಂತರದಲ್ಲಿ ಅಳಿಯ ನಾರಾಯಣಸ್ವಾಮಿ ಬನವಾಸಿ ಹೃದಯಾಘಾತದಿಂದ ಮರಣಹೊಂದಿದರು. ಮೊಮ್ಮಕ್ಕಳನ್ನು ಮನೆಗೆ ಬರಲು ತಿಳಿಸಿದರು. ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಉಮ. ಸ್ವತಂತ್ರ ಮನೋಭಾವದ ಮೊಮ್ಮಕ್ಕಳು ಬೇರೆ ಮನೆ ಮಾಡಿಕೊಂಡಿದ್ದರು. ೧೯೯೪ರಲ್ಲಿ ೩ನೇ ಅಳಿಯ ಜಿ.ಎನ್. ಮೂರ್ತಿ ನಿಮೋನಿಯಾ ಆಗಿ ಚೇತರಿಸಿಕೊಂಡು ಮನೆಯಲ್ಲಿ ಹೃದಯಾಘಾತದಿಂದ ಮರಣ ಹೊಂದಿದರು. ತಮಗಿಂಥ ಚಿಕ್ಕವರ ಮರಣ ಮತಿಘಟ್ಟ ಕೃಷ್ಣಮೂರ್ತಿ ದಂಪತಿಗಳು ಕಡೆಯವರಿಗೆ ಮರೆಯಲಾಗಲಿಲ್ಲ.

## ಸಿನಿಮಾ ಸಂಪರ್ಕ

ಮತಿಘಟ್ಟ ಕೃಷ್ಣಮೂರ್ತಿ ವಿಶ್ವೇಶ್ವರಪುರಂ ಮಹಡಿ ಮೇಲೆ ಇದ್ದಾಗ ಶ್ರೀ ಹೆಚ್.ಎಲ್.ಎನ್. ಸಿಂಹ ಮತಿಘಟ್ಟ ಕೃಷ್ಣಮೂರ್ತಿ ಮನೆಗೆ ಬರುತ್ತಿದ್ದರು. ಇವರೊಂದಿಗೆ ಶ್ರೀ ಉದಯಕುಮಾರ್ ಸಹ ಬರುತ್ತಿದ್ದರು. ಇಬ್ಬರಿಗೂ ಊಟ, ಎಲೆ, ಅಡಿಕೆ ಸಮಾರಾಧನೆ ನಡೆಯುತ್ತಿತ್ತು. ಅಂದಿನ ಸಿನಿಮಾ – ನಾಟಕದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮತಿಘಟ್ಟ ಕೃಷ್ಣಮೂರ್ತಿ ಅವರು ಸಿಂಹ ಅವರ ಜೊತೆ ೩–೪ ದಿನ ನಾಟಕ ಕಂಪನಿಯಲ್ಲೇ ನಾಟಕ ರಚಿಸಲು ಸಹಾಯ ಮಾಡುತ್ತಿದ್ದರು.

ಗುಟ್ಟಹಳ್ಳಿಗೆ ಬಂದ ನಂತರ ಅಲ್ಲೆ ಇದ್ದ ಶ್ರೀ ಅರಸುಕುಮಾರ್ ಟಿ. ಉದಯಶಂಕರ್, ರತ್ನಾಕರ, ದ್ವಾರಕೀಶ್ ಮುಂತಾದವರ ಪರಿಚಯವಾಯಿತು. ದ್ವಾರಕೀಶ್ ಅವರು ಮರುಗಿ ಕಾದಂಬರಿಯನ್ನು ಸಿನಿಮಾ ಮಾಡುವುದಾಗಿ, (೧೯೬೦–೬೨) ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ೫೦೦ರೂ. ಅಡ್ವಾನ್ಸ್ ಕೊಟ್ಟಿದ್ದರು. ಚಾಮರಾಜಪೇಟೆಯಲ್ಲಿ ಶ್ರೀ ಹೊನ್ನಪ್ಪ ಭಾಗವತರ ಮನೆಯಿತ್ತು ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಭಾಗವತರು ಒಳ್ಳೆಯ ಸ್ನೇಹಿತರು. ತಮ್ಮ ಮಹಾಕವಿ ಕಾಳಿದಾಸನ ಚಿತ್ರಕ್ಕೆ ಚೆಲುವಯ್ಯ ಚೆಲುವೊ ಹಾಡನ್ನು ಬಳಸಿಕೊಂಡು ಸಿನಿಮಾದ ಮೂಲಕ ಜನಪದಗೀತೆ ಪ್ರಸಾರವಾಗಲು ಕಾರಣರಾದರು. ನಂತರ ರಾಜ್‌ಕುಮಾರ್ ಅಣ್ಣ ವರದಣ್ಣನವರು, ಜನಪದ ಮೂಲ ದಾಟಿಗಾಗಿ ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಅವರ ಮಕ್ಕಳನ್ನು ಹೋಟೆಲ್‌ನಲ್ಲಿ

ಭೇಟಿ ಮಾಡಿ ಧ್ವನಿ ಸುರುಳಿ ಮಾಡಿಕೊಂಡರು. ಬಂಗಾರದ ಮನುಷ್ಯ, ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ಜನಪದಗೀತೆಯ ಛಾಯೆಯನ್ನು ಕಾಣಬಹುದು. ಸೇವಂತಿ, ಸೇವಂತಿ ಚಿತ್ರದಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಅವರ ನಿಂಬಿಯಾ, ಬಳೆಗಾರ, ಮಾಯದಂಥ ಮಳೆ ಮುಂತಾದ ಹಾಡುಗಳನ್ನು ಬಳಸಿಕೊಂಡಿದ್ದಾರೆ.

ಎ.ಜಿ.ಎಸ್. ಬಡಾವನೆಯಲ್ಲಿ ಇವರ ಮನೆಯ ಪಕ್ಕದ ರೋಡಿನಲ್ಲಿದ್ದ ಬಿ. ಪದ್ಮನಾಭ್ ಎಂಬುವರು ಎ.ಜಿ.ಎಸ್. ಆಫೀಸಿನಲ್ಲಿ ಆಫೀಸರ್ ಆಗಿ ರಿಟೈರ್ಡ್ ಆದವರು. ದಿನಕ್ಕೊಮ್ಮೆ ಬಂದು ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದರು. ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಅಪ್ಪಾಜಿ ಎಂದೇ ಕರೆಯುತ್ತಿದ್ದರು. ಅವರು ಮತಿಘಟ್ಟ ಕೃಷ್ಣಮೂರ್ತಿ ಅವರ ಬಹಳಷ್ಟು ಬರಹಗಳು, ಕಥೆ, ಕಾದಂಬರಿಗಳನ್ನು ಭಾಷಾಂತರಿಸಿದರು. ಆಂಧ್ರದಲ್ಲಿ ಪ್ರಕಟವಾಗುತ್ತಿದ್ದ 'ವಿಪುಲ' ಎಂಬ ತೆಲುಗು ಮಾಸಿಕ ಕಥಾಪುಸ್ತಕದಲ್ಲಿ 'ಸಿದ್ಧವನಹಳ್ಳಿ ಸೋದರಿಯರು' ಕಥೆಯನ್ನು ಪ್ರಕಟವಾಗಲು ಕಾರಣರಾದರು.

ದಾವಣಗೆರೆಯಿಂದ ಒಡೆಯರ್ (ಎಂ.ಪಿ) ಅವರ ಮಗ ಶ್ರೀ ಉದಯಶಂಕರ ಅವರು ಮತಿಘಟ್ಟ ಕೃಷ್ಣಮೂರ್ತಿ ಅವರ ಪಕ್ಕದ ಮನೆಯಲ್ಲಿದ್ದರು. ಪ್ಲಾಸ್ಟಿಕ್ ಸರ್ಜರಿ ಡಾಕ್ಟರ್ ಸ್ವಾಮೀಜಿಯವರು ಬಂದಾಗ ಅವರ ಮನೆಗೂ ಹೋಗಿ ಆಹ್ವಾನಿಸಿ ಬಂದಿದ್ದರು. ಮತಿಘಟ್ಟ ಕೃಷ್ಣಮೂರ್ತಿ ಮಗಳು ಉಮ ಮನೆಯಲ್ಲಿದ್ದ ಒಬ್ಬ ಹುಡುಗನನ್ನು ಕಳುಹಿಸಿದ್ದರು. ಉದಯಶಂಕರ್. ಆ ಹುಡುಗ ಮತಿಘಟ್ಟ ಕೃಷ್ಣಮೂರ್ತಿ ಅವರ ಬಗ್ಗೆ ಮನೆಯವರ ಬಗ್ಗೆ ಹೇಳಿದಾಗ ಎರಡು ದಿನಗಳ ನಂತರ ಹೆಂಡತಿ ಸುನಂದ ಹಾಗೂ ಮಗಳ ಜೊತೆ ಬಂದ ಡಾಕ್ಟರ್ ಮತಿಘಟ್ಟ ಕೃಷ್ಣಮೂರ್ತಿ ದಂಪತಿಗಳನ್ನು ಪರಿಚಯ ಮಾಡಿಕೊಂಡರು. ಕಾಲಕ್ರಮೇಣ ಲಲಿತಮ್ಮನವರನ್ನು ತಮ್ಮ ತಾಯಿಯಂತೆ ಕಂಡು ಅಮ್ಮ ಎಂದೇ ಕೂಗುತ್ತಿದ್ದರು. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ಅವರನ್ನು ಲಲಿತಮ್ಮನೂ ಮಗನಂತೆ ಕಂಡರು. ಒಮ್ಮೆ ಡಾಕ್ಟರ್‌ನ ಹುಟ್ಟುಹಬ್ಬದಂದು, ಬಂದು ನಮಸ್ಕರಿಸಿದರು. ಡಾಕ್ಟರ್‌ರಿಗೆ ಲಲಿತಮ್ಮ ೧೦೦ರೂ ಕೊಟ್ಟರು. ಆಮೇಲೆ ಮನೆಯವರೆಲ್ಲಾ ಇಷ್ಟು ಶ್ರೀಮಂತರಿಗೆ ಹಣ ಕೊಡುವುದೇ ಎಂದು ಆಕ್ಷೇಪಿಸಿದರು. ಆದರೆ ಡಾಕ್ಟರ್ ಮನೆಯಲ್ಲಿ ಆ ನೂರು ರೂ. ತೋರಿಸಿ ಅಮ್ಮ ಕೊಟ್ಟರೆಂದು ಹೇಳಿದ್ದನ್ನು ಕೇಳಿ ಎಲ್ಲರೂ ಅಚ್ಚರಿಪಟ್ಟರು. ಲಲಿತಮ್ಮ ಹಾಗೂ ಕೃಷ್ಣಮೂರ್ತಿಗಳಿಗೆ ಖಾಯಿಲೆ ಬಂದ ಸಂದರ್ಭದಲ್ಲಿ ತಾವು ಭೇಟಿ ನೀಡುತ್ತಿದ್ದ ಆಸ್ಪತ್ರೆಯಲ್ಲಿ ಸೇರಿಸಲು ಸಹಾಯ ಮಾಡುತ್ತಿದ್ದರು. ಅಲ್ಲಿ ಲಿತಮ್ಮನವರನ್ನು, ತಮ್ಮ ತಾಯಿಯೆಂದೇ ಹೇಳಿಕೊಳ್ಳುತ್ತಿದ್ದು ಉತ್ತಮ ಶುಶ್ರೂಷೆ ಸಿಗುವಂತೆ ಮಾಡಿದ್ದರಲ್ಲದೆ ದಿನಕೊಮ್ಮೆ ಬಂದು ನೋಡಿಕೊಂಡು ಹೋಗುತ್ತಿದ್ದರು ಉದಯಶಂಕರ್ ಅವರು.

ತಮ್ಮ ಕೆಲಸದ ಒತ್ತಡದಲ್ಲೂ ಆಗಾಗ್ಗೆ ಮತಿಘಟ್ಟ ಕೃಷ್ಣಮೂರ್ತಿ ಅವರ ಮನೆಗೆ ಬಂದು ಎಲ್ಲರನ್ನೂ ವಿಚಾರಿಸುತ್ತಿದ್ದರು ಉದಯಶಂಕರ್ ದಂಪತಿಗಳು.

ಹಾಗೆಯೇ ಎಡಪಕ್ಕದಲ್ಲಿರುವ ಶ್ರೀ ಸುಬ್ಬರಾಜು ದಂಪತಿಗಳು ಹಾಗೂ ಮಗ ಸೊಸೆ ಲಲಿತಮ್ಮನವರು ಆಗಾಗ್ಗೆ ಆಸ್ಪತ್ರೆಗೆ ಹೋಗಬೇಕಾದಾಗ (ರಾತ್ರಿಯಲ್ಲೂ) ಬಂದು ಸಹಾಯ ಮಾಡುತ್ತಿದ್ದರು. ಈಗಲೂ ಒಳ್ಳೆಯ ಸ್ನೇಹಿತರಾಗಿದ್ದಾರೆ.

ಚಂದನ ಟಿ.ವಿ. ಹಾಗೂ ಈ ಟಿ.ವಿ. ಗಳಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಅವರ ಸಂದರ್ಶನದ ಕಾರ್ಯಕ್ರಮ ಪ್ರಸಾರವಾಗಿವೆ.

ರಾಜ್ಯೋತ್ಸವ ಪ್ರಶಸ್ತಿ ಬಂದ ಸಂದರ್ಭದಲ್ಲಿ ಸಂಸ್ಕೃತಿ ಇಲಾಖೆಯ ವತಿಯಿಂದ ಮತಿಘಟ್ಟ ಕೃಷ್ಣಮೂರ್ತಿ ಅವರ ಮನೆಗೆ ಬಂದು ಮತಿಘಟ್ಟ ಕೃಷ್ಣಮೂರ್ತಿ ಅವರ ಸಾಕ್ಷ್ಯಚಿತ್ರವನ್ನು ಚಿತ್ರಿಸಿಕೊಂಡಿದ್ದಾರೆ.

ನೆಮ್ಮದಿಯಿಂದಿದ್ದ ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಪತ್ನಿ ಲಲಿತಮ್ಮನವರ ಖಾಯಿಲೆ ನೆಮ್ಮದಿಗೆಡಿಸಿತು. ಮೂರು ವರ್ಷಗಳ ಕಾಲ ಹಾಸಿಗೆ ಮೇಲೆ ಮಲಗಿದ್ದ ಅವರಿಗೆ ಕೊನೆಯ ವರ್ಷದಲ್ಲಿ ಕ್ರಮೇಣ ಮಾತು ನಿಂತಿತು. ಮೂಕವೇದನೆ ಅನುಭವಿಸುತಿದ್ದ ಲಲಿತಮ್ಮನವರಿಗೆ ಪತಿ ಹಾಗೂ ಮಕ್ಕಳ ಸಾನ್ನಿಧ್ಯವೇ ಸಮಾಧಾನದ ವಿಷಯವಾಗಿತ್ತು. ಮಗಳು ಉಮ ಕೆಲಸಕ್ಕೆ ಹೋದಾಗ ಪೂರ್ಣ ಜವಾಬ್ದಾರಿ ಮತಿಘಟ್ಟ ಕೃಷ್ಣಮೂರ್ತಿ ಅವರದ್ದೆ. ಸ್ವಲ್ಪವೂ ಬೇಸರವಿಲ್ಲದೆ ತಮ್ಮ ಕರ್ತವ್ಯವೆಂಬಂತೆ ಸದಾಕಾಲ ಜಿಡದೆ ನೋಡಿಕೊಂಡರು ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಹಿರಿಯ ಮಗಳು ಉಮಾ. ಜನವರಿ ೧೮ರಂದು ಲಲಿತಮ್ಮ ತಮ್ಮ ೭೫ನೇ ವರ್ಷದಲ್ಲಿ ಸ್ವರ್ಗಸ್ಥರಾದರು.

ತಮ್ಮ ಮನೆಯ ತೋಟಕ್ಕೆ ಬರುತ್ತಿದ್ದ ಇಣಚಿ(ರಾಮ) ಕಾಗೆ(ಚಂಚು) ಮತ್ತೊಂದು ಪಕ್ಷಿ(ಕಂಚು) ಹಾಗೂ ಸಾಕುನಾಯಿ – ಮಿಂಚುಬಳ್ಳಿಗೆ ತಿಂಡಿ ಕೊಟ್ಟ ನಂತರವೇ ಮತಿಘಟ್ಟ ಕೃಷ್ಣಮೂರ್ತಿ ತಿಂಡಿ ತಿನ್ನುತ್ತಿದ್ದುದ್ದು.

ಬರವಣಿಗೆಗೆ ಹೆಚ್ಚು ಗಮನ ಕೊಟ್ಟು ಮೂರು ಕಾದಂಬರಿಗಳನ್ನು ರಚಿಸಿದರು. (ಅಡಾವುಡಿ, ಬಸವಣ್ಣನ ಬಾಲ್ಯ, ಪುಟ್ಟತಂಗಿ)

೯೩ ವರ್ಷವಾದರೂ ಯಾರ ಸಹಾಯವೂ ಇಲ್ಲದೆ ತಮ್ಮ ಕೆಲಸ ಮಾಡಿಕೊಂಡು ಆರೋಗ್ಯವಾಗಿದ್ದ ಮತಿಘಟ್ಟ ಕೃಷ್ಣಮೂರ್ತಿ ಜೂನ್ ೯ರಂದು ರಾತ್ರಿ ೧ ಗಂಟೆಗೆ ಬರವಣಿಗೆಯಲ್ಲಿ ನಿರತರಾದವರು ಹಾಗೆ ಕುಸಿದು ಕುಳಿತರು. ಜೂನ್ ಹತ್ತರಂದು ಆಸ್ಪತ್ರೆಗೆ (ರಾಜ್‌ಮಹಲ್ ವಿಲಾಸ್ ಆಸ್ಪತ್ರೆ) ಸೇರಿಸಿದಾಗ ವೈದ್ಯರು ಕಫದ ತೊಂದರೆ ಎಂದು ತಿಳಿಸಿ ಕಫ ತೆಗೆದು ವಿಶ್ರಾಂತಿ ಪಡೆಯಲು ಹೇಳಿ ಮನೆಗೆ ಕಳುಹಿಸಿದರು.

ಒಂದು ತಿಂಗಳಲ್ಲಿ ಆಗಾಗ್ಗೆ ಆಸ್ಪತ್ರೆಗೆ ಹೋಗಬೇಕಾಗಿ ಬಂತು ಆಸ್ಪತ್ರೆಯಲ್ಲಿ ನರ್ಸ್ ಡಾಕ್ಟರ್ ಎಲ್ಲರನ್ನೂ ಆತ್ಮೀಯವಾಗಿ ಮಾತನಾಡಿಸುತ್ತ ಸಂತೋಷವಾಗಿಯೇ

ಇರುತ್ತಿದ್ದರು. ಮತಿಘಟ್ಟ ಕೃಷ್ಣಮೂರ್ತಿ ಮನೆಗೆ ಬಂದು ಮಲಗಿದಾಗಲೂ, ಅವರ ಜ್ಞಾನವೆಲ್ಲಾ ಜನಪದ ಸಾಹಿತ್ಯ ಗೀತೆಗಳ ಬಗ್ಗೆ – ಉಪನ್ಯಾಸದ ಬಗ್ಗೆ ಇರುತ್ತಿತ್ತು. ಧರ್ಮ ಚರ್ಚೆಯೂ ಆಗುತ್ತಿತ್ತು. ಮಕ್ಕಳೆಲ್ಲಾ ಸಮಾಧಾನವಾಗಿ ಅವರು ಹೇಳುತ್ತಿದ್ದುದನ್ನು ಕೇಳುತ್ತಿದ್ದರು. ೨೦೦೬ ಜುಲೈ ೧೨ರಂದು ಮನೆಯವರೆಲ್ಲಾ ಸೇರಿ ಮತಿಘಟ್ಟ ಕೃಷ್ಣಮೂರ್ತಿ ಅವರ ಹುಟ್ಟುಹಬ್ಬ ಮಾಡಿ ಶುಭಾಶಯ ಕೋರಿದರು. ಮಧ್ಯಾಹ್ನ ೪ ಗಂಟೆಗೆ ಮತಿಘಟ್ಟ ಕೃಷ್ಣಮೂರ್ತಿ ಅವರ ಆರೋಗ್ಯದಲ್ಲಿ ಏರು–ಪೇರಾಯಿತು. ಮತ್ತೆ ಆಸ್ಪತ್ರೆಗೆ ದಾಖಲಾದರು. ಅಭಿಮಾನಿಯೊಬ್ಬರು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರಿಂದ ನೆಂಟರು, ಸ್ನೇಹಿತರು, ಅಭಿಮಾನಿಗಳು, ಜನಪದ ಗಾಯಕರ ದಂಡೇ ಬಂತು. ಆಸ್ಪತ್ರೆಯವರು ಬೆಳಗ್ಗೆ ೮ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೂ ಭೇಟಿಗೆ ಅವಕಾಶವಿತ್ತರು. ಬಿ.ಕೆ. ಸುಮಿತ್ರ ಅವರು ಬಂದು ನಾನು ತಮ್ಮಿಂದಲೇ ಪ್ರಸಿದ್ಧಿಗೆ ಬಂದೆ ಎಂದು ಹೇಳಿ ನಿಂಬಿಯಾ ಹಾಡನ್ನು ಹಾಡಿದ್ದರು.

ಕಫ ತೆಗೆಯುವ ಯಂತ್ರ ತಂದಳು ಉಮ ಹಾಗೂ ಒಬ್ಬರು ನರ್ಸ್‌ನ್ನು ೨೪ ಗಂಟೆ ನೋಡಿಕೊಳ್ಳಲು ನಿಯಮಿಸಿ ಮನೆಗೆ ಕರೆತಂದಳು. ೨೭ರ ಮಧ್ಯಾಹ್ನ ಮಾತನಾಡುತ್ತಲೇ ಮರಣ ಹೊಂದಿದರು.

ವಿಷಯ ತಿಳಿದ ಟಿ.ವಿ.ಯವರು ಪತ್ರಕರ್ತರು ರಾತ್ರಿ ೧೦ಗಂಟೆವರೆಗೂ ಬರುತ್ತಲೇ ಇದ್ದರು. ಮಾಧ್ಯಮಗಳ ಮೂಲಕ ವಿಷಯ ತಿಳಿದ ಬಂಧು ಬಾಂಧವರು, ಸಂಘ – ಸಂಸ್ಥೆಗಳ ಮುಖ್ಯಸ್ಥರು ಬೆಳಗ್ಗೆ ೭ ಗಂಟೆಯಿಂದಲೇ ಮನೆಗೆ ಬರತೊಡಗಿದರು. ಜನಪದ ಅಕಾಡೆಮಿ ಸದಸ್ಯರು, ಸಂಸ್ಕೃತಿ ಇಲಾಖೆ ಸದಸ್ಯರು ಹಾಗೂ ರಾಜ್ಯ ಸರ್ಕಾರದ ಪ್ರತಿನಿಧಿಗಳು ಬಡಾವಣೆಯ ಶಾಸಕರು ಬಂದು ಮತಿಘಟ್ಟ ಕೃಷ್ಣಮೂರ್ತಿ ಅವರಿಗೆ ಗೌರವ ಅರ್ಪಿಸಿದರು. ಮಧ್ಯಾಹ್ನ ಎರಡು ಗಂಟೆ ಹೊತ್ತಿಗೆ ಮತಿಘಟ್ಟ ಕೃಷ್ಣಮೂರ್ತಿ ಪಂಚಭೂತಗಳಲ್ಲಿ ಲೀನರಾದರು.

ಜನಪದ ಜಗತ್ತಿನ ಧ್ರುವತಾರೆಯೊಂದು ದೈಹಿಕವಾಗಿ ಮರೆಯಾದರೂ ತಮ್ಮ ಬರಹ – ಸಂಗ್ರಹ – ಸಂಶೋಧನೆಗಳ ಮೂಲಕ ಚಿರಸ್ಥಾಯಿಯಾಗಿದ್ದಾರೆ. ಜನಪದ ಅಕಾಡೆಮಿಯವರು ಮತಿಘಟ್ಟ ಕೃಷ್ಣಮೂರ್ತಿ ಅವರ 'ಹೊನ್ನಹೊತ್ತಿಗೆ'ಯನ್ನು ಪುನಃ ಮುದ್ರಣ ಮಾಡಿದರು.

ಜಾನಪದಲೋಕ(ಸಿರಿಭುವನ)ದವರು ಮತಿಘಟ್ಟ ಕೃಷ್ಣಮೂರ್ತಿ ಅವರ ವ್ಯಕ್ತಿ ಪರಿಚಯದ ಬಗ್ಗೆ ಪುಸ್ತಕ ಪ್ರಕಟಿಸಿದ್ದಾರೆ.

ಹೊಯ್ಸಳ ಕರ್ನಾಟಕ ಸಂಘದವರು ತಮ್ಮ ಹೊಯ್ಸಳ ಮಾಲೆಯಲ್ಲಿ ಕೃಷ್ಣಮೂರ್ತಿಯವರ ಬಗ್ಗೆ ಜಾನಪದ ತಜ್ಞ ಮತಿಘಟ್ಟ ಕೃಷ್ಣಮೂರ್ತಿ ಎಂಬ ಪುಸ್ತಕ ಹೊರತಂದಿದ್ದಾರೆ.

## ಐ.ಎಸ್. ಕೃಷ್ಣಪ್ಪ
ಉಪನ್ಯಾಸಕರು

(ಸೆಂಟ್ ಫಿಲೋಮಿನಾ ಕಾಲೇಜು, ಹಾಸನ) ಇವರು ಡಾಕ್ಟರೇಟ್‌ಗೆ "ಮತಿಘಟ್ಟ ಕೃಷ್ಣಮೂರ್ತಿ - ಬದುಕು ಬರಹ ಒಂದು ಅಧ್ಯಯನ" ಎಂಬ ವಿಷಯವಾಗಿ ಮಹಾಪ್ರಬಂಧ ಬರೆದಿದ್ದಾರೆ.

## ಮ.ಕೃ. ಅವರ ಪ್ರಕಟಣೆಗಳು

೧. ಪಚ್ಚೇತನೆ (ಕಥೆಗಳು)
೨. ಮರುಗಿ (ಕಾದಂಬರಿ)
೩. ಸರ್ವೋದಯ (ಕಾದಂಬರಿ)
೪. ಗಂಡನ ಪೂಜೆ (ನಾಟಕ)
೫. ಹೊಂಬಾಳೆ (ನಾಟಕ)
೬. ಕಲ್ಯಾಣಿ (ಮೂರು ರೇಡಿಯೋ ನಾಟಕಗಳು)
೭. ಹೊಸಹಳ್ಳಿ - (ನಾಟಕ, ಸರ್ಕಾರದಿಂದ ಬಹುಮಾನಿತ ಕೃತಿ)
೮. ಭರತಪ್ಪನ ಸೊಂಟಕ್ಕೆ ಗಂಟೆ (ನಾಟಕ)
೯. ಪಂಚತಂತ್ರದ ಕಥೆಗಳು
೧೦. ಕಳಸಾಪುರದ ಹುಡುಗರು (ಕಾದಂಬರಿ) ಕನ್ನಡ - ಇಂಗ್ಲೀಷ್
೧೧. ನಾಲ್ಕು ಪತ್ರಗಳು
೧೨. ದೇಶಾಂತರ ನೀತಿ ಕಥೆಗಳು (ಲೆ. ಹೆಚ್.ಆರ್. ರಂಗರಾವ್)
೧೩. ಕನ್ನಡ ಜನಪದ ಮಕ್ಕಳ ಕಥೆಗಳು (ಬಹುಮಾನಿತ ಕೃತಿ)

## ಅಪ್ರಕಟಿತ ಲೇಖನಗಳು

೧. ಜೇನುಗೂಡು- ಮಕ್ಕಳ ನಾಟಕಗಳ ಸಂಗ್ರಹ
೨. ೧೪ ಲಾವಣಿಗಳು
೩. ಗುಣವಂತೆ ಇತ್ಯಾದಿ ೪,೦೦೦ ಜನಪದ ಹಾಡುಗಳು ಸಂಗ್ರಹ
ಕಥೆಗಳ ಸಂಗ್ರಹ, ೧೫೦ ಕಥೆಗಳು

# ವಂಶವೃಕ್ಷ
## ಅರಕಲಗೂಡಿನಿಂದ ಬಂದವರು

| | | | |
|---|---|---|---|
| **ನಂಜಪಯ್ಯ**<br>ಪತ್ನಿ– ಹೆಸರುಗೊತ್ತಿಲ್ಲ | **ಲಿಂಗಣ್ಣಯ್ಯ**<br>ಪತ್ನಿ– ಹೆಸರುಗೊತ್ತಿಲ್ಲ | **ಕೃಷ್ಣಪ್ಪ**<br>ಪತ್ನಿ– ಹೆಸರುಗೊತ್ತಿಲ್ಲ | |

**ಕಪನೀಪತಿ**

ಮತಿಘಟ್ಟ ಶ್ಯಾ. ರಾಮಯ್ಯನವರ ಮಗಳು ಲಕ್ಷ್ಮೀದೇವಿಯನ್ನು ಮದುವೆಯಾಗಿ ಮತಿಘಟ್ಟದಲ್ಲಿ ವಾಸ್ತವ್ಯ

| | | | |
|---|---|---|---|
| **ನಂಜಪಯ್ಯ**<br>ಪತ್ನಿ– ಹೆಸರುಗೊತ್ತಿಲ್ಲ | **ರಾಮಯ್ಯ**<br>ಪತ್ನಿ– ಹೆಸರುಗೊತ್ತಿಲ್ಲ | **ದುದ್ದಪ್ಪ**<br>ಪತ್ನಿ– ಹೆಸರುಗೊತ್ತಿಲ್ಲ | **ಲಿಂಗಣಯ್ಯ**<br>ಪತ್ನಿ– ಚನ್ನಮ್ಮ ಕಳಸಾಪುರ |
| **ಎಲ್. ಗುಂಡಪ್ಪ**<br>ಪತ್ನಿ– ಶಾರದಮ್ಮ ಅಕ್ಕಿಹೆಬ್ಬಾಳು | **ಲಕ್ಷ್ಮೀದೇವಿ**<br>ಪತಿ– ಸುಬ್ಬಾಭಟ್ಟ | **ಮುತ್ತುರಾಮಸ್ವಾಮಿ**<br>ದತ್ತು ದುದ್ದಪ್ಪ<br>ಪತ್ನಿ 1. ವೆಂಕಮ್ಮ<br>2. ಪನ್ನಾತಪುರದ ಗೌರಮ್ಮ | **ಮತಿಘಟ್ಟ ಕೃಷ್ಣಮೂರ್ತಿ**<br>ಪತ್ನಿ– ಲಲಿತಮ್ಮ<br>ಹೆಚ್. ಕೃಷ್ಣಮೂರ್ತಿಯವರ ಮಗಳು<br>ಮಕ್ಕಳು ಮುಂದಿನ<br>ಪುಟದಲ್ಲಿ ವಿವರವಾಗಿದೆ. |

## ಮತಿಘಟ್ಟ ಕೃಷ್ಣಮೂರ್ತಿಯವರ ಸಂಸಾರ (ಕುಟುಂಬ)
## ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಶ್ರೀಮತಿ ಲಲಿತಮ್ಮ ಮತಿಘಟ್ಟ ಕೃಷ್ಣಮೂರ್ತಿ

ಉಮಾದೇವಿ ಎಂ.ಕೆ.

ಉಷಾದೇವಿ ಎಂ.ಕೆ. ನಾರಾಯಣಸ್ವಾಮಿ ಬನವಾಸಿ,

ಮಕ್ಕಳು – ಪೃಥ್ವಿಕುಮಾರ್
ಪ್ರಕೃತಿ ಕುಮಾರ್

ಎಂ. ಕೆ. ರಮಾದೇವಿ, ಜಿ.ಎನ್. ಮೂರ್ತಿ

ಸುಮಾದೇವಿ, ಎಂ.ಕೆ.

ಪ್ರೇಮಾದೇವಿ ಎಂ.ಕೆ. ಶಶಿಧರ,

ಮಕ್ಕಳು – ಎಸ್. ಪರಿಣಿತ.

ಮಂಗಳಾದೇವಿ ಎಂ.ಕೆ ಪಾರ್ಥಸಾರಥಿ

ಮಗ – ಫಲ್ಗುಣ

ಗಿರಿಜಾದೇವಿ, ಶಾಂತಾರಾಂ,

ಮಗ – ಪ್ರಣವ್

ಅಂಜಲೀದೇವಿ ಎಂ.ಕೆ. ಆನಂದತೀರ್ಥ,

ಮಗ – ವಿವೇಕ ಆನಂದ

ನಾಗಲಕ್ಷ್ಮಿ ಎಂ.ಕೆ. ತೀ.ನಂ. ಶಂಕರನಾರಾಯಣ

ಮಕ್ಕಳು – ಅಪರ್ಣ – ಪೂರ್ಣಿಮ

ಲಕ್ಷ್ಮೀದೇವಿ ಎಂ.ಕೆ. ಸುದರ್ಶನ,

ಮಗ – ಪ್ರಜ್ವಲ್ ಎಸ್.

ಎಂ. ಕೆ. ಭಾರತಿ, ಗುರುದತ್ತ

ಮಕ್ಕಳು – ಪೂರ್ವಿ
ಶ್ರೀದತ್ತ


ಮರಿಮಕ್ಕಳು

ಪುರುಜಿತ್ ಸಿರಿ
ತ್ರಿಶಾ ಅವನಿ

## ಮತಿಘಟ್ಟ ಕೃಷ್ಣಮೂರ್ತಿಯವರಿಗೆ ಸಂದ ಪ್ರಶಸ್ತಿ ಹಾಗೂ ಸನ್ಮಾನಗಳು
(ಪ್ರಮುಖವಾದವುಗಳು)

೧. ರವಿಕಲಾವಿದರು, ಚಾಮರಾಜಪೇಟೆ
೨. ಉದಯ ಭಾನು ಕಲಾಸಂಘ, ಬೆಂಗಳೂರು
೩. ಹೊಯ್ಸಳ ಕರ್ನಾಟಕ ಸಂಘ, ಬೆಂಗಳೂರು
೪. ೧೭-೨-೧೯೭೯ – ಜಾನಪದ ಸಮ್ಮೇಳನ, ಮಂಗಳೂರು
೫. ೫-೩-೧೯೯೫ – ಜಾನಪದ ಅಕಾಡೆಮಿ ಪ್ರಶಸ್ತಿ
೬. ೧೯೯೬ – ಅಖಿಲ ಭಾರತ ೬೫ನೇ ಸಮ್ಮೇಳನ ಹಾಸನ
೩ ದಿನಗಳು
೭. ೧೮-೨-೧೯೯೮ – ಮತಿಘಟ್ಟದಲ್ಲಿ ಸನ್ಮಾನ
೮. ೧೨-೬-೧೯೯೮ – ಅಖಿಲ ಭಾರತ ಜಾನಪದ ಸಮಾವೇಶ, ಮೈಸೂರು
ಕರ್ನಾಟಕ ಸರ್ಕಾರ ಸಾ. ಇಲಾಖೆ
೯. ೨೨-೩-೧೯೯೯ – ಆರ್ಯಭಟ ಪ್ರಶಸ್ತಿ
೧೦. ೨೦೦೧ – ಇಂಡಿಯನ್ ಕಲ್ಚರಲ್ ಅಕಾಡೆಮಿ ಟ್ರಸ್ಟ್ (ರಿ.)
೧೧. ೨೭-೩-೨೦೦೧ – ಕರ್ನಾಟಕ ಸಂಘ, ಶಿವಮೊಗ್ಗ
ನಗರ ಜಿಲ್ಲಾ ಸಾಹಿತ್ಯ ಪರಿಷತ್, ಬೆಂಗಳೂರು
೧೨. ೩-೧೦-೨೦೦೨ – ೩ನೇ ತಾಲ್ಲೂಕ್ ಸಾಹಿತ್ಯ ಸಮ್ಮೇಳನ, ಬೇಲೂರು
ಹಾಸನ ಜಿಲ್ಲೆ ಸರ್ವಾಧ್ಯಕ್ಷರು
೧೩. ೧-೧೧-೨೦೦೨ – ಕರ್ನಾಟಕ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ

೧೪. ೨೩-೧-೨೦೦೩ – ಧಾರವಾಡ, ವಿಶ್ವವಿದ್ಯಾಲಯ, ಭದ್ರಾವತಿ,
ಸರ್ವಾಧ್ಯಕ್ಷರು ಸಮಾವೇಶ, ಭದ್ರಾವತಿ
೩ ದಿನದ ಕಾರ್ಯಕ್ರಮ
೧೫. ೯-೩-೨೦೦೩ – ರಾಜ್ಯ ಪ್ರಶಸ್ತಿ
೧೬. ೧೧,೧೨,೧೩-
೧೨-೨೦೦೪ – ಜಾನಪದ ಅಧ್ಯಯನ ವಿಭಾಗ ಕನ್ನಡ ವಿ.ವಿ. ಹಂಪಿ
ಜಿಲ್ಲಾಡಳಿತ ಹಾಸನ
೧೭. – ಜಾನಪದ ಅಕಾಡೆಮಿ ಪ್ರಶಸ್ತಿ, ಬೆಂಗಳೂರು


ಮತಿಘಟ್ಟ ಕೃಷ್ಣಮೂರ್ತಿಯವರ ಹಸ್ತಾಕ್ಷರ

ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ ಹಸ್ತಾಕ್ಷರ



ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರ ತಂದೆ-ತಾಯಿ
ಶ್ರೀ ಮತಿಘಟ್ಟ ಲಿಂಗಣ್ಣಯ್ಯನವರು, ಅವರ ಪತ್ನಿ ಶ್ರೀಮತಿ ಚೆನ್ನಮ್ಮನವರು



ಶ್ರೀ ಬೆಟಗೇರಿಯವರ 80ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಅವರೊಡನೆ
ಶ್ರೀಮತಿ ಉಮಾದೇವಿ, ಶ್ರೀ ಬೆಟಗೇರಿ, ಶ್ರೀ ಮತಿಘಟ್ಟ ಕೃಷ್ಣಮೂರ್ತಿ



ಶ್ರೀಮತಿ ರಾಣಿ ಸತೀಶ್ ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಎಸ್. ಎಂ. ಕೃಷ್ಣ



ತಾ॥ ೧.೧೧.೨೦೦೨ ರಂದು ಕನ್ನಡ ಭವನದಲ್ಲಿ ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಸ್ವಾಗತಿಸುತ್ತಿರುವುದು




65ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಸನ್ಮಾನಿಸುತ್ತಿರುವುದು



ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಚದುರಂಗ ಹಾಗೂ ಶ್ರೀ ಲಕ್ಕಪ್ಪ ಗೌಡರು




29ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು
ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರು ಉದ್ಘಾಟಿಸುತ್ತಿರುವುದು




(ಎಡದಿಂದ ಬಲಕ್ಕೆ)
ಶ್ರೀಮತಿ ಯೋಗಿತಮಧು, ಶ್ರೀ ಸಾಂಗ್ಲಿಯಾನ, ಶ್ರೀ ಪ್ರಕೃತಿ ಬನವಾಸಿ
ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಪ್ರಫುಲ್ಲಮಧು, ಉಮಾದೇವಿ




ಸುಗಮ ಸಂಗೀತ ವಾರ್ಷಿಕೋತ್ಸವದ ಸಂದರ್ಭದಲ್ಲಿ
ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಶ್ರೀ ಪಂಚಮ ಹಳಿಬಂಡಿ, ಶ್ರೀ ಹೆಚ್. ನರಸಿಂಹಯ್ಯನವರು



ಶ್ರೀ ಜೀವರಾಜ್ ಆಳ್ವ, ಲಕ್ಷ್ಮೀದೇವಿ, ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ನಾರಾಯಣ ಬನವಾಸಿ



ಶ್ರೀಮತಿ ರಮಾದೇವಿ, ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀರಂಗ



ಶ್ರೀ ಮತಿಘಟ್ಟ ಕೃಷ್ಣಮೂರ್ತಿ



ಶ್ರೀಮತಿ ಲಲಿತಮ್ಮ ಮತ್ತು ಶ್ರೀ ಮತಿಘಟ್ಟ ಕೃಷ್ಣಮೂರ್ತಿ



ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಮಕ್ಕಳೊಂದಿಗೆ 92ನೇ ಹುಟ್ಟುಹಬ್ಬದಂದು

ದಿ. ಮತಿಘಟ್ಟ ಕೃಷ್ಣಮೂರ್ತಿ ಅವರು ಕರ್ನಾಟಕದ ಶ್ರೇಷ್ಠ ಜಾನಪದ ವಿದ್ವಾಂಸರು. ಕರ್ನಾಟಕದಲ್ಲಿ ಅವರಷ್ಟು ಜಾನಪದ ಗೀತ ಪ್ರಕಾರಗಳ ಸಂಗ್ರಹವನ್ನು ಮಾಡಿದವರು ತೀರಾ ವಿರಳ. ಜಾನಪದ ಸಂಗ್ರಹ, ಸಂಪಾದನೆ, ಪ್ರಕಟಣಾ ಕಾರ್ಯವನ್ನು ತಮ್ಮ ಜೀವನದುದ್ದಕ್ಕೂ ತಪಸ್ಸಾಗಿ ಮಾಡಿದರಲ್ಲದೇ ಕನ್ನಡ ಜಾನಪದ ಸಂರಕ್ಷಣೆ ಸಂವರ್ಧನೆಗೆ ತಮ್ಮನ್ನು ಸಮರ್ಥಿಸಿಕೊಂಡವರು.

ಜಾನಪದ ಪರಿಕಲ್ಪನೆ ಹೊಸದಾಗಿ ಮೂಡುತ್ತಿದ್ದ ಕಾಲದಲ್ಲಿ ಅವರು ಜಾನಪದವನ್ನು ಕ್ಷೇತ್ರಕಾರ್ಯದ ಮೂಲಕ ಶ್ರೀಮಂತ ಗೊಳಿಸಿದರು. ನಮ್ಮ ಹಳ್ಳಿಯ ಹಾಡುಗಳು, ಗೃಹಿಣಿಯರ ಗೀತೆಗಳನ್ನು ಸಾವಿರಕ್ಕೂ ಮೀರಿ ಸಂಗ್ರಹಿಸಿರುತ್ತಾರೆ.

ತರೀಕೆರೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ ಕರ್ನಾಟಕ ಜಾನಪದ ಅಕಾಡೆಮಿ ಆಗಲು ಶ್ರಮಿಸಿದವರಲ್ಲಿ ಇವರು ಒಬ್ಬರು.

ಜಾನಪದವನ್ನು ತಮ್ಮ ಬದುಕಿನ ಅಂಗವಾಗಿಸಿ, ಹೆಚ್ಚು ಪ್ರಚಾರಗೊಳಿಸಿ ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿದ್ದಾರೆ.

**ಡಾ. ಬಾನಂದೂರುಕೆಂಪಯ್ಯ**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ

**ಕರ್ನಾಟಕ ಜಾನಪದ ಅಕಾಡೆಮಿ**
ಬೆಂಗಳೂರು